(SRI T. G. THIMME GOWDA).

received from the raiyats for raising the stone ane situated near Harikaranahalli, Dandinashivarada Hobli, Turuvekere Taluk:

(b) the action taken by them in this matter;

(c) whether it has come to their notice that the water stored in the anecut is insufficient for cultivation;

(d) whether they had been previously informed of the fact that if the P.W.D. were to raise this ane there would be water supply for cultivation to a distance of 4-5 miles?

A.— Sri H. M. CHANNABASAPPA (Minister for Industries).—

(a) Yes.

(b) The proposal was examined and dropped.

(c) As this is only an ane, there can be no storage of water for irrigation. Irrigation under the anecut depends upon the flow in the river.

(d) No.

Harijans, Hoskote Taluk (Applications for House Building Grant)

Q.—588. Srimathi LAKSHMIDEVI-RAMANNA (Hoskote—Anekal).—

Will the Government be pleased to state:—

(a) the number of applications received every year from Hoskote Taluk requesting for the grant of aid to construct houses for Harijans since the last two years;

(b) out of the above said applicants the number of applicants to whom aid has been given every year;

(c) the amount spent annually in this behalf?

A.—Sri K. HANUMANTHAIYA (Chief Minister).—

(a)	1953-54	1954-55
	407	352
(b)	1953-54	1954-55
	58	85
(c)	1953-54	1954-55
	Rs. 17,400	Rs. 21,500

Mr. SPEAKER.—Question time is over.

The House adjourned for Lunch at Three Minutes past Ten of the Clock and reassembled at Thirty-five Minutes past Ten of the Clock.

[MR. SPEAKER in the Chair.]

PAPERS LAID ON THE TABLE

Sri H. M. CHANNABASAPPA (Minister for Industries).—Sir. I beg to lay on the Table of the House the recommendations of the Estimates Committee and action taken thereon in respect of the second report. (Copy placed in Legislature Library, *vide* No. 15—L.A., dated 31st March 1956).

Sri B. V. NARAYANA REDDY.—Will there be any extension of the session?

Mr. SPEAKER.—I will make a statement on that on Monday.

THE STATES REORGANIZATION BILL, 1956.

Motion to consider.

Sri K. HANUMANTHAIYA (Chief Minister).—Sir, I beg to move:

"That the States Reorganization Bill, 1956, referred by the President under article 3 of the Constitution, be taken into consideration."

ಸ್ವಾಮಿ, ಸಂಸ್ಥಾನಗಳ ಪುನರ್‌ವ್ಯವಸ್ಥೆಯ ಮಾರ್ಗದಲ್ಲಿ ನಾವುಗಳು ಇಂದು ಎರಡನೆಯ ಘಟ್ಟವನ್ನು ಮುಟ್ಟಿದ್ದೇವೆ. ಕೆಲವು ತಿಂಗಳ ಹಿಂದೆ ಈ ಸಭೆ ಈ ವಿಷಯವನ್ನು ವಿಪುಲವಾಗಿ ಚರ್ಚೆಮಾಡಿ ಒಂದು ತೀರ್ಮಾನವನ್ನು ಅಂಗೀಕರಿಸಿತು. ಮೈಸೂರು ಸಂಸ್ಥಾನ ವಿಸ್ತಾರದಲ್ಲಿ ದ್ವಿಗುಣವಾಗಿ ಪರಿಣಮಿಸಬೇಕು ಮತ್ತು ವಿವಾದದಲ್ಲಿರತಕ್ಕಂಥ ಕೆಲವು ಸ್ಥಳಗಳು ಮೈಸೂರಿನಲ್ಲೇ ಉಳಿಯಬೇಕು. ಇವೆರಡು ತೀರ್ಮಾನಗಳೂ ಬಹಳ ಮುಖ್ಯವಾದವು. ಮತ್ತೊಂದು ತೀರ್ಮಾನ "ಮೈಸೂರು" ಎಂಬ ಹೆಸರು ಮುಂದುವರಿಯಬೇಕೆಂಬುದು. ಈ ಮೂರು ವಿಷಯಗಳಲ್ಲೂ ಕೂಡ ಕೇಂದ್ರ ಸರ್ಕಾರದವರು ಈ ಸಭೆಯ ಅಭಿಪ್ರಾಯಕ್ಕೆ ಮನ್ನಣೆ ಕೊಟ್ಟಿದ್ದಾರೆ. ಇದು ಬಹಳ ಸಂತೋಷದ

ಸಂಗತಿ. ಬಳ್ಳಾರಿಯ ನಾಲ್ಕು ತಾಲ್ಲೂಕುಗಳ ವಿಚಾರದಲ್ಲಿ ಬಹಳವಾಗಿ ಚರ್ಚೆ ಎದ್ದು ವಿಪರೀತವಾದ ವಿವಾದಕ್ಕೆ ಅವಕಾಶವಾಯಿತು. ಈ ಸಭೆಯವರಾದರೋ ಆ ಪ್ರಶ್ನೆಯನ್ನು ಒಂದು ನೈತಿಕ ದೃಷ್ಟಿಯಿಂದ ಪರಿಶೀಲಿಸಿದರೇ ಹೊರತು ಒಂದು ರಾಜ್ಯದ ದಾಹದಿಂದ ಅಲ್ಲ. ನೈತಿಕ ನೀತಿಗೆ ಜಯ ದೊರೆಯತಕ್ಕದ್ದು ಖಂಡಿತ ಎನ್ನುವುದಕ್ಕೆ ಇದು ನಿದರ್ಶನ. ಈ ದಿವಸ ಹಿಂದೆ ಈ ಸಭೆ ಯಾವ ತೀರ್ಮಾನಗಳನ್ನು ಮಾಡಿತೋ ಆ ತೀರ್ಮಾನವನ್ನೊಳಗೊಂಡ ಮಸೂದೆ ನಮ್ಮ ಮುಂದೆ ಪುನಃ ಕಾನೂನು ಪ್ರಕಾರ ಅಭಿಪ್ರಾಯಕ್ಕೆ ಬಂದಿದೆ. ಹಿಂದೆ ಯಾವ ತತ್ವವನ್ನು ಒಪ್ಪಿಕೊಳ್ಳಬೇಕೆಂದು ಹೇಳಿ ಪ್ರತಿಪಾದಿಸಿ ದೊಡ್ಡ ಭಾಷಣವನ್ನು ನಾನು ಮಾಡಿದೆನೋ ಅದು ಇಂದು ಅನಾವಶ್ಯಕ. ಇಂದು ಉದ್ಭವಿಸಿರತಕ್ಕದ್ದು ಒಂದು ಹೊಸ ಪ್ರಶ್ನೆ. ಈ ಸಭೆ ಎಸ್.ಆರ್.ಸಿ. ಶಿಫಾರಿಸಿನ ಮೇಲೆ ತೀರ್ಮಾನ ತೆಗೆದುಕೊಂಡಮೇಲೆ ಪ್ರಾಂತಗಳ ಪುನರ್‌ವ್ಯವಸ್ಥೆ ಮತ್ತಷ್ಟು ದೊಡ್ಡ ಪ್ರಮಾಣದಲ್ಲಿ ಆಗಬೇಕು ಎನ್ನತಕ್ಕ ಸಲಹೆ ಇಂಡಿಯಾ ದೇಶದಲ್ಲೆಲ್ಲಾ ಚರ್ಚಿಸಲ್ಪಟ್ಟಿದೆ. ಈ ಅಭಿಪ್ರಾಯವನ್ನು ಪ್ರತಿಪಾದಿಸುವವರಾದರೂ ಕೂಡ ಪ್ರೈಮ್ ಮಿನಿಸ್ಟರು ಮತ್ತು ಇಂಡಿಯಾ ಸರ್ಕಾರದ ಮಂತ್ರಿಗಳು. ಈ ವಿಷಯದಲ್ಲಿ ಚರ್ಚೆ ದೇಶದಲ್ಲೆಲ್ಲಾ ಬಹಳವಾಗಿ ನಡೆಯಿತು. ಬಂಗಾಳ, ಬಿಹಾರ ಈ ಎರಡು ಸಂಸ್ಥಾನಗಳೂ ಕೂಡ ಆ ನೀತಿಗನುಗುಣವಾಗಿ ಒಂದಾಗುತ್ತೇವೆ ಎಂದು ಹೇಳತಕ್ಕ ಘೋಷಣೆಯನ್ನು ಹೊರಡಿಸಿದವು. ಅವರಿಬ್ಬರಿಗೂ ದೇಶದ ಎಲ್ಲಕಡೆಗಳಿಂದಲೂ ಅಭಿನಂದನೆಗಳು ಅರ್ಪಿಸಲ್ಪಟ್ಟವು. ಇಂದು ನೋಡಿದರೆ ಆ ಘೋಷಣೆಯ ಬಿಗಿ ಬಹಳ ಸಡಿಲವಾಗಿ ಹೋಗಿದೆ. ಒಂದೇ ಮನಸ್ಸಿನಿಂದ ಹೊರಟ ಈ ಘೋಷಣೆಗೆ ಈಗ ಹತ್ತಾರು ಆತಂಕಗಳು; ಅದರ ಪ್ರಭಾವವು ಈಗ ಕಡಮೆಯಾಗಿದೆ. "ದಕ್ಷಿಣ ಪ್ರದೇಶ" ಎನ್ನತಕ್ಕದ್ದನ್ನು ದಕ್ಷಿಣ ಭಾರತದಲ್ಲಿ ರಚಿಸುವುದು ಸೂಕ್ತ ಎಂದು ಹೇಳಿ ಆ ಮುಖಂಡರುಗಳೇ ದೇಶಕ್ಕೆ ಬುದ್ಧಿವಾದವನ್ನು ಹೇಳಿದರು. ದಕ್ಷಿಣ ಇಂಡಿಯಾ ದೇಶದಲ್ಲೂ ಸಂಬಂಧಪಟ್ಟ ಮಂತ್ರಿಗಳು, ಮುಖ್ಯ ಮಂತ್ರಿಗಳು ಮತ್ತು ಮುಖಂಡರು ಪರ್ಯಾಲೋಚನೆ ಮಾಡಿದರು. ಪರ್ಯಾಲೋಚನೆ ಮಾಡುತ್ತಾ ಮಾಡುತ್ತಾ ಅದರ ಪ್ರಾಮುಖ್ಯತೆಯು ಕೂಡ ಕಡಿಮೆಯಾಗುತ್ತಾ ಇರುವುದು ನಮ್ಮೆಲ್ಲರ ಕಣ್ಣಿಗೂ ಕಟ್ಟಿದ ಹಾಗೆ ಕಾಣುತ್ತಾ ಇದೆ. ಯಾವ ಒಂದು ಸಮಸ್ಯೆಯಾಗಲಿ ಅದು ಒಳ್ಳೆಯದಾಗಿರಬೇಕು. ಆದರೆ ಜನಗಳ ಬೆಂಬಲವನ್ನು ಅದು ಪಡೆಯದೇ ಇದ್ದರೆ ಅದು ಕಾರ್ಯರೂಪಕ್ಕೆ ಬರಲು ಸಾಧ್ಯವಾಗುವುದಿಲ್ಲ. ದಕ್ಷಿಣ ಇಂಡಿಯಾ ದೇಶದಲ್ಲಿರತಕ್ಕ ಸಂಸ್ಥಾನಗಳು, ಎರಡಾಗಲಿ, ಮೂರಾಗಲಿ, ನಾಲ್ಕಾಗಲಿ ಸೇರಿ ಒಂದು ಸಂಸ್ಥಾನ ಆಗಬೇಕು ಎನ್ನತಕ್ಕ ವಾದ, ಅದು ಸರಿಯಾದ ವಾದ ಅಲ್ಲ ಎಂದು ಹೇಳುವುದಕ್ಕಾಗುವುದಿಲ್ಲ.

ನಾನಾದರೋ ಹಿಂದಿನಿಂದಲೂ ಒಂದೇ ಸ್ಪಷ್ಟವಾದ ನೀತಿಯನ್ನು ಪ್ರತಿಪಾದಿಸಿಕೊಂಡು ಬಂದಿದ್ದೇನೆ. ಆ ನೀತಿ ನನ್ನ ಮನಸ್ಸಿನಲ್ಲಿ ರೂಪಿತವಾಗಿದ್ದುದು ಯಾರ ಹೆದರಿಕೆಯಿಂದಲೂ ಅಲ್ಲ. ಅಥವಾ ಯಾರ ಉತ್ತೇಜನದಿಂದಲೂ ಅಲ್ಲ. ಸ್ವಾಭಾವಿಕವಾಗಿ ದೇಶದ ಹಿತಚಿಂತನೆಯಿಂದ ಮನಸ್ಸಿನಲ್ಲಿ ಹುಟ್ಟಿದ ಯೋಚನೆ. ಈ ಸಭೆಯಲಿ ನಾನು ಅದನ್ನು ಅನೇಕಸಲ ಹೇಳಿದ್ದೇನೆ, ಮಿಕ್ಕ ರಾಜಕೀಯ ತತ್ವಗಳು ಯಾವುವೂ ಬೇಡ. ದೊಡ್ಡ ದೊಡ್ಡ ಶಾಸ್ತ್ರಗಳ ಮಾತುಗಳೂ ಬೇಡ, ಸಾಧಾರಣವಾಗಿ ಕೆಲವು ಅತಿಥಿಗಳು ಮನೆಗೆ ಬಂದರೆ "ನೀವು ಬರಬಾರದು" ಎಂದು ಹೇಳಿ ಬಾಗಿಲು ಮುಚ್ಚಿಕೊಳ್ಳತಕ್ಕದ್ದು ಯಾವ ರೀತಿ ಸಜ್ಜನರ ಲಕ್ಷಣವಲ್ಲವೋ ಅದೇ ರೀತಿ ನಮ್ಮ ಸಂಸ್ಥಾನಕ್ಕೆ ಅಕ್ಕಪಕ್ಕದ ಪ್ರಾಂತ್ಯಗಳ ಜನರು ಬರುತ್ತೇವೆ ಎಂದು ಹೇಳಿದರೆ ಬೇಡ ಎನ್ನುವುದು ಅಷ್ಟೇ ಅಸಂಸ್ಕೃತಿಯ ಮಾರ್ಗ ಎಂದು ಹೇಳಿದೆ. ಈ ದಿವಸವೂ ಹೇಳತಕ್ಕದ್ದು ಅಷ್ಟೆ. ಅಕ್ಕಪಕ್ಕದ ಪ್ರದೇಶದ ಜನರು ಹಿಂದೆ ಹೈದರಾಬಾದು ಕನ್ನಡಿಗರಾಗಿರಬಹುದು, ಬೊಂಬಾಯಿ ಕರ್ಣಾಟಕದವರಾಗಿರಬಹುದು, ಕೊಡಗಿನವರಾಗಿರಬಹುದು ; ಇಂದು ಕೇರಳದವರು, ತಮಿಳುನಾಡಿನವರು, ಆಂಧ್ರರು ಮೈಸೂರಿನ ಜೊತೆಯಲ್ಲಿ ನಾವು ಸೇರಿಕೊಂಡು ಮತ್ತೊಂದು ದೊಡ್ಡ ಒಟ್ಟು ಕುಟುಂಬ ಮಾಡುತ್ತೇವೆ ಎಂದು ಅವರು ಹೇಳಿದರೆ ಅದನ್ನು ಬೇಡ ಎನ್ನತಕ್ಕದು. ಸರಿಯಾದ ದೇಶಾಭಿಮಾನವನ್ನು ತೋರಿಸಿದಂತಾಗಲಿಲ್ಲ ಎಂದು ನಿಸ್ಸಂಕೋಚವಾಗಿ ಹೇಳುತ್ತೇನೆ.

ಧಾರವಾಡದ ಕನ್ನಡಿಗರು, ಬೊಂಬಾಯಿ ಕನ್ನಡಿಗರು, ಹೈದರಾಬಾದಿನ ಕನ್ನಡಿಗರು, ಕೊಡಗಿನ ಕನ್ನಡಿಗರು, ದಕ್ಷಿಣ ಕನ್ನಡ ಜಿಲ್ಲೆಯ ಕನ್ನಡಿಗರು ಇವರು ಯಾವ ರೀತಿ ಭಾರತೀಯರೋ ಅದೇ ರೀತಿ ಭಾರತೀಯರು ಕೇರಳ, ತಮಿಳುನಾಡಿನಲ್ಲಿರತಕ್ಕವರು ಮತ್ತು ಆಂಧ್ರದಲ್ಲಿರತಕ್ಕವರು. ಇವರನ್ನು ಯಾರಾದರೂ ಸೇರಿಸಿಕೊಳ್ಳುವುದಕ್ಕೆ ಹಿಂಜರಿದರೆ ಆ ಮನಸ್ಸು ಸಂಕುಚಿತವಾದ ಮನಸ್ಸು ಎಂದು ನಿರ್ಧರವಾಗಿ ಹೇಳಬಹುದು. ಒಬ್ಬನಿಗೆ ಮನಸ್ಸಿನ ಸಂಕುಚಿತತ್ವವನ್ನು ಆರೋಪಣೆ ಮಾಡತಕ್ಕವರು ತಮ್ಮ ಮನಸ್ಸು ವಿಶಾಲವಾಗಿದೆಯೋ ಎಂದು ಪರಿಶೀಲನೆ ಮಾಡಿ ಮನಸ್ಸನ್ನು ಶೋಧಿಸಿ ಮಾತನಾಡಬೇಕು. ಆದುದರಿಂದ ಇಂಡಿಯಾ ದೇಶದ ಪ್ರಜೆಗಳಾಗಿರತಕ್ಕ ನಾವು ಎಲ್ಲ ದೃಷ್ಟಿಯಿಂದಲೂ ಭಾರತೀಯರು ಎಂದು ಪರಿಗಣಿಸಿ, ಭಾವಿಸಿ, ನಡೆಯುತ್ತಾ ಇರತಕ್ಕ ಕಾಲದಲ್ಲಿ ಒಂದು ಪ್ರಾಂತದ ಜನರು ಬೇರೆ, ಮತ್ತೊಂದು ಪ್ರಾಂತದ ಜನರು ಬೇರೆ ಎಂದು ವಾದಿಸತಕ್ಕದು ಆ Indian citizenship (ಭಾರತದ ಪ್ರಜೆ) ಎನ್ನತಕ್ಕ ಸದ್ಭಾವನೆಗೆ ವಿರುದ್ಧವಾಗಿದೆ. ಆದರೆ ಇದು ಎಲ್ಲರೂ ಒಪ್ಪತಕ್ಕ ವಿಷಯ. ಈ ಒಂದು ದಾರಿ ಏನಿದೆಯೋ ಆ ದಾರಿ ಸರಿಯಾದುದ್ದಲ್ಲವೆಂದು ಹೇಳತಕ್ಕ ಮಾನ್ಯ ಸದಸ್ಯರು ಈ ಸಭೆಯಲ್ಲಿ ಒಬ್ಬರಾದರೂ ಇಲ್ಲವೆಂದು ನನಗೆ ನಂಬಿಕೆ ಇದೆ. ವಿವಾದ ಬರತಕ್ಕದ್ದು ಎರಡನೆ ಘಟ್ಟದಲ್ಲಿ:— ಸೇರಿಕೊಳ್ಳುವಾಗ ಯಾರಾದರೂ ಒಬ್ಬರು ನಾವು ಮೈಸೂರಿನ ಜೊತೆಗೆ ಸೇರುವುದಿಲ್ಲವೆಂದರೆ ಅವರನ್ನು ಬಲಾತ್ಕಾರ ಮಾಡುವುದಕ್ಕಾಗುವುದಿಲ್ಲ. ಸ್ವಾಭಾವಿಕವಾಗಿ, ಸಹಜವಾಗಿ, ಪ್ರೀತಿಯಿಂದ ಸ್ವಾಗತಿಸುವುದು ನಮ್ಮ ಕರ್ತವ್ಯವೇ ಹೊರತು ಮನಸ್ಸಿಲ್ಲದಿರುವವರನ್ನು ಒತ್ತಾಯ ಮಾಡಿ ಯಾವ ಪ್ರಾಂತಕ್ಕೇ ಆಗಲಿ, ಯಾವ ಸಂಸ್ಥಾನಕ್ಕೇ ಆಗಲಿ ಸೇರಿಸುವುದಕ್ಕಾಗುವುದಿಲ್ಲ. ಇರತಕ್ಕ ನಿಜವಾದ ಕಷ್ಟ ಅಲ್ಲ. ನಮ್ಮ ಸುತ್ತಮುತ್ತಲೂ ಇರತಕ್ಕ ಪ್ರದೇಶಗಳನ್ನು ತೆಗೆದುಕೊಳ್ಳೋಣ. ನಾನು ಮದರಾಸು ಅಸೆಂಬ್ಲಿಯಲ್ಲಿ ಯಾವ ರೀತಿ ವಾದ ನಡೆಯುತ್ತಿದೆ ಎನ್ನುವುದನ್ನು ಬಹಳ ಕಾದು ನೋಡುತ್ತಿದ್ದೇನೆ. ನಾವು ಈ ಪರಿಸ್ಥಿತಿಯನ್ನು ಎಷ್ಟೇ ಯೋಚನೆ ಮಾಡಿದರೂ ಕೂಡ, ಈ picture ನಲ್ಲಿ, ಮದರಾಸು ಸಂಸ್ಥಾನದ ಪಾತ್ರ ಬಹಳ ಮುಖ್ಯವಾದ ಪಾತ್ರ. ಮದರಾಸಿನ ಫೈನಾನ್ಸ್ ಮಿನಿಸ್ಟರ್‌ರವರು ಈ S.R. ಬಿಲ್ಲನ್ನು ಪ್ರತಿಪಾದಿಸುತ್ತಿರುವಾಗ ಸ್ಪಷ್ಟವಾಗಿ ಹೇಳಿದ್ದಾರೆ. ಹಿಂದೆ ಅವರೇ ದಕ್ಷಿಣ ಪ್ರದೇಶವಾಗತಕ್ಕದ್ದು ಸೂಕ್ತ, ಸರಿಯಾದದ್ದು ಎಂದು ಬಹಳ ಹೇಳಿಕೆಗಳನ್ನು ಕೊಟ್ಟ

(SRI K. HANUMANTHAIYA.)

ದ್ವಾರೆ, ಭಾಷಣಗಳನ್ನು ಮಾಡಿದ್ದಾರೆ, ದೇಶದ ಅಭಿಪ್ರಾಯವನ್ನು ಅಳೆದಿದ್ದಾರೆ. ಅನಂತರ ಅವರೇ ಅಸೆಂಬ್ಲಿಯಲ್ಲಿ 'ದಕ್ಷಿಣ ಭಾರತ'ದ ಸೃಷ್ಟಿಯಾಗಬೇಕೆಂಬ ಸೂಚನೆ ಏನಿದೆಯೋ, ಅದು ಜನಾನುರಾಗಿಯಾಗಿಲ್ಲ, ಅದನ್ನು ಕಾರ್ಯಗತ ಮಾಡುವುದು ಕಷ್ಟ ಎನ್ನತಕ್ಕ ಪದಗಳನ್ನು ಪ್ರಯೋಗ ಮಾಡಿದ್ದಾರೆ. He has said, "It is neither popular nor practicable." That is the hard fact that faces us from Madras. ಅದರಲ್ಲಿ ತಮಗೆ ಗೊತ್ತಿರುವ ಹಾಗೆ, ಅಲ್ಲಿನ ಮಂತ್ರಿ ಮಂಡಳದಲ್ಲಿ ಮತ್ತು ಶಾಸನ ಸಭೆಗಳಲ್ಲಿ ಭಿನ್ನಾಭಿಪ್ರಾಯವಿದ್ದು, ಯಾರು ದಕ್ಷಿಣ ಪ್ರದೇಶಕ್ಕೆ ಪರವಾಗಿದ್ದರೋ ಅವರೇ ಈ ವಾದ ಸರಣಿಯನ್ನು ಹೂಡಿದರೆ ನಾವು ವಿಚಾರದಲ್ಲಿ ಹೇಗೆ ವರ್ತಿಸಬೇಕು ಎನ್ನತಕ್ಕದನ್ನು ಆಲೋಚನೆ ಮಾಡಬೇಕು. ಇನ್ನು ತಿರು-ಕೊಚ್ಚಿ ವಿಷಯವನ್ನು ಪ್ರಸ್ತಾಪ ಮಾಡಿದರೆ ತಿರು-ಕೊಚ್ಚಿ ಮಂತ್ರಿ ಮಂಡಳದವರೂ, ಕಾಂಗ್ರೆಸ್ ಸಂಸ್ಥೆಯವರೂ ಮೈಸೂರಿನ ಜೊತೆಗೆ ಸೇರಿಕೊಳ್ಳುವುದಕ್ಕೆ ಅಥವಾ ಎರಡು ಮೂರು ಪ್ರಾಂತಗಳಿಂದ ಕೂಡಿದ ದೊಡ್ಡ ಪ್ರಾಂತವನ್ನು, ಎಂದರೆ, ದಕ್ಷಿಣ ಪ್ರದೇಶವನ್ನು ಮಾಡುವುದಕ್ಕೆ ಸಿದ್ಧರಾಗಿದ್ದರು, ಒಪ್ಪಿದರು, ಅದೇನೂ ಗುಟ್ಟಿನ ಮಾತಲ್ಲ. ಈ ದಿವಸದ ಪರಿಸ್ಥಿತಿ ಏನಾಗಿದೆ ಎಂದರೆ ಯಾರು ಯಾರು ಈ ವಾದಕ್ಕೆ ಒಪ್ಪಿ ಕಾರ್ಯೋನ್ಮುಖರಾಗಿದ್ದರೋ ಅವರು ದುರದೃಷ್ಟವಶಾತ್ ಪದಚ್ಯುತರಾಗಿದ್ದಾರೆ; ಅಲ್ಲಿ ಶಾಸನ ಸಭೆಗಳಿಲ್ಲ. ರಾಜಕೀಯ ದೃಷ್ಟಿಯಿಂದ ನೋಡಿದರೆ ಕೇರಳ ಕೇರಳವಾಗಿಯೇ ಉಳಿಯಬೇಕು ಎನ್ನತಕ್ಕವರ ಅಭಿಪ್ರಾಯ ಬಹುಮತವಾಗಿದ್ದ ಹಾಗೆ ಕಾಣುತ್ತದೆ. ಬಹುಮತವೆನ್ನತಕ್ಕದನ್ನು majority ಎನ್ನುವ ಅರ್ಥದಲ್ಲಿ ಉಪಯೋಗಿಸುತ್ತೇನೆ. Majority ಸ್ವಲ್ಪ ಮಾತ್ರ ಏರಬಹುದು; ಬಹು ಸಂಖ್ಯೆಯಲ್ಲಿಲ್ಲದೆ ಇರಬಹುದು. ಆದರೆ ಕೇರಳ ಪ್ರಾಂತ ಮತ್ತೊಂದು ಸಂಸ್ಥಾನದೊಡನೆ ಸೇರಿ ದೊಡ್ಡ ದ್ವಿಭಾಷಾ ಅಥವಾ ತ್ರಿಭಾಷಾ ಪ್ರಾಂತವಾಗಬೇಕು ಎನ್ನತಕ್ಕವರ ಅಭಿಪ್ರಾಯಕ್ಕೆ ಎಷ್ಟು ಬಲ, ಶಕ್ತಿ, ಒತ್ತಾಯ ಇರಬೇಕೋ ಅಷ್ಟು ಇದ್ದಹಾಗೆ ನನಗೆ ಕಾಣುವುದಿಲ್ಲ. ಇನ್ನು ಉಳಿದಿರತಕ್ಕದ್ದು ಆಂಧ್ರ ಪ್ರಾಂತ. ಈ ಮಹತ್ವಪ್ರಶ್ನೆಯಲ್ಲಿ ಈ ಸಭಾಸದಸ್ಯರಿಗೆ ಎಲ್ಲ ವಿಷಯಗಳನ್ನೂ ತಿಳಿಸಬೇಕಾದದ್ದು ನನ್ನ ಕರ್ತವ್ಯ. ನಾನಾದರೂ ಈ ವಿಚಾರದಲ್ಲಿ ತಟಸ್ಥನಾಗದೆ ಅವರೊಡನೆ ಸಮಾಲೋಚನೆ ಮಾಡಿದ್ದೇನೆ. ಸಮಾಲೋಚನೆ ಮಾಡಿದ್ದರ ಫಲವಾಗಿ ಆಂಧ್ರ ನಾಯಕರುಗಳು ಈ ಒಂದು ದೊಡ್ಡ ದ್ವಿಭಾಷಾ, ಅಥವಾ ತ್ರಿಭಾಷಾ ಪ್ರಾಂತವನ್ನು ಸ್ಥಾಪನೆ ಮಾಡೋಣವೆನ್ನುವ ಸೂಚನೆಗೆ ಅಷ್ಟಾಗಿ ಮನಸ್ಸನ್ನು ಕೊಡಲಿಲ್ಲ. ಸಾರ್ವಜನಿಕವಾಗಿಯೂ ಕೂಡ ಮೈಸೂರು ಮತ್ತು ಆಂಧ್ರ ಜೊತೆಗೆ ಸೇರಿಕೊಂಡು ಒಂದು ಸಂಸ್ಥಾನವಾಗಬೇಕು ಎನ್ನತಕ್ಕ ಸೂಚನೆಯನ್ನು ಅವರು ಇತ್ತಿಲ್ಲ. ಆದರೆ ಕೆಲವರು ಅಲ್ಲೊಬ್ಬರು ಇಲ್ಲೊಬ್ಬರು ಹೇಳಿದ್ದಾರೆ ಎಂದು ಮಾತ್ರ ಹೇಳಬಹುದು. ಹಾಗೆ ಹೇಳಿರತಕ್ಕ ಉದಾಹರಣೆಗಳೂ ಇವೆ. ಆದರೆ ನಾವು ಈ ದಿವಸ ಕಾನೂನುಬದ್ಧವಾಗಿ, ಅಧಿಕಾರಯುತವಾಗಿ ಚರ್ಚೆ ಮಾಡುತ್ತಿರುವಾಗ ಆ ಮಟ್ಟದಲ್ಲಿ ಅಭಿಪ್ರಾಯಗಳು ಬಂದಿದೆಯೇ ಎನ್ನುವುದನ್ನು ಪರಿಶೀಲನೆ ಮಾಡಬೇಕು. ಶಾಸನ ಸಭೆಗಳಲ್ಲಿ ಆ ಅಭಿಪ್ರಾಯ ಬಂದಿದೆಯೇ, ಮಂತ್ರಿ ಮಂಡಲದಲ್ಲಿ ಆ ಅಭಿಪ್ರಾಯ ಹೊರಪಟ್ಟಿದೆಯೇ, ಆಂಧ್ರ ಪ್ರೊವಿನ್ಷಿಯಲ್ ಕಾಂಗ್ರೆಸ್ ಕಮಿಟಿಯಲ್ಲಿ ಆ ಅಭಿಪ್ರಾಯ ರೂಪ ತಾಳಿದೆಯೇ, ಅಲ್ಲಿರತಕ್ಕ ಇತರ ರಾಜಕೀಯ ಪಕ್ಷಗಳು ಈ ವಿಚಾರದಲ್ಲಿ ಬೆಂಬಲ ಕೊಟ್ಟಿವೆಯೇ ಎನ್ನತಕ್ಕದ್ದನ್ನು ಪರಿಶೀಲನೆ ಮಾಡಬೇಕು. ಆ ರೀತಿ ನೋಡಿದ್ದರಲ್ಲಿ ಅಧಿಕೃತವಾದ ಪ್ರತಿನಿಧಿಯುತವಾದ ಪ್ರಜಾಭಿಪ್ರಾಯ ಈ ವಿಷಯದಲ್ಲಿ ಹೊರಪಟ್ಟಹಾಗೆ ನನಗೆ ಕಾಣುವುದಿಲ್ಲ. ಆದುದರಿಂದ ಇತರರನ್ನು ಸ್ವಾಗತಿಸುವುದಕ್ಕೆ ಸ್ವಾಭಾವಿಕವಾಗಿರತಕ್ಕ ಸತ್ಸಂಪ್ರದಾಯವನ್ನು ಹಾಕಿರತಕ್ಕ ಈ ಸಭೆಯವರು ಆ ಸತ್ಸಂಪ್ರದಾಯದ ಮಾರ್ಗದಲ್ಲಿ ನಡೆದುಕೊಂಡು ಹೋಗತಕ್ಕದ್ದು ಶ್ರೇಯಸ್ಕರ. ನಾವು ಈ ವಿಷಯದಲ್ಲಿ ಒತ್ತಾಯವನ್ನು ಮಾಡತಕ್ಕದ್ದು ಸರಿಯಲ್ಲವೆನ್ನತಕ್ಕದ್ದನ್ನು ಎಲ್ಲರೂ ಒಪ್ಪಿಕೊಳ್ಳುತ್ತೇವೆ. ಕೆಲವರು ಹೇಳಬಹುದು ತೆರೆದ ಬಾಗಿಲನ್ನು ಮುಚ್ಚದೆ ಯಾವ ರೀತಿ ಹೇಳಿದೆಯೋ ಹಾಗೆ ತೆರೆದಿರೋಣವೆಂದು. ಅದು ನ್ಯಾಯವಾದ ಸೂಚನೆ, ಸರ್ವ ಸಮ್ಮತವಾದ ಸೂಚನೆ. ಅಧಿಕೃತವಾಗಿ ಶಾಸನಸಭೆಯಿಂದ ತಿರು-ಕೊಚ್ಚಿ ಪ್ರಾಂತದವರಾಗಲಿ, ಮದರಾಸು ಪ್ರಾಂತದವರಾಗಲಿ, ಆಂಧ್ರ ಪ್ರಾಂತದವರಾಗಲಿ, ಎಲ್ಲರೂ ಒಪ್ಪಿ ಒಂದು ದೊಡ್ಡ ಪ್ರಾಂತವನ್ನು ದೇಶದ ಹಿತ ದೃಷ್ಟಿಯಿಂದ ಮಾಡೋಣವೆಂದು ಹೇಳಿದರೆ ಆ ಸೂಚನೆಯ ವಿಷಯದಲ್ಲಿ ನಾವು ಸರ್ವಥಾ ತೆರದ ಮನಸ್ಸು ತೆರೆದ ಬಾಗಿಲು ಇಟ್ಟುಕೊಂಡಿರತಕ್ಕವರಾಗಿರತಕ್ಕದ್ದು ಒಳ್ಳೆಯದು. ಈ ವಿಷಯದಲ್ಲಿ ನಾನು ಪುನಃ ಪುನಃ ಪ್ರಾರ್ಥಿಸಿ ಹೇಳಿಕೊಳ್ಳುತ್ತೇನೆ. ಇದು ಬಹಳ ವಿವಾದಯುತ ಪ್ರಶ್ನೆ. ಈ ಪ್ರಶ್ನೆಯಲ್ಲಿ ನನ್ನ ಅಭಿಪ್ರಾಯವೇ ಸರಿ ಎಂದು ಯಾರು ವಾದಿಸುವುದಕ್ಕೆ ಹೋಗುತ್ತಾರೆಯೋ ಅವರು ದೇಶದಲ್ಲಿ ಶಾಂತಿ ಸೌಹಾರ್ದಗಳಿಗೆ ಸಹಾಯ ಮಾಡಿದಂತಾಗುವುದಿಲ್ಲ. ಈ ದಿವಸ ವಿಶಾಲ ಮನೋಭಾವವಿಲ್ಲವೆಂದು ಮತ್ತೊಬ್ಬರಿಗೆ ಆರೋಪಣೆ ಮಾಡುತ್ತಾರೆ. ಅವರು ಒಬ್ಬರು ಇನ್ನೊಬ್ಬರಿಗೆ ಆರೋಪಣೆ ಮಾಡತಕ್ಕ ಪರಿಸ್ಥಿತಿ ಬಂದಿದೆ. ಈ ರೀತಿ ಇರುವಾಗ ಮುಖ್ಯವಾದುದೇನೆಂದರೆ: ಯಾವಾಗಲೂ ಎಲ್ಲ ಪ್ರಶ್ನೆಗಳಲ್ಲಿಯೂ ಎರಡು ಇರುತ್ತವೆ, ತಿರುಳು, ಮತ್ತು ಸಿಪ್ಪೆ (form and substance). ಎಲ್ಲ ಶಾಸನಸಭೆಗಳೂ ಕಾನೂನು ಮಾಡತಕ್ಕದಕ್ಕೆ, ತೀರ್ಮಾನಮಾಡತಕ್ಕದಕ್ಕೆ ಒಂದು ಉದ್ದೇಶ (substance) ಯಾವುದೆಂದರೆ, ದೇಶಕ್ಕೆ ಒಳ್ಳೆಯದಾಗಲಿ, ಜನಗಳಲ್ಲಿ ಶಾಂತಿ ಮತ್ತು ನೆಮ್ಮದಿ ಇರಲಿ ಎಂಬುದು. ಕಾನೂನುಗಳು, ತೀರ್ಮಾನಗಳು ಎಲ್ಲವನ್ನೂ ಮಾಡಿದ್ದೇವೆ ಅಷ್ಟೆ. ಇವುಗಳ ಧ್ಯೇಯ ಜನಗಳಿಗೆ ಒಳ್ಳೆಯದಾಗಲಿ ನೆಮ್ಮದಿಯಾಗಲಿ, ಶಾಂತಿಯಾಗಲಿ ಎಂದು. ಹಾಗೆ ನಾವು ಮಾಡತಕ್ಕ ತೀರ್ಮಾನ, 'This is merely a means to an end, this is not an end in itself' ಎಂದು ಅನೇಕರು ವಾದಿಸುತ್ತಾರೆ. ಕರ್ಣಾಟಕ ಏಕೀಕರಣ 'is an end in itself' ಎಂದು ವಾದಿಸತಕ್ಕದ್ದೂ ಸರಿಯಲ್ಲ, Mysore for Mysoreans ಎಂದು ವಾದಿಸತಕ್ಕದ್ದೂ ಸರಿಯಲ್ಲ. Even in the minds of these two sections, if they analyse the situation, these proposals are merely a means to an end, the end being the happiness and well-being of the people. ಅದನ್ನು ನಾವು ಸರಿಯಾಗಿ ಅರ್ಥ ಮಾಡಿಕೊಂಡು ಮನಸ್ಸಿಗೆ ಅಂಟಿಸಿಕೊಂಡರೆ, ಈ ತೀರ್ಮಾನ ಯಾವ ರೂಪತಾಳಬೇಕು ಎನ್ನತಕ್ಕವರಲ್ಲಿ ಒಂದು ಹಠವೇನಿದೆಯೋ ಆ ಹಠ ಕ್ರಮ ಕ್ರಮವಾಗಿ

ಹೋಗಿ ಎಲ್ಲರಲ್ಲಿಯೂ ಶಾಂತಿ ಸೌಹಾರ್ದ ಭಾವ ಉಂಟಾಗುತ್ತದೆ. ಈ ದಿವಸ ನಾವು ಮಾಡತಕ್ಕ ತೀರ್ಮಾನಗಳನ್ನು ಹೊರಗಡೆಯಿಂದ ಅಕ್ಟೋಬರು ತಿಂಗಳಿನಿಂದ ಆಚೆಗೆ ಬಂದು ಸೇರತಕ್ಕಂಥವರು ಒಪ್ಪಿಕೊಂಡಿಲ್ಲವೆಂದು ನನ್ನ ಮನಸ್ಸಿಗೆ ಬಹಳ ವ್ಯಥೆಯಾಗುತ್ತದೆ. ನಮ್ಮ ಕಷ್ಟಗಳನ್ನೂ ಇಲ್ಲಿರುವ ಪರಿಸ್ಥಿತಿಯನ್ನೂ ಅವರು ಅರಿತುಕೊಂಡಿಲ್ಲ. 'ಮೈಸೂರು' ಎಂದು ಹೆಸರನ್ನು ಇಟ್ಟರೆ ಸತ್ಯಾಗ್ರಹ ಮಾಡುತ್ತೇವೆ ಎಂದು ಪತ್ರಿಕೆಗಳಲ್ಲಿ ಸಂಪಾದಕೀಯಗಳನ್ನು ಬರೆದಿರುತ್ತಾರೆ. ಇದನ್ನು ಒಪ್ಪಬಾರದು ಎಂದು ಹೇಳಿ ಅಗ್ರಲೇಖನಗಳನ್ನ ಬರೆದಿರುತ್ತಾರೆ. ಅನೇಕ ಮುಖಂಡರುಗಳು ಸಹ ತಪ್ಪು ಅರ್ಥ ಮಾಡಿಕೊಂಡಿರುತ್ತಾರೆ. ಇಂದು ಮೈಸೂರು ಸಭೆಯವರು ಒಮ್ಮತವಾದ ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದಾರಲ್ಲ ಅದನ್ನು ನಾವೆಲ್ಲ ಕಲೆತುಕೊಂಡಾಗ ಸಮಾಲೋಚನೆ ಮಾಡೋಣವೆನ್ನುವ ಮಟ್ಟದಲ್ಲಿಯೂ ಅವರು ಇಲ್ಲ.

11 A.M.

ಮೈಸೂರು ಸರ್ಕಾರದವರು ಸರ್ವಾನುಮತದಿಂದ ಮಾಡಿರುವ ತೀರ್ಮಾನವಿರುವಾಗ, ನಾವೆಲ್ಲಾ ಕುಳಿತುಕೊಂಡು ಯೋಚನೆ ಮಾಡೋಣ ಎಂದು ಹೇಳಿದ್ದರೆ ನನ್ನ ಮನಸ್ಸಿಗೆ ಬಹಳ ಸಂತೋಷವಾಗುತ್ತಿತ್ತು. ಮೈಸೂರು ಶಾಸನ ಸಭೆಗಳು ಒಂದು ಬಹುಮತದ ತೀರ್ಮಾನನವನ್ನು ಕೈಕೊಂಡಿರುವಾಗ ಮಿಕ್ಕವರ ಅಭಿಪ್ರಾಯ ತೆಗೆದುಕೊಳ್ಳುವುದು ಸೂಕ್ತವಲ್ಲ. ನಿಮ್ಮ ಕುದುರೆ ಎತ್ತ ಕಡೆ ಬೇಕಾದರೂ ಓಡಲಿ, ನಮ್ಮ ದಾರಿ ನಮ್ಮದು ಎಂದು ವಾದಿಸುವವರಿದ್ದರೆ ಏನು ಮಾಡುವುದು? ಇಲ್ಲಿ ಅಧಿಕಾರ ಸ್ಥಾನಗಳಲ್ಲಿರುವ ಮುಖಂಡರಾದ ನಾವೆಲ್ಲರೂ ಒಗ್ಗಟ್ಟಾಗಿ ಒಟ್ಟು ಕುಟುಂಬದವರಂತೆ ಬಾಳಬೇಕೆಂಬ ಅಭಿಪ್ರಾಯ ಸೂಚಿಸಿದರೆ, ಅದು ಬೇಡವೆಂದು ಹೇಳಿದರೆ, ಅದಕ್ಕೇನು ಮಾಡಬೇಕು? ಯಾವ ಕಾರಣದಿಂದಲೋ ಏನೋ 35 ಜನ ಅಸೆಂಬ್ಲಿ ಸದಸ್ಯರು ಜವಾಹರಲಾಲ್ ನೆಹ್ರೂ ಅವರಿಗೆ ಒಂದು ಸ್ಟೇಟ್‌ಮೆಂಟ್ ಕಳುಹಿಸಿದರು. ಇಷ್ಟು ಕಷ್ಟಪಟ್ಟು ನಾವು ಒಂದು ತೀರ್ಮಾನಕ್ಕೆ ಬಂದಿರುವಾಗ ನಮ್ಮನ್ನು ಕೇಳುವ ಮನಸ್ಸು ಕೂಡ ಆ ಮಾನ್ಯ ಸದಸ್ಯರಿಗೆ ಬರಲಿಲ್ಲ. ಅದೇನೋ ಆಗಿಹೋಯಿತು. ಮೈಸೂರಿನವರನ್ನು ಕಟ್ಟಿಹಾಕಿ ದರದರ ಎಳೆದುಕೊಂಡು ಹೋಗೋಣ ಎಂಬ ಭಾವನೆಯಿದ್ದರೆ ಹೇಗೆ? ಸರಿಯಾದ ಮಾರ್ಗದಲ್ಲಿ ನಿರ್ದೇಶ ಕೊಡಲಿಲ್ಲವಲ್ಲ ಎಂಬುದೇ ಈ ದಿವಸ ಒಂದು ದೊಡ್ಡ ಚಿಂತೆಯಾಗಿದೆ. ಆದರೆ ನಾವು ನಿರಾಶರಾಗಬಾರದು. ಮನುಷ್ಯನ ಗುಣ ಅನೇಕಾವರ್ತಿ ಸಮಯಕ್ಕೆ ತಕ್ಕ ಹಾಗೆ ಪ್ರವರ್ತಿಸುವುದೇ ಆಗಿದೆ. ಇಬ್ಬರು ಕಲೆತು ಮಾತನಾಡುವ ಉದ್ದೇಶವೇನು? ಅದರಿಂದ ಅನೇಕ ಸಾರಿ ಅಭಿಪ್ರಾಯ ಮಾರ್ಪಾಡಾಗುತ್ತದೆ. ಇದು ನಮ್ಮೆಲ್ಲರ ಅನುಭವ. ಆದುದರಿಂದ ಉದ್ವೇಗದಿಂದ ಕೂಡಿರತಕ್ಕ ಉತ್ತರ ಕರ್ಣಾಟಕದವರು ನಮ್ಮಲ್ಲಿಗೆ ಬಂದು ನಮ್ಮೊಡನೆ ಕಲೆತು ಸಮಾಲೋಚನೆ ಮಾಡಬಹುದೆಂದು ಹೇಳಿದಮೇಲೆ ಅವರ ಉದ್ವೇಗ ಸ್ವಲ್ಪ ಕಡಮೆಯಾಗಬಹುದು. ಅವರೂ ನಾವೂ ಎಲ್ಲರೂ ಭಾರತೀಯರೇ ಆಗಿರುವುದರಿಂದ ಯಾವುದಾದರೂ ಒಂದು ತೀರ್ಮಾನಕ್ಕೆ ಬಂದೇ ಬರಬೇಕು. ಗತ್ಯಂತರವಿಲ್ಲ. ಪಾಕೀಸ್ಥಾನ, ಹಿಂದೂಸ್ಥಾನ ಹರಿದು ಹಂಚಿದ ಹಾಗೆ ಇಂಡಿಯಾ ದೇಶದಲ್ಲಿರುವ 'ನಾವು ನಾವೇ ಬೇರೆ, ನೀವೇ ಬೇರೆ' ಎಂದು ಉತ್ತರ ಕರ್ಣಾಟಕದವರೂ ಮತ್ತು ದಕ್ಷಿಣ ಕರ್ಣಾಟಕದವರೂ ಒಂದು ಚೈನೀಸ್ ವಾಲ್ ಕಟ್ಟಿಕೊಳ್ಳುವುದಕ್ಕಾಗುವುದಿಲ್ಲ. ಒಂದು ವೇಳೆ ಅವರು ಉದ್ವೇಗ ತೋರಿಸಿದರೂ ಅವರ ಮನಸ್ಸನ್ನು ಒಲಿಸಿಕೊಂಡು ಅವರ ಅನುಮಾನವನ್ನು ಪರಿಹಾರ ಮಾಡಿ ನೆಮ್ಮದಿಯಿಂದ ಬಾಳತಕ್ಕಂಥ ಒಂದು ಪರಿಸ್ಥಿತಿಯನ್ನು ರೂಪಿಸಬೇಕಾಗಿರತಕ್ಕ ಜವಾಬ್ದಾರಿ ನಮ್ಮದೇ ಆಗಿದೆ. ಈ ದಿವಸ ನಾವು ಈ ಎಲ್ಲ ದೃಷ್ಟಿಗಳನ್ನೂ ಗಮನದಲ್ಲಿಟ್ಟು ತೀರ್ಮಾನ ಮಾಡಬೇಕು. ಇತರರ ಉದ್ವೇಗವನ್ನು ಕಡಮೆ ಮಾಡುವುದಕ್ಕೆ ಯಾವುದಾದರೂ ದಾರಿಯಿದೆಯೆ ಎಂದು ನಾವು ಯೋಚನೆ ಮಾಡಬೇಕು. ತೆಗೆದುಕೊಂಡಿರತಕ್ಕ ತೀರ್ಮಾನವನ್ನು ನಿಸ್ಪೃಹತೆಯಿಂದ ಕಾರ್ಯರೂಪಕ್ಕೆ ತರಲು ಯಾವ ದಾರಿಯಿದೆಯೆಂಬುದನ್ನು ಯೋಚನೆ ಮಾಡಬೇಕು. ಎಷ್ಟೇ ಹೇಳಿದರೂ ಕೂಡ ಈ ದಿವಸ ಮೈಸೂರು ಸಂಸ್ಥಾನಕ್ಕೆ ಮತ್ತು ಈ ಸಭೆಗೆ ಬಹಳ ಪ್ರಾಮುಖ್ಯವಾದ ಸ್ಥಾನವಿದೆ. ಮಿಕ್ಕವರು ಏನೇ ಹೇಳಿದರೂ ಕೂಡ ಈ ಸಭೆಯ ಅಭಿಪ್ರಾಯಕ್ಕೆ ದೇಶದಲ್ಲಿ, ಪಾರ್ಲಿಮೆಂಟಿನಲ್ಲಿ, ಇಂಡಿಯಾ ಸರ್ಕಾರದಲ್ಲಿ ಹೆಚ್ಚಾದ ಮಾನ್ಯತೆ ದೊರೆತಿದೆ. ಆದುದರಿಂದಲೇ ಈ ಜವಾಬ್ದಾರಿ, ಈ ರೀತಿ ರೂಪಿತವಾಗಿರತಕ್ಕಂಥ ದೊಡ್ಡ ಜವಾಬ್ದಾರಿ, ನಮ್ಮ ಮೇಲೆ ಬಿದ್ದಿರುವುದರಿಂದ ನಾವು ಜವಾಬ್ದಾರಿಯುತವಾಗಿಯೇ ವರ್ತಿಸಬೇಕು. ಇಷ್ಟೇ ನಾನು ಪ್ರಾರ್ಥಿಸಿಕೊಳ್ಳುವುದು : ಈ ಸಭೆಯವರೇನು ತೀರ್ಮಾನವನ್ನು ಕೈಗೊಂಡಿದ್ದೇವೋ ಆ ವಿಚಾರದಲ್ಲಿ ಸದಾ ಒಮ್ಮನಸ್ಸಿನಿಂದ, ಒಗ್ಗಟ್ಟಿನಿಂದ ವರ್ತಿಸದೇ ಹೋದರೆ ಅದು ನಮ್ಮ ಆತ್ಮಕ್ಕೆ ನಾವೇ ವಂಚನೆಯನ್ನು ಮಾಡಿಕೊಂಡ ಹಾಗಾಗುತ್ತದೆ, ನಮ್ಮ ಭಾಷೆಗೆ ನಾವೇ ತಪ್ಪಿದ ಹಾಗಾಗುತ್ತದೆ. ನಾಳೆಯು ದಿವಸ ಮೈಸೂರಿನ ಹೆಸರಿನ ವಿಷಯ ಬರಬಹುದು ಅಥವಾ ಮೈಸೂರಿನ ಹಿನ್ನೆಲೆಯ ವಿಷಯ ಬರಬಹುದು. ಇಲ್ಲಾದ ತೀರ್ಮಾನಕ್ಕೆ ಒಪ್ಪಿರುವವರು, ಇಲ್ಲಿ ತೀರ್ಮಾನ ಮಾಡಿರುವವರು ನಾಳೆ ತಮ್ಮ ಮನಸ್ಸನ್ನು ಬದಲಾಯಿಸುವುದು ಸೂಕ್ತವಲ್ಲ. ಬದಲಾಯಿಸಿದ್ದೇ ಆದರೆ ಮನಸ್ಸನ್ನು ನೋಯಿಸಿದಂತಾಗುವುದೂ ಅಲ್ಲದೆ ಆ ನೋವು ಮಾಯುವುದಕ್ಕೆ ಅವಕಾಶವೂ ಇರುವುದಿಲ್ಲ. ಯಾವಾಗ ಮನಸ್ಸು ನೋಯುತ್ತದೆಯೋ ಯಾರಿಂದಲೂ ಅದನ್ನು ತಪ್ಪಿಸುವುದಕ್ಕಾಗುವುದಿಲ್ಲ. ಅದರ ಪರಿಣಾಮ ಆಟಂಬಾಂಬ್, ಹೈಡ್ರೋಜನ್ ಬಾಂಬಿಗಿಂತ ವಿಪರೀತವಾಗಬಹುದು. ಆದುದರಿಂದ ಮನಸ್ಸಿನ ಸಹಜಗುಣವರಿತು ಸರಿಯಾದ ರೀತಿಯಲ್ಲಿ ವರ್ತಿಸಿದರೆ ಮುಂದೆ ಶಾಂತಿಯಿದೆ, ಸೌಹಾರ್ದವಿದೆ. ಈ ಶಾಂತಿ ಸೌಹಾರ್ದವನ್ನು ಕಾಪಾಡುವ ಬಹುಮಟ್ಟಿನ ಜವಾಬ್ದಾರಿ ಈ ಸಭೆಯ ಸದಸ್ಯರದೇ ಆಗಿದೆ. ಈ ಸಭೆಯಲ್ಲಿರತಕ್ಕ ಎಲ್ಲ ಸದಸ್ಯರೂ ಜಾತಿ, ಕೋಮು, ಪ್ರದೇಶ ಇವುಗಳ ಅಭಿಮಾನವನ್ನೆಲ್ಲಾ ಬಿಟ್ಟು ಮೈಸೂರು ಅಸೆಂಬ್ಲಿ ಏನೊಂದು ತೀರ್ಮಾನ ಮಾಡಿದೆಯೋ, ನಮ್ಮ ಸರ್ವಾನುಮತ ತೀರ್ಮಾನವೇನಿದೆಯೋ, ಅದರ ಪ್ರಕಾರ ಸದಾ ನಡೆದುಕೊಂಡು ಹೋಗೋಣ ಎಂದು ಮನಸ್ಸುಳ್ಳವರಾಗಿದ್ದರೆ ಅವರ ವಾತಾವರಣವೇ ಬೇರೆಯಾಗುತ್ತದೆ. ದಕ್ಷಿಣ ಪ್ರದೇಶದ ಸೂಚನೆ, ಅದರ ಸಮಸ್ಯೆ, ಇವುಗಳನ್ನು ನಾವುಗಳೆಲ್ಲರೂ ಒಪ್ಪಿ ಅದರ ತತ್ವ ಸರಿಯಾಗಿದೆಯೆಂದು ಒಪ್ಪಿಕೊಂಡರೂ ಕೂಡ ಅದನ್ನು ಕಾರ್ಯರೂಪಕ್ಕೆ ತರತಕ್ಕುದರಲ್ಲಿ ಬೇಕಾದಷ್ಟು ಅಡಚಣೆಯಿದೆ, ಅದಕ್ಕೆ ಅವಕಾಶವಿಲ್ಲ ಎಂಬುದನ್ನೂ ಕೂಡ ಮನಸ್ಸಿಗೆ ತಂದುಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ. ಬಹುಶಃ ಇನ್ನೂ ಕೆಲವು ದಿವಸ ಕಾದು ನೋಡೋಣ. ಮದರಾಸ್ ಅಸೆಂಬ್ಲಿಯಲ್ಲಿ "It is neither practicable

(SRI K. HANUMANTHAIYA.)

nor popular" ಎಂದು ತೀರ್ಮಾನಮಾಡಿದರು. ಆಂಧ್ರ ಅಸೆಂಬ್ಲಿಯಲ್ಲಿ ಏನು ಹೇಳುತ್ತಾರೋ ನೋಡೋಣ. ಕೇರಳದ ವಿಷಯ ಈ ದಿವಸ ಪ್ರಸ್ತಾಪಮಾಡುವುದಕ್ಕೇ ಆಗುವುದಿಲ್ಲ. ಆದುದರಿಂದ ಮೈಸೂರು ದೊಡ್ಡ ಮೈಸೂರಾಗತಕ್ಕ ಸಂದರ್ಭದಲ್ಲಿ ಇದೇ ಹೆಸರನ್ನೇ ಉಳಿಸಿಕೊಳ್ಳಲಿ ಅಥವಾ ಬೇರೆ ಹೆಸರನ್ನಿಡತಕ್ಕ ಸಂಭವ ಬರಲಿ ಆಗ ನಾವು ಮನಸ್ಸಿನಲ್ಲಿ ಭಿನ್ನತೆ ಇಟ್ಟುಕೊಳ್ಳಬಾರದು. ಇದಕ್ಕೆ ಯಾವಾಗಲೂ ಒಂದು ಹಠವನ್ನು ಹಿಡಿಯಬಾರದು. ಏಕೆಂದರೆ ಪರಿಸ್ಥಿತಿ ಹಾಗಿದೆ. ಹಟವನ್ನು ಬಿಟ್ಟು ತಾವೀಗ ಕಾಲ ಪರಿಸ್ಥಿತಿಯನ್ನು ಪರಿಗಣನೆಗೆ ತೆಗೆದುಕೊಂಡು ಈ ಸಂದರ್ಭದಲ್ಲಿ ಒಂದು ಸರಿಯಾದ ನಿರ್ಧಾರಕ್ಕೆ ಬರುವುದಕ್ಕೆ ಸಾಧ್ಯವಿದೆಯೆಂದು ನನ್ನ ಅಭಿಪ್ರಾಯ.

ಎರಡನೆಯ ವಿಷಯ ಈ ಬಿಲ್ಲಿನಲ್ಲಿರುವುದು ಜೋನಲ್ ಕೌನ್ಸಿಲ್ಲಿಗೆ ಸಂಬಂಧಪಟ್ಟಿದ್ದು. ಆ ವಿಚಾರದಲ್ಲಿ ಪ್ರತ್ಯೇಕವಾಗಿ ತಿದ್ದುಪಡಿಗಳಮೇಲೆ ಚರ್ಚೆಯಾಗುತ್ತದೆ. ಒಂದೆರಡು ಅಭಿಪ್ರಾಯಗಳನ್ನು ಮಾತ್ರ ಆ ವಿಷಯದಲ್ಲಿ ನಾನು ಸೂಚಿಸುತ್ತೇನೆ. ಈಗ ಈ ಜೋನಲ್ ಕೌನ್ಸಿಲ್ ಎಂಬುದು ಯಾವರೀತಿ ರಚನೆಯಾಗಿದೆ ಮತ್ತು ಇದಕ್ಕೆ ಯಾವ ಕೆಲಸವನ್ನು ವಹಿಸಿದ್ದಾರೆ ಅದನ್ನು ಇನ್ನೂ ಉತ್ತಮಪಡಿಸಬಹುದೆಂಬುದೇ ನನ್ನ ಅಭಿಪ್ರಾಯ. ಸಂಸ್ಥಾನಗಳ ಪ್ರತಿನಿಧಿಗಳೆಲ್ಲಾ ಸೇರಿ ಇತರ ಸಂಸ್ಥಾನಗಳಿಗೂ ಈ ಸಂಸ್ಥಾನಕ್ಕೂ ಸಂಬಂಧಪಟ್ಟ ವಿಷಯವನ್ನು ಆಲೋಚಿಸಬಹುದು. ಈ ಸಮಿತಿಗೆ, ಜೋನಲ್ ಕೌನ್ಸಿಲ್ಲಿಗೆ, ಕೇಂದ್ರ ಸರ್ಕಾರದ ಆಡಳಿತಕ್ಕೊಳಪಟ್ಟಿರತಕ್ಕಂಥ ವಿಷಯಗಳನ್ನೂ ಕೂಡ ಸಮಾಲೋಚನೆ ಮಾಡುವುದಕ್ಕೂ ಮತ್ತು ಸಲಹೆ ಕೊಡುವುದಕ್ಕೂ ಅವಕಾಶವಿರಬೇಕೆಂಬುದು ನನ್ನ ವಾದ. ಆ ವಾದವನ್ನು ಒಂದು ದೃಷ್ಟಿಯಿಂದ ಈ ಬಿಲ್ಲಿನಲ್ಲಿ ಇಂಡಿಯಾ ಸರ್ಕಾರದವರು ಒಪ್ಪಿಕೊಂಡಿದ್ದಾರೆ. ಸಂಸ್ಥಾನಗಳ ಮಂತ್ರಿಗಳು ಈ ಕೌನ್ಸಿಲ್ಲಿಗೆ ಅವರ ಸಂಸ್ಥಾನಗಳ ವಿಷಯಗಳನ್ನು ತಿಳಿಸುವುದಕ್ಕೆ ಹೋಗುತ್ತಾರೆ. ಈ ಸಮಿತಿಗೆ ಕೇಂದ್ರ ಸರ್ಕಾರದ ಮಂತ್ರಿಗಳು ಛೇರ್ಮನ್ ಆದಾಗ 'common pool' ನಂತೆ ಇರಬೇಕು, ಅವರು ಎಲ್ಲ ವಿಷಯಗಳನ್ನೂ ತಿಳಿದುಕೊಳ್ಳಬೇಕು. ಛೇರ್ಮನ್ ವ್ಯಾಜ್ಯವಾಡುವುದನ್ನು ಬಿಡಿಸುವುದಕ್ಕೆ ಬರುತ್ತಾರೆಂದು ಹೇಳಿದರೆ ಅದು ಸಂಸ್ಥಾನಗಳಿಗೆ ಮರ್ಯಾದೆ ತರತಕ್ಕ ವಿಷಯವಲ್ಲ. ನಾನು ಈ ದಿವಸ ಮರ್ಯಾದೆಯ ದೃಷ್ಟಿಯಿಂದ ಇದನ್ನು ಪರಿಶೀಲಿಸುತ್ತಿಲ್ಲ. ಜನಜೀವನಕ್ಕೆ ಸಂಬಂಧಪಟ್ಟ ದೊಡ್ಡ ಕಾರ್ಯವಿದು. ಇದು ಸಂಸ್ಥಾನಕ್ಕೇ ಸೇರಿರಲಿ ಅಥವಾ ಕೇಂದ್ರಕ್ಕೇ ಸೇರಿರಲಿ ದಕ್ಷತೆಯಿಂದ ಪ್ರಾಮಾಣಿಕತೆಯಿಂದ ನಡೆಯಬೇಕು. ಯಾರ ಹಕ್ಕು ಹೆಚ್ಚು ಎಂಬ ಪ್ರಶ್ನೆ ಇದಲ್ಲ. ಆಯಾ ಇಲಾಖೆಗಳು ಜನರಿಗೆ ಸರಿಯಾದ ಸೇವೆಯನ್ನು ಸಲ್ಲಿಸುತ್ತಿವೆಯೆ ಎಂಬುದು ಮುಖ್ಯವಾದುದು. ಜನಜೀವನದ ನಿತ್ಯಸೌಕರ್ಯಕ್ಕೆ ಸಂಬಂಧಪಟ್ಟಿರುವ ಅನೇಕ ಟೀಕೆಗಳು ಇಂಡಿಯಾ ಸರ್ಕಾರದ ಆಡಳಿತಕ್ಕೆ ಸಂಬಂಧಪಟ್ಟಿವೆ. ಈಗ ರೈಲ್ವೆಯನ್ನು ತೆಗೆದುಕೊಳ್ಳಿ. ರೈಲ್ವೆ ಈಗ ಕೇಂದ್ರದ ಆಡಳಿತಕ್ಕೆ ಸೇರಿದೆ. ಇಲ್ಲಿರುವ ಸರ್ಕಾರಕ್ಕೆ ಅದರ ಮೇಲೆ ಯಾವ ಅಧಿಕಾರವೂ ಇಲ್ಲ. ಇದು ತಮಗೆ ಗೊತ್ತಿದೆ. ಬೆಂಗಳೂರು ರಸ್ತೆ ಚೆನ್ನಾಗಿದೆ, ಸಿಮೆಂಟ್ ಕಾಂಕ್ರೀಟ್ ಬೇರೆ ಹಾಕಿ ರಸ್ತೆ ಮಾಡುತ್ತಿದ್ದಾರೆ. ಒಂದು ದಿವಸ ನಾನು ರೈಲ್ವೆ ಸ್ಟೇಷನ್ನಿಗೆ ಹೋದೆ. ಅಲ್ಲಿಗೆ ಪೂರ್ವ ಭಾಗದಿಂದ ಹೋಗಿ ಅಲ್ಲಿರುವ ಅಂಡರ್ ಬ್ರಿಡ್ಜಿನಿಂದ ಸ್ವಲ್ಪ ಮುಂದೆ ಹೋದರೆ ರಸ್ತೆಯಲ್ಲಿ ನಾಲ್ಕೈದು ರಿಪೇರಿ ಮಾಡದಿರುವ ಗುಂಡಿಗಳು ಕಂಡು ಬಂದುವು. 'ಏಕೆ ಹೀಗಿದೆ? ಅಂಡರ್ ಬ್ರಿಡ್ಜ್‌ವರೆಗೆ ರಸ್ತೆ ಚೆನ್ನಾಗಿದೆ, ಅಲ್ಲಿಂದ ಮುಂದೆ ಚೆನ್ನಾಗಿಲ್ಲ, ನಾಲ್ಕೈದು ಗುಂಡಿಗಳಿವೆ, ಕಾರು ಅಲ್ಲಿ ಉರುಳುವ ಪರಿಸ್ಥಿತಿಯಾಗಿದೆ, ಮುನಿಸಿಪಾಲಿಟಿ ಸರಿಯಾಗಿ ನೋಡಿಕೊಂಡು ಕೆಲಸ ಮಾಡುತ್ತಿಲ್ಲ, ಮನಸ್ಸಿಗೆ ಬಂದಹಾಗೆ ಮಾಡುತ್ತಿದೆ' ಎಂದು ಕಮಿಷನರನ್ನು ಕರೆಸಿ ಕೇಳಿದೆ. ರಸ್ತೆಯನ್ನು ಸರಿಮಾಡಬೇಕೆಂದು ಹೇಳಿದೆ. ಅದಕ್ಕೆ ಅವರು 'ಈ ವಿಚಾರದಲ್ಲಿ ಒಂದು ವರ್ಷದಿಂದ ವ್ಯವಹಾರ ನಡೆಯುತ್ತಿದೆ. ಅಂಡರ್ ಬ್ರಿಡ್ಜಿನಿಂದೀಚೆಗಿರುವುದು ಮುನಿಸಿಪಾಲಿಟಿಗೆ ಸೇರಿದೆ, ಅಲ್ಲಿಂದಾಚೆಗೆ ರೈಲ್ವೆ ಜ್ಯೂರಿಸ್ ಡಿಕ್ಷನ್ನಿಗೆ ಸೇರಿದೆ, ಅವರು ರಿಪೇರಿ ಮಾಡಬೇಕು, ಎಷ್ಟೋಸಾರಿ ಬರೆದರೂ ರಿಪೇರಿ ಮಾಡಿಸಿಲ್ಲ' ಎಂದು ಹೇಳಿದರು. 'ನಿಮ್ಮ ಇಲಾಖೆಯು ಬಡ್ಜೆಟ್ಟಿನಲ್ಲಿ ನಗರದ ಅಭಿವೃದ್ಧಿಗೆ 10 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತೀರಿ, ಅದರಲ್ಲೇ ಈ ಗುಂಡಿಗಳನ್ನು ಮುಚ್ಚಿಸಿ ರಸ್ತೆ ರಿಪೇರಿ ಮಾಡಿ ಆಮೇಲೆ ಇಷ್ಟು ಖರ್ಚಾಗಿದೆ, ಕೊಡಿ ಎಂದು ಇಂಡಿಯಾ ಸರ್ಕಾರಕ್ಕೆ ಬರೆಯಿರಿ' ಎಂದು ಹೇಳಿದೆ. This shows that the straw shows which way the wind blows. ಇದಕ್ಕಿಂತಲೂ ಮನಸ್ಸಿಗೆ ಹಿಡಿಯತಕ್ಕ ಉದಾಹರಣೆ ಕೊಡುವುದಕ್ಕೆ ಸಾಧ್ಯವಿಲ್ಲ. ಇತರ ಉದಾಹರಣೆಗಳನ್ನು ಬೇಕಾದಷ್ಟು ಕೊಡಬಹುದು. ಕೇಂದ್ರ ಸರ್ಕಾರದಲ್ಲಿರುವ ಇಲಾಖೆಗಳೇನಿವೆಯೋ ಅವುಗಳಲ್ಲಾಗತಕ್ಕಷ್ಟು ದುಂದು ವೆಚ್ಚ ಇಂಡಿಯಾ ದೇಶದ ಯಾವ ಸ್ಟೇಟ್ ಸರ್ಕಾರಗಳಲ್ಲೂ ಆಗುತ್ತಿಲ್ಲ. ಇಲ್ಲಿ ಹತ್ತು ರೂಪಾಯಿ ಹೆಚ್ಚಾಗಿ ಖರ್ಚು ಮಾಡಿದರೆ ಕೇಳುವ ಅಧಿಕಾರವಿದೆ, ಅವಕಾಶವಿದೆ. ಇಂಡಿಯಾ ದೇಶದಲ್ಲಿರುವ ಪಾರ್ಲಿಮೆಂಟ್ 365 ದಿವಸವೂ ಸಭೆ ಸೇರಿದರೂ ಕೂಡ ಸಂಸ್ಥಾನದ ಶಾಸನ ಸಭೆಗಳಿಗೆ ಎಷ್ಟು ಅವಕಾಶವಿದೆಯೋ ಅಷ್ಟನ್ನು ಪಡೆಯಲು ಸಾಧ್ಯವಾಗುವುದಿಲ್ಲ. ಪಾರ್ಲಿಮೆಂಟ್ 36 ಕೋಟಿ ಪ್ರಜೆಗಳ ಯೋಗಕ್ಷೇಮವನ್ನು ನೋಡಬೇಕು. ಆದುದರಿಂದಲೇ ವಿಕೇಂದ್ರೀಕರಣವಾಗಬೇಕೆಂದು ಮಹಾತ್ಮ ಗಾಂಧಿಯವರು ಹೇಳಿದರು. ಇನ್ನೊಂದು ವಿಷಯ ಹೇಳುತ್ತೇನೆ. ಎಲ್ಲರಿಗೂ ಸ್ವಾನುಭವವಿದೆ. ಮೈಸೂರು ಸರ್ಕಾರದ ಆಡಳಿತದಲ್ಲಿ ಟೆಲಿಫೋನ್ ಇದ್ದಾಗ ಬಹಳ ದಕ್ಷತೆಯಿಂದ ಕೆಲಸ ನಡೆಯುತ್ತಿತ್ತು ಎಂಬುದನ್ನು ಎಲ್ಲರೂ ಒಪ್ಪುತ್ತಾರೆ, ಖರ್ಚು ಸಹ ಕಡಿಮೆಯಾಗಿತ್ತು. ಈ ಇಲಾಖೆಯು ಇಂಡಿಯಾ ಸಕಾರದ ಕೈಗೆ ಹೋದಮೇಲೆ ಖರ್ಚು ಬೇರೆ ಜಾಸ್ತಿಯಾಯಿತು, ಅನುಕೂಲ ಕಡಿಮೆಯಾಯಿತು. ಅನೇಕ ಸಾರಿ ಪ್ರೈಂ ಮಿನಿಸ್ಟರ್ ಸಂಗಡ ಮಾತನಾಡುವಾಗ ಟ್ರಂಕ್‌ಕಾಲ್ ಕನೆಕ್ಷನ್ ತೆಗೆದುಕೊಳ್ಳಬೇಕಾದರೆ ಅರ್ಧ ಘಂಟೆ ಪರದಾಡಬೇಕಾಗಿದೆ. ಈ ಅನುಭವ ಅನೇಕ ವೇಳೆ ನನಗೇ ಉಂಟಾಗಿದೆ. ಮೈಸೂರು ಸರ್ಕಾರದಲ್ಲಿ ಟೆಲಿಫೋನ್ ಇಲಾಖೆಯಿದ್ದಾಗ ಎಕ್ಸ್‌ಛೇಂಜಿಗೆ ರಿಂಗ್ ಮಾಡಿದರೆ ಒಂದು ಸೆಕೆಂಡಿನಲ್ಲಿ ಕನೆಕ್ಷನ್ ಸಿಕ್ಕಿ ಉತ್ತರ ಕೊಡುತ್ತಿದ್ದರು. Now we have to wait. ಹತ್ತು ಹದಿನೈದು ಸಲ ರಿಂಗ್ ಆದಮೇಲೆ ಎಕ್ಸ್‌ಛೇಂಜ್ ಸಿಕ್ಕುತ್ತದೆ. ಇದಿಷ್ಟು ಈ ಟೆಲಿಫೋನ್ ಎಕ್ಸ್‌ಛೇಂಜ್ ವಿಷಯವಾಯಿತು. ಇನ್ನೊಂದು ವಿಚಾರ ಆದೂ ಹೀಗೆಯೇ ಇದೆ. ವಿಧಾನಸೌಧದ ಮುಂದೆ ಈಗ ವಿಧಾನ ವೀಧಿ ಎಂಬ ಒಂದು ರಸ್ತೆ ಇರತಕ್ಕದ್ದು ತಮಗೆಲ್ಲರಿಗೂ ಗೊತ್ತೇ ಇದೆ. ಈ ರಸ್ತೆಯನ್ನು ಮಾಡಿಸ

ತಕ್ಕ ಸಂದರ್ಭದಲ್ಲಿ ಈ ರಸ್ತೆಯ ಪಕ್ಕದಲ್ಲೇ ಇರತಕ್ಕಂಥ ಜನರಲ್ ಪೋಸ್ಟಾಫೀಸಿಗೆ ಸೇರಿದ್ದ ಒಂದು ಗುಂಟೆ ಜಮೀನು ನಮಗೆ ಬೇಕಾಗಿತ್ತು. ನಾವು ಇಂಡಿಯಾ ಸರ್ಕಾರಕ್ಕೆ ಸಂಬಂಧಪಟ್ಟ ಅಕೌಂಟೆಂಟ್ ಜನರಲ್‌ಅವರ ಕಛೇರಿಯನ್ನು ಕಟ್ಟಿಸಲು ಅವರಿಗೆ ಐದಾರು ಎಕರೆಗಳಷ್ಟು ಜಮೀನನ್ನು ಮುಫತ್ತಾಗಿ ಕೊಟ್ಟಿದ್ದೇವೆ. ಆದರೆ ಒಂದು ಗುಂಟೆ ಜಮೀನಿಗೋಸ್ಕರವಾಗಿ ಕೇಂದ್ರ ಸರ್ಕಾರದವರೊಡನೆ ಈಗ್ಗೆ ಎರಡು ವರ್ಷಗಳಿಂದ ಪತ್ರವ್ಯವಹಾರ ನಡೆಸಲಾಗುತ್ತಿದ್ದರೂ ಆ ವಿಚಾರವಿನ್ನೂ ತೀರ್ಮಾನವಾಗಿಲ್ಲ. ಇದೇ ವಿಚಾರದಲ್ಲಿ ನಾನು ಒಂದಾವರ್ತಿ ಕೇಂದ್ರ ಸರ್ಕಾರದ ಮಂತ್ರಿಗಳಾದ ಶ್ರೀ ಜಗಜೀವನ್‌ರಾಂಅವರನ್ನು ಸಹ ಆ ಸ್ಥಳಕ್ಕೆ ಕರೆದುಕೊಂಡು ಹೋಗಿ ಅವರಿಗೆ ತೋರಿಸಿ ಈ ವಿಚಾರ ಹೇಳಿದ್ದೆ. ಹೀಗೆ ನಾನೇ ಅವರನ್ನು ಎರಡು ಸಲ ಸ್ವತಃ ಕರೆದುಕೊಂಡು ಹೋಗಿ ತೋರಿಸಿ ವಿಚಾರ ತಿಳಿಸಲಾಗಿತ್ತು. ಆಗ ಅವರಿಗೆ ಇನ್ನೂ ಈ ಗೌರ್ನಮೆಂಟ್ ಆರ್ಡರ್ ಬರುವುದಕ್ಕೆ ಎಷ್ಟು ದಿವಸಗಳಾಗುತ್ತದೆಯೋ ಏನೋ ಎಂದು ತಿಳಿಸಿದ್ದಕ್ಕೆ, ಅವರು ಹೋಗಲಿ ಈ ಕಾಂಪೌಂಡನ್ನು ಒಡೆಸಿ ರಸ್ತೆ ಮಾಡಿಸಿಕೊಳ್ಳಿ ಎಂದು ತಿಳಿಸಿದ ನಂತರ ನಾವು ಆ ಜಮೀನನ್ನು ತೆಗೆದುಕೊಳ್ಳಬೇಕಾಯಿತು. ಮೈಸೂರಿನಲ್ಲಿದ್ದಂಥ 'ಆಕಾಶವಾಣಿ' ಕಛೇರಿ ಬೆಂಗಳೂರಿಗೆ ಬರುತ್ತದೆಂಬ ವಿಚಾರ ಮುಂಚಿತವಾಗಿಯೇ ನಮ್ಮ ಸರ್ಕಾರಕ್ಕೆ ಗೊತ್ತಾಗಿತ್ತು ಎನ್ನುವುದು ತಮಗೆಲ್ಲರಿಗೂ ಗೊತ್ತಿದೆ. ಹಾಗೆ ಮೈಸೂರಿನಲ್ಲಿದ್ದ ಆಕಾಶವಾಣಿ ಬೆಂಗಳೂರಿಗೆ ಬಂದನಂತರ ಮೈಸೂರಿನಲ್ಲಿರತಕ್ಕ ಆ ಕಟ್ಟಡ ಖಾಲಿ ಆಗುತ್ತದೆ, ಆ ಕಟ್ಟಡ ನಮ್ಮ ಕಾಲೇಜುಗಳಿಗೆ ಬೇಕಾಗಿರುತ್ತದೆ, ಅದನ್ನು ನಮ್ಮ ಸರ್ಕಾರಕ್ಕೆ ಬಿಟ್ಟುಕೊಡಬೇಕು ಎಂಬುದಾಗಿ ಆಕಾಶವಾಣಿ ಮಂತ್ರಿಗಳಾದ ಶ್ರೀ ಕೇಸ್ಕರ್ ಎಂಬವವರಿಗೆ ತಿಳಿಸಿದ್ದೆನು. ಈ ಆಕಾಶವಾಣಿ ಹೀಗೆ ಬೆಂಗಳೂರಿಗೆ ವರ್ಗಾಯಿಸಲ್ಪಡುವುದೆಂಬ ಅಂಶ ನಮಗೆ ಇನ್ನೂ 7-8 ತಿಂಗಳ ಹಿಂದೆಯೇ ಗೊತ್ತಾಗಿತ್ತು. ಆದುದರಿಂದ ನಾವು ಈ ಆಕಾಶವಾಣಿ ಮೈಸೂರಿನಿಂದ ಬೆಂಗಳೂರಿಗೆ ವರ್ಗಾಯಿಸಲ್ಪಡುವುದು ಇನ್ನೂ ಇದ್ದ ಹಾಗೆಯೇ ಈ ಕಟ್ಟಡಕ್ಕಾಗಿ ಮುಂಚಿತವಾಗಿಯೇ ಪತ್ರ ವ್ಯವಹಾರ ನಡೆಸಲು ಪ್ರಾರಂಭಿಸಿದೆವು. ಆದರೆ ಆ ಕಟ್ಟಡವನ್ನು ಅವರಿನ್ನೂ ನಮ್ಮ ವಶಕ್ಕೆ ಬಿಟ್ಟುಕೊಟ್ಟಿಲ್ಲ! ಅವರೇ ಆಳುಗಳನ್ನಿಟ್ಟು ಆ ಕಟ್ಟಡದ ನಿಗಾವಣೆಯನ್ನು ನೋಡಿಕೊಳ್ಳುತ್ತಿದ್ದಾರೆ. ಹೀಗೆ ಈ ಅಧಿಕಾರ ಒಂದೇ ಕಡೆ ವಿಪರೀತ ಕೇಂದ್ರೀಕೃತವಾಗಿರುವುದರಿಂದ ಸ್ಟೇಟ್ ಸರ್ಕಾರಗಳಿಗೆ ಅನೇಕ ಕಿರುಕುಳಗಳಿರುತ್ತವೆ. ಇದನ್ನು ತಪ್ಪಿಸಬೇಕೆಂದೇ ಅವರು ಈಗ ಸೂಕ್ತ ಕಾರ್ಯಕ್ರಮಗಳನ್ನು ಈ ಮೂಲಕ ಕೈಗೊಳ್ಳುತ್ತಿದ್ದಾರೆ. ಆದರೆ ಎಲ್ಲಕ್ಕಿಂತಲೂ ಈಗ ಇನ್ನೊಂದು ವಿಚಾರವಿದೆ—ಅದನ್ನು ನಾನು ತಮಗೆ ತಿಳಿಸಬೇಕೆಂದಿದ್ದೇನೆ—ಮೈಸೂರು ಸಿಟಿಯಲ್ಲಿ 300-400 ಮನೆಗಳು ಹಾಗೆಯೇ ಖಾಲಿ ಬಿದ್ದಿರುತ್ತವೆ. ಇವೂ ಅವರ ಆಡಳಿತಕ್ಕೇ ಸೇರಿವೆ. ಹೀಗೆಯೇ ಇನ್ನೊಂದು ಕಡೆ ಸ್ಟಾಫ್ ಕ್ವಾರ್ಟರ್ಸ್‌ಗಳೆಂದು ಇವೆ. ಅಲ್ಲೂ ಸಹ ಈಗ 300-400 ಮನೆಗಳು ಖಾಲಿ ಬಿದ್ದಿವೆ. ಹಾಗೆ ಒಂದು ಕಡೆ ವಿಶೇಷವಾಗಿ ಕಟ್ಟಡಗಳು ಖಾಲಿ ಬಿದ್ದಿರುವಾಗ ಅವುಗಳನ್ನು ಉಪಯೋಗಕ್ಕೆ ತಾರದೆ ಅವರು ಮತ್ತೊಂದು ಕಡೆ ಕೋಟ್ಯಂತರ ರೂಪಾಯಿಗಳನ್ನು ಖರ್ಚುಮಾಡಿ ಲೋ-ಇನ್‌ಕಂ ಗ್ರೂಪ್ ಹೌಸಿಂಗ್ ಸ್ಕೀಂ ಇತ್ಯಾದಿಗಳನ್ನು ನಡೆಸುತ್ತಿದ್ದಾರೆ. ಈ ವಿಚಾರದಲ್ಲಿ ನಾನು ಹಿಂದೆ ಕೇಂದ್ರದ ಡಿಫೆನ್ಸ್ ಮಂತ್ರಿಗಳಾದ ಮಾನ್ಯ ಶ್ರೀ ತ್ಯಾಗಿ ಅವರಿಗೆ ಆ ಕಟ್ಟಡಗಳನ್ನು ಜಾಗ್ರತೆಯಾಗಿ ಬಿಡಿಸಿಕೊಡಿ ಎಂದು ಕೇಳಿದ್ದೆ. ಅವರಿಗಾದರೂ ಹಾಗೆ ಅವುಗಳನ್ನು ಬಿಡಿಸಿ ಕೊಡಬಾರದು ಎನ್ನುವ ಉದ್ದೇಶವೇನೂ ಇಲ್ಲ. ಈ ಅಧಿಕಾರಗಳೆಲ್ಲಾ ಒಂದೇ ಕಡೆ ಬಹಳವಾಗಿ ಕೇಂದ್ರೀಕೃತವಾಗಿರುವುದರಿಂದ ಈ ನಾನಾ ಕೆಲಸಗಳು ಹೀಗೆಲ್ಲಾ ನಿಧಾನವಾಗಲು ಕಾರಣವಾಗಿದೆ. ನಾನು ತಮಗೆ ಒಂದು ಮಾತನ್ನು ಹೇಳುವುದಾದರೆ, ಈ ಸ್ಟೇಟ್ ಸರ್ಕಾರಗಳ ವಿಚಾರ ಕೇಂದ್ರದ ಮುಂದೆ "ಸಾಹುಕಾರನ ಮುಂದೆ ಸಾಲಗಾರ ಇದ್ದಹಾಗೆ" ಆಗಿದೆ. ಈ ಹಿಂದೆ ನಮಗೆ ವಯಸ್ಕರ ಮತದಾನ ಪದ್ಧತಿ ಇಲ್ಲದಿದ್ದಂಥ ಕಾಲದಲ್ಲಿ ನಾವು ಓಟುಗಳನ್ನು ಪಡೆಯಬೇಕಾಗಿದ್ದರೆ ಸಾಹುಕಾರರ ಮುಂದೆ ಹೋಗಿ ತಾವು ನಮಗೆ ಜನರಿಂದ ಓಟುಗಳನ್ನು ಕೊಡಿಸಿ ಎಂದು ಕೇಳಬೇಕಾದ ಸ್ಥಿತಿಯಿತ್ತು. ಈ ದಿವಸ ಹಾಗೆಯೇ ಇಂಡಿಯಾ ಸರ್ಕಾರ ಆ ಸಾಹುಕಾರರಾಗಿಯೂ, ನಾವು (ಸ್ಟೇಟ್ ಸರ್ಕಾರಗಳು) ಸಾಲಗಾರರಾಗಿಯೂ ಇರುವ ಸ್ಥಿತಿಗೆ ಬಂದು ಬಿಟ್ಟಿದ್ದೇವೆ. ಈ ಅಂಶದಲ್ಲಿ ಕೇವಲ ನಮ್ಮ ಶಾಸನ ಸಭೆ ಮಾತ್ರ ತನ್ನ ಅಭಿಪ್ರಾಯವನ್ನು ತಿಳಿಸಿಬಿಟ್ಟರೆ ಸಾಲದು. ಆದರೆ ಈಗ ಇನ್ನಾವ ಶಾಸನ ಸಭೆಗಳೂ ಇದನ್ನು ತಿಳಿಸಿರುವುದಿಲ್ಲ ಎಂದು ನಾವು ಸುಮ್ಮನೆ ಕೈಕಟ್ಟಿ ಕುಳಿತುಕೊಳ್ಳುವುದೂ ಕೂಡ ಸರಿಯಲ್ಲ. ಕೇಂದ್ರ ಸರ್ಕಾರ ನಮ್ಮೊಬ್ಬರಿಗಾಗಿ ಇದನ್ನು ಏನೂ ಮಾಡಬೇಕಾದ್ದಿಲ್ಲ. ಈ ಹಿಂದೆ ಮಹಾತ್ಮ ಗಾಂಧಿಯವರಿದ್ದ ಕಾಲದಲ್ಲೇ ಈ ವಿಪರೀತ ಅಧಿಕಾರ ಕೇಂದ್ರೀಕೃತವಾಗತಕ್ಕದ್ದನ್ನು ತಪ್ಪಿಸುವ ಉದ್ದೇಶದಿಂದ ಈ ರೀತಿಯಾಗಿ ಜೋನಲ್ ಕೌನ್ಸಿಲ್‌ಗಳನ್ನು ಏರ್ಪಡಿಸಿ, ಇವುಗಳ ಆಡಳಿತಕ್ಕೆ ರೈಲ್ವೆ, ಪೋಸ್ಟಲ್ ಸರ್ವಿಸ್ ಇತ್ಯಾದಿಗಳನ್ನೆಲ್ಲಾ ಕೊಡಬಹುದೆಂದು ಹೇಳಿದ್ದರು. ಈ ದಿವಸ ಇವುಗಳಮೇಲೆ ಸೆಂಟರಿನವರ ಆಡಳಿತವೇತಕ್ಕೆ ಇರಬೇಕು? ಆದರೆ ಪ್ರತಿಯೊಂದು ಪ್ರಾಂತೀಯ ಸರ್ಕಾರಗಳೂ ಒಂದು ಸುವ್ಯವಸ್ಥಿತವಾದ ರೀತಿಯಾದ ಆಡಳಿತ ನಡೆಸಿಕೊಂಡು ಬರುತ್ತಿವೆ. ಹೀಗಿರುವಾಗ ಈ ಕೇಂದ್ರಾಡಳಿತ ಕಟ್ಟಡಗಳ ವಿಚಾರದಲ್ಲಿ ಡೆಲ್ಲಿಯಲ್ಲಿರತಕ್ಕಂಥ ಸೆಂಟ್ರಲ್ P.W.D. ಇಲಾಖೆಯೇ ನೇರವಾಗಿ ಟೆಂಡರುಗಳನ್ನು ಕರೆದು ಈ ಕಟ್ಟಡಗಳ ಕೆಲಸವನ್ನೆಲ್ಲಾ ನಡೆಸಬೇಕೆಂದು ಹೇಳಿದರೆ ಈ ಕೆಲಸಗಳ ಬಗ್ಗೆ ಎಷ್ಟು ನಿಧಾನವಾಗುತ್ತದೆ! ಇಂಡಿಯಾ ಸರ್ಕಾರದ ಅಕೌಂಟೆಂಟ್ ಜನೆರಲ್‌ಅವರಾದ ಶ್ರೀ ನರಹರಿರಾಯರವರ ಮೂಲಕ ಈ ವಿಚಾರವನ್ನು ಕೇಂದ್ರ ಸರ್ಕಾರದ ಗಮನಕ್ಕೆ ತಂದು ಪ್ರಾಂತೀಯ ಸರ್ಕಾರಗಳು ಈ ಕೆಲಸಗಳನ್ನೆಲ್ಲಾ ಬಹಳ ದಕ್ಷತೆಯಿಂದ ನಡೆಸಿಕೊಂಡು ಬರುತ್ತಿವೆ, ಆದುದರಿಂದ ಈಗ ಈ ಅಧಿಕಾರಗಳನ್ನೆಲ್ಲಾ ಪ್ರಾಂತೀಯ ಸರ್ಕಾರಗಳಿಗೇ ಬಿಟ್ಟುಕೊಡತಕ್ಕ ವಿಚಾರವನ್ನು ಪರಿಶೀಲನೆ ಮಾಡಬೇಕೆಂದು ಹೇಳಲಾಯಿತು. ಈ ದಿವಸ ನಮ್ಮ ಮೈಸೂರು ದೇಶದಲ್ಲಿ ಒಂದು ಅಕೌಂಟೆಂಟ್ ಜನರಲ್ ಅವರ ಆಫೀಸನ್ನು ಕಟ್ಟಿಸಿದ್ದಾರೆ. He took special exemption from the Central P.W.D. and entrusted it to the Mysore Government and now everybody knows that the Mysore Government built that building at less cost and very expeditiously too. ಈಗ ಈ ರೀತಿ ಸೆಂಟ್ರಲ್ P.W.D. ಇಲಾಖೆ ಡೆಲ್ಲಿಯಲ್ಲಿ ಕುಳಿತುಕೊಂಡು—1½ ಸಾವಿರ, 2 ಸಾವಿರ ಮೈಲಿಗಳ ದೂರದಲ್ಲಿದ್ದುಕೊಂಡು ಕೆಲಸ ಮಾಡುತ್ತಿರುವಾಗ ನಮಗೆ ಈ ಕಟ್ಟಡಗಳನ್ನು ಬಿಡಿಸಿ

(SRI K. HANUMANTHAIYA.)

ಕೊಡುವಂತೆ ಮಾಡಲು ನಾವು ಏನೇ ಪ್ರಯತ್ನ ಪಟ್ಟಾಗ್ಯೂ ಅವರು ಈ ಕೆಲಸಗಳನ್ನು ಅಷ್ಟು ತಕ್ಷಣ ಮಾಡುವುದಕ್ಕಾಗುವುದಿಲ್ಲ. ಅಲ್ಲದೆ ಈ ಕಟ್ಟಡಗಳ ಕೆಲಸವನ್ನು ಅಷ್ಟು ದಕ್ಷತೆಯಿಂದ ಮಾಡಿಸುವುದಕ್ಕೂ ಸಾಧ್ಯವಾಗುವುದಿಲ್ಲ. ನಾನೇನಾದರೂ ಹೀಗೆ ನನ್ನ ಅಭಿಪ್ರಾಯಗಳನ್ನು ತಿಳಿಸಿದರೆ ಶ್ರೀ ವೆಂಕಟಪ್ಪನವರು ಕೋಪ ಮಾಡಿಕೊಳ್ಳುತ್ತಾರೆ.

ಶ್ರೀ ವಿ. ವೆಂಕಟಪ್ಪ (ಚನ್ನಪಟ್ಟಣ).—ಆದರೆ ತಾವು ಈ ಕೋಪವನ್ನು ಅವರಮೇಲೆ ಮಾಡದೆ ನಮ್ಮಮೇಲೆ ಮಾಡುತ್ತೀರಿ ಎಂದು ನಾನು ಹೇಳುತ್ತಿದ್ದೇನೆ.

ಶ್ರೀ ಕೆ. ಹನುಮಂತಯ್ಯ.—ಈ ಕೆಲಸಗಳು ಆಗ ಬೇಕಾಗಿದ್ದರೆ ಎಗ್ಸಿಕ್ಯುಟೀವ್ ಇಂಜಿನಿಯರ್ ಮತ್ತು ಸೂಪರಿಂಟೆಂಡಿಂಗ್ ಇಂಜಿನಿಯರ್ ಮತ್ತು ಛೀಫ್ ಇಂಜಿನಿಯರ್ ಮೂಲಕ ಈಗ ಪತ್ರವ್ಯವಹಾರಗಳನ್ನು ಮಾಡುತ್ತಿದ್ದಾರೆ. ಆದರೆ ಈಗ ಆ ಅಧಿಕಾರವನ್ನು ಈ ಸ್ಟೇಟ್ ಸರ್ಕಾರಗಳಿಗೆ ಕೊಡತಕ್ಕಂಥ ಒಂದು ವ್ಯವಸ್ಥೆಯನ್ನು ಈ ಮಸೂದೆಯಲ್ಲಿ ಸೂಚಿಸಿದ್ದಾರೆ. Procedural delay is the real trouble. ಆದುದರಿಂದ ಇನ್ನುಮೇಲೆ ಈ ಜೋನಲ್ ಕೌನ್ಸಿಲ್ ಗಳು ಜಾರಿಗೆ ಬರುವುದರಿಂದ ಈಗ ಇರತಕ್ಕಂಥ ಸೆಂಟ್ರಲ್ P.W.D. ಇಲಾಖೆಯನ್ನು ಅಬಾಲಿಷ್ ಮಾಡಬೇಕಾಗುತ್ತದೆ.

ಹೀಗೆ ಈ ದಿವಸ ಸೆಂಟರಿಗೆ ಸೇರಿರತಕ್ಕಂಥ ಯಾವ ಯಾವ ಕಾಮಗಾರಿಗಳ ವಿಭಾಗಗಳು ಯಾವ ಯಾವ ಸ್ಟೇಟಿಗೆ ಸೇರಿರುತ್ತವೆಯೋ ಅವುಗಳನ್ನು ಆಯಾ ಸ್ಟೇಟ್ ಗೌರ್ನಮೆಂಟೇ ವಹಿಸಿಕೊಳ್ಳಬೇಕು ಎಂದು ಹೇಳಿರುವ ಹಾಗೆಯೇ ಈ ಬ್ರಾಡ್‌ಕ್ಯಾಸ್ಟಿಂಗ್ ಇಲಾಖೆಯನ್ನೂ ಸಹ ಒಪ್ಪಿಸಬೇಕು. ಏಕೆಂದರೆ ಯಾವ ಇಲಾಖೆ ಅಲ್ಲಿಯ ಜನಜೀವನದ ಒಂದು ನಿಕಟ ಸಂಬಂಧವನ್ನು ಹೊಂದಿರುತ್ತದೆಯೋ ಇನ್ನೂ ಯಾವ ಯಾವ ಇಲಾಖೆಗಳು ಆಯಾ ಪ್ರಾಂತ್ಯಗಳ ಜನ ಜೀವನದ ಒಂದು ನಿಕಟ ಸಂಪರ್ಕವನ್ನು ಇಟ್ಟು ಕೊಂಡಿರುತ್ತವೆಯೋ ಅಂಥ ಎಲ್ಲ ಇಲಾಖೆಗಳ ಮೇಲ್ವಿಚಾರಣೆಯನ್ನೂ ಈ ಜೋನಲ್ ಕೌನ್ಸಿಲ್‌ಗಳಿಗೆ ವಹಿಸಿಕೊಟ್ಟರೆ, ಕೇಂದ್ರ ಸರ್ಕಾರ ಒಂದು ಮಹ ದುಪಕಾರ ಮಾಡಿದಂತಾಗುತ್ತದೆ. ಈ ಜೋನಲ್ ಕೌನ್ಸಿಲ್‌ಗಳು ಸರ್ಕಾರಗಳ ವಿಚಾರಕ್ಕೆ ಸಂಬಂಧ ಪಟ್ಟ ಎಲ್ಲ ವಿಷಯಗಳನ್ನು ಚರ್ಚೆ ಮಾಡುವುದಕ್ಕೂ ಮತ್ತು ಆ ಬಗ್ಗೆ ಕೇಂದ್ರ ಮತ್ತು ಪ್ರಾದೇಶಿಕ ಸರ್ಕಾರಗಳಿಗೆ ಸಲಹೆ ನೀಡುವುದಕ್ಕೂ ಅವಕಾಶವಿದೆ. ಇಂಡಿಯಾ ಸರ್ಕಾರದ ಆಡಳಿತಕ್ಕೆ ಒಳಪಟ್ಟಿರತಕ್ಕಂಥ ವಿಷಯಗಳು ಎಷ್ಟಿರುತ್ತವೆಯೋ ಅವುಗಳಲ್ಲಿ ಈ ಪ್ರಾಂತೀಯ ಸರ್ಕಾರಗಳ ಜನಜೀವನಕ್ಕೆ ಒಂದು ನಿಕಟವಾದ ಸಂಬಂಧವನ್ನು ಇಟ್ಟುಕೊಂಡಿರುವಂಥ ಎಲ್ಲ ವಿಷಯಗಳನ್ನೂ ಚರ್ಚೆ ಮಾಡಲು ಈ ಜೋನಲ್ ಕೌನ್ಸಿಲ್‌ಗಳಿಗೆ ಸಮಾನಾವಕಾಶವಿದೆ. ಈ ಬಾಡಿಗಳೆಲ್ಲ ಕೇವಲ ಸಲಹಾರೂಪದವುಗಳೆಂದು ಹೇಳಿದ್ದಾರೆ. ಈ ಮಾತು ಹಾಗಿರಲಿ. ಆದರೆ ಈ ಕೌನ್ಸಿಲ್‌ಗಳಿಗೆ ಗಡಿ ನಿರ್ಧಾರ, ಇತ್ಯಾದಿ ಅನೇಕ ವಿಷಯಗಳಲ್ಲದೆ ಆರ್ಥಿಕ ವ್ಯವಸ್ಥೆಗೆ ಸಂಬಂಧಪಟ್ಟ ವಿಚಾರಗಳನ್ನು ಚರ್ಚೆ ಮಾಡತಕ್ಕ ಅಧಿಕಾರ ಸಹ ಕೊಟ್ಟಿದ್ದಾರೆ. ಇದರಿಂದ ನಮಗೆಲ್ಲಾ ಇನ್ನೂ ಅನುಕೂಲವಾಯಿತು. ಆದರೆ ಇದೇ ವಿಚಾರದಲ್ಲಿ ಈಗಾಗಲೆ ನಾನು ಒಂದು ಅಂಶವನ್ನು ನನ್ನ ಹಿಂದಿನ ಭಾಷಣದಲ್ಲಿ ಹೇಳಿದ್ದೇನೆ. ಅದೇನೆಂದರೆ, ಈ "ಗಡಿ ವಾದಗಳ" ಜವಾಬ್ದಾರಿಯನ್ನು ಮಾತ್ರ ಈ ಜೋನಲ್ ಕೌನ್ಸಿಲ್‌ಗಳಿಗೆ ಕೊಡುವುದು ಬೇಡ ಎಂದು ಹೇಳಿದ್ದೆನು. ಈ ದಿವಸ ನಾವು ಈ ಜೋನಲ್ ಕೌನ್ಸಿಲ್‌ನಲ್ಲಿ ಕುಳಿತು ನಾವೂ ಆಂಧ್ರದವರೂ ಚರ್ಚೆ ಮಾಡುತ್ತಾ ನಮಗೆ ಮಡಕಸಿರಾ ತಾಲ್ಲೂಕನ್ನು ಬಿಟ್ಟುಕೊಡಿ ಎಂದು ಕೇಳಿದರೆ ಆಗ ಇದಕ್ಕೆ ಅವರು ನಿಮ್ಮ ಕೋಲಾರವನ್ನು ನಮಗೆ ಬಿಟ್ಟು ಕೊಡಿ ಎಂದು ಹೇಳಿ ಚರ್ಚೆ ಮಾಡಲು ಹೊರಡುವರು. ಆಗ ಹೇಗಾಗುತ್ತದೆ ಎಂದರೆ "ಪ್ರಥಮ ಚುಂಬನಂ, ದಂತ ಭಗ್ನಂ" ಎಂಬ ನಾಣ್ಣುಡಿಯಂತಾಗುವುದು. (ಸಭೆಯಲ್ಲಿ ಅನೇಕ ಮಾನ್ಯ ಸದಸ್ಯರು ಈ ಶ್ಲೋಕದ ಅರ್ಥವನ್ನು ಹೇಳಬೇಕೆಂದು ಹೇಳುತ್ತಿದ್ದ ಧ್ವನಿಗಳು ಬರುತ್ತಿದ್ದವು)

ನೀವು ಇದರ ಅರ್ಥವೇನೆಂಬುದನ್ನು ಮನೆಯಲ್ಲಿ ಹೋಗಿ ಕೇಳಿ ಆಗ ಗೊತ್ತಾಗುತ್ತದೆ. (ನಗು.) ಆದರೆ ಈ ದಿವಸ ಈ ಜೋನಲ್ ಕೌನ್ಸಿಲ್‌ಗಳು ಏರ್ಪಾಡಾಗ ಬೇಕಾಗಿದೆ. ಈ ಮಹಾ ಪ್ರಶ್ನೆಯನ್ನು ದೇಶದ ಮುಂದೆ ಇಟ್ಟಿರತಕ್ಕವರು ನಮ್ಮ ಪ್ರಧಾನ ಸಚಿವರಾದಂಥ ಪಂಡಿತ ನೆಹರೂ ಅವರು. ಅವರ ಈ ಉದ್ದೇಶ ಸಮರ್ಪಕವಾಗಿ ಸಾಧಿತವಾಗಬೇಕಾಗಿದ್ದರೆ ಯಾವ ಯಾವ ವಿಷಯಗಳಲ್ಲಿ ಈ ಪ್ರಾಂತೀಯ ಸರ್ಕಾರಗಳಿಗೆ ವ್ಯಾಜ್ಯ ವ್ಯವಹಾರ ಉಂಟಾಗಲು ಅಂಥ ಅವಕಾಶ ಗಳಿರುತ್ತವೋ, ಅಂಥ ಸಂದರ್ಭಗಳಲ್ಲಿ ಆ ಬಾಧಕ ಗಳುಂಟಾಗದಂತೆ ಅವುಗಳನ್ನು ತಪ್ಪಿಸಬೇಕೆಂಬ ಉದ್ದೇಶದಿಂದ ಮತ್ತು ಆ ವಿಚಾರಗಳನ್ನೆಲ್ಲಾ ಒಂದು ಸಹೃದಯ ಭಾವನೆಯಿಂದ ಬಗೆಹರಿಸುವಂತೆ ಅವಕಾಶ ಕಲ್ಪಿಸಲು ಮೊಟ್ಟಮೊದಲನೆಯದಾಗಿ ಅಂಥ ವಿಚಾರ ಗಳನ್ನೇ ಇದಕ್ಕೆ ಸೇರಿಸಿದ್ದಾರೆ. ಆದರೆ ನಾನು ಈ ಜೋನಲ್ ಕೌನ್ಸಿಲ್‌ಗಳಿಗೆ ಎಲ್ಲಿ ಅಧಿಕಾರ ಕೊಡ ಬೇಕು, ಎಲ್ಲಿ ಅಧಿಕಾರ ಕೊಡಬಾರದು ಎಂಬ ಪ್ರಶ್ನೆಗೆ ಹೋಗುವುದಿಲ್ಲ. ಎಲ್ಲೆಲ್ಲಿ ಅವಶ್ಯಕತೆ ಬೀಳುತ್ತದೆಯೋ ಅಲ್ಲಿ ಈ ಬೌಂಡರಿ ಕಮಿಷನ್‌ಗಳನ್ನು ನೇಮಕ ಮಾಡ ಬೇಕೆಂದು ಈ ಹಿಂದೆ ನಾನು ಒಂದಾವರ್ತಿ ಹೇಳಿದ್ದೆನು. ಆದರೆ ಅದೃಷ್ಟವಶಾತ್ ಅದೇ ರೀತಿಯಾಗಿ ಈಗ ಈ ಬಿಲ್ಲಿನಲ್ಲಿಯೂ ಹೇಳಿದೆ. ನಮ್ಮ ಮೈಸೂರು ದೇಶಕ್ಕೆ ಸಂಬಂಧಪಟ್ಟಹಾಗೆ ಒಂದು ಬೌಂಡರಿ ಕಮಿಷನ್ ನೇಮಕವಾಗಬೇಕಾಗಿದೆ. ಆಲೂರು, ಆದೋನಿ, ಮತ್ತು ರಾಯದುರ್ಗ ಪ್ರದೇಶಗಳೆಲ್ಲಾ ಮೈಸೂರು ಸಂಸ್ಥಾನಕ್ಕೇ ಸೇರಬೇಕಾಗಿರುತ್ತದೆಂದು ಅಲ್ಲಿಯ ಜನರೆಲ್ಲ ತುಂಬ ಆಸೆಯಿಟ್ಟುಕೊಂಡಿದ್ದಾರೆಂಬ ಸಮಾಚಾರ ನಮಗೆ ಲಿಖಿತ ಮೂಲಕವಾಗಿ ತಿಳಿದು ಬಂದಿದೆ. ಇನ್ನೂ ಇದೇ ರೀತಿಯಾಗಿ ಮಡಕಶಿರಾ, ತಳವಾಡಿ, ಗೋಬಿಚೆಟ್ಟಿಪಾಳ್ಯಂ, ನೀಲಗಿರಿ, ಚಂದ್ರಗಿರಿ ನದಿಯ ಉತ್ತರ ಭಾಗದ ಕಾಸರಗೋಡು ತಾಲ್ಲೂಕು ಇವುಗಳೆಲ್ಲಾ ನಮ್ಮ ಮೈಸೂರಿಗೆ ಸೇರಬೇಕೆಂದು ಅವರ ಮೆಮೋರ್‍ಯಾಂಡಂಗಳನ್ನು ಬರೆದುಕೊಂಡಿದ್ದಾರೆ. ಈ ಸಂದರ್ಭದಲ್ಲಿ ನಾವು ಸಂಯೋಗದಿಂದ ಕೆಲಸವನ್ನು ಸಾಧಿಸಬೇಕಾಗಿದೆ. ನಾನೀಗ ಇಷ್ಟೊಂದು ಊರುಗಳ ಹೆಸರನ್ನು ಹೇಳಿದೆನು. ಆದರೆ, ಈ ಭೂಮಿಯ ವಿಷಯದಲ್ಲಿ ನಾವು ಅತ್ಯಂತ ಮಿತಿಮೀರಿದ ದಾಹವನ್ನು ತೋರಿಸುವುದಕ್ಕೆ ಹೋದರೆ ಅದರಿಂದೇನೂ ಪ್ರಯೋಜನವಾಗುವುದಿಲ್ಲ. ಈ ವಿಚಾರದಲ್ಲಿ ಮದರಾಸ್ ಸರ್ಕಾರ ಮತ್ತು ನಮ್ಮ ಸರ್ಕಾರ ಬಹಳ ಸಂಯಮ ರೀತಿಯಲ್ಲಿ ವರ್ತಿಸಬೇಕಾಗಿದೆ. ಮದರಾಸಿನವರು ದೇವಿಕೊಳಂ ಮತ್ತು ಪೀಲಮೇಡ್ ಪ್ರದೇಶಗಳಿಗೆ ಬಹಳ ಚಳವಳಿ ಮಾಡುತ್ತಿದ್ದರು. ಆದರೆ ಈಗ ಒಮ್ಮನಸ್ಸಿನಿಂದ ಇಂಡಿಯಾ ಸರ್ಕಾರದ ತೀರ್ಮಾನಕ್ಕೆ ಒಪ್ಪಿದ್ದಾರೆ. ಅವರು ಒಂದು ಬಹಳ ದೊಡ್ಡನೀತಿಯನ್ನು ಅನುಸರಿಸಿದ್ದಾರೆ. ಆದರೆ ಹೀಗೆ ನಾವು ಕೇಳ

ತಕ್ಕ ವಿಷಯಗಳಲ್ಲಿ ಬಹಳ ಎಚ್ಚರದಿಂದಿರಬೇಕು. ನಾವು ಹೇಗೆ ಕೇಳುವುದಕ್ಕೆ ಪ್ರಾರಂಭಿಸುತ್ತೇವೋ ಹಾಗೆ ಇತರರೂ ಕೂಡ ನಮಗೂ ಹಾಗೆಯೇ ಕೊಡಿ ಎಂದು ಕೇಳುವುದಕ್ಕೆ ಪ್ರಾರಂಭಿಸಿದರೆ ಆಗ ನಾವೇ ಈ ತಪ್ಪಿಗೆ ಸಿಕ್ಕಿಕೊಳ್ಳಬೇಕಾಗುತ್ತದೆ. ಈ ದಿವಸ ಕಾಸರಗೋಡು-ನೀಲಗಿರಿ ಬೌಂಡರಿಗಳನ್ನು ನಮಗೆ ಕೊಡಿ ಎಂದು ಮದರಾಸಿನವರೂ, ಮಹಾರಾಷ್ಟ್ರರು ನಮಗೆ ಬೆಳಗಾಂ ಕೊಡಿ ಎಂದೂ, ಆಂಧ್ರರು ನಮಗೆ ಬಳ್ಳಾರಿ ತಾಲ್ಲೂಕನ್ನು ಕೊಡಿ ಎಂದೂ, ತಮಿಳರು K.G.F.ನ್ನು ನಮಗೆ ಕೊಡಿ ಎಂದೂ ಎಲ್ಲರೂ ಕೇಳಬಹುದು. ಇದೊಂದು ಬಹಳ ದೊಡ್ಡ ಸಮಸ್ಯೆ. ಏಕೆಂದರೆ, ಇಂಥ ದೊಡ್ಡ ಸಮಸ್ಯೆಗಳ ಬಗ್ಗೆ ನಾವು ಒಂದು ಬಾಗಿಲನ್ನು ತೆರೆದರೆ ಆಗ ಒಂದು ದೊಡ್ಡ ಪ್ರವಾಹವೇ ಬಂದುಬಿಡುತ್ತದೆ. We will be opening the flood-gates of territorial greed. ಆದರೆ ಈ ಸಭೆಯು ಈ ವಿಚಾರಗಳಲ್ಲಿ ಒಪ್ಪಿಗೆಕೊಟ್ಟರೂ ಕೊನೆಗೆ ಅದು ಪಾರ್ಲಿಮೆಂಟಿನ ಒಪ್ಪಿಗೆ ಪಡೆಯಬೇಕಾಗಿದೆ. ಈ ನಮ್ಮ ಬೇಡಿಕೆಗಳು ನ್ಯಾಯವಾದವುಗಳೆಂದು ಅವರ ಮನಸ್ಸಿಗೆ ಭಾಸವಾಗಬೇಕು. ಈ ದೃಷ್ಟಿಯಿಂದ ನಾವು ಯಾವ ಯಾವ ವಿಷಯಗಳಲ್ಲಿ ಈ ಬೌಂಡರಿ ಕಮಿಷನ್ ನೇಮಿಸಬೇಕೆಂದು ಕೇಳಬೇಕಾಗಿರುತ್ತದೆಯೋ ಆ ಎಲ್ಲ ವಿಚಾರಗಳಲ್ಲಿಯೂ ಒಂದು ವಿಶಾಲ ದೃಷ್ಟಿಯನ್ನಿಟ್ಟುಕೊಂಡು ನಾವು ಅವುಗಳನ್ನು ಕೇಳಬೇಕಾಗಿದೆ. ನಾವು ಹೀಗೆ ಕೇಳುವಾಗ ಬೇರೆ ಪ್ರಾಂತ್ಯಗಳವರು ಈ ಬಗ್ಗೆ ಮತ್ತೆ ಯಾವ ವಿಚಾರ ಕೇಳಬಹುದು ಎಂಬುದನ್ನು ನಾವು ಮನದಲ್ಲಿಟ್ಟುಕೊಂಡು ಈ ಬಗ್ಗೆ ಒಂದು ಕೊನೆಯ ತೀರ್ಮಾನವನ್ನು ತೆಗೆದುಕೊಳ್ಳಬೇಕಾಗುತ್ತದೆ. ನಮ್ಮಲ್ಲಿ ಯಾವ ಪಕ್ಷಗಳೇ ಇರಲಿ, ಪಾರ್ಟಿಗಳೇ ಇರಲಿ ನಾವು ಈ ಬಗ್ಗೆ ಒಂದು ಸರ್ವಸಮ್ಮತವಾದ ಅಭಿಪ್ರಾಯವನ್ನು ತೆಗೆದುಕೊಳ್ಳತಕ್ಕ ಬಗ್ಗೆ ಇದಕ್ಕೆ ಯಾವ ಭಿನ್ನಾಭಿಪ್ರಾಯವೂ ಇರಬಾರದು. ಈ ವಿಚಾರದಲ್ಲಿ ನಾವು ಬಹಳ ಜವಾಬ್ದಾರಿಯುತವಾಗಿ ವರ್ತಿಸಬೇಕಾಗಿದೆ.

11-30 A.M.

ಇನ್ನೂ ಒಂದು ವಿಚಾರ ಪ್ರಸ್ತಾಪಮಾಡಬೇಕಾಗಿದೆ. ಅದು ಬಹಳ ಪ್ರಾಮುಖ್ಯವಾದ ವಿಚಾರ. ಅದಕ್ಕೆ ಅನೇಕರು ಗಮನಕೊಟ್ಟಿದ್ದಾರೆ, ಕೆಲವರು ಮಾತ್ರ ಗಮನಕೊಟ್ಟಿಲ್ಲ. ಮುಂದೆ ಈ ಹೊಸ ಸಂಸ್ಥಾನ ಆದಾಗ ಸಂಬಳ ಸಾರಿಗೆಗಳು ಹೇಗೆ ಇರುತ್ತವೆ ಎಂಬ ವಿಷಯ. ಮೈಸೂರು ಸಂಸ್ಥಾನದಲ್ಲಿ ಸಂಬಳ ಸಾರಿಗೆಗಳು ಕಡಿಮೆ ಬೊಂಬಾಯಿ ಮದರಾಸು ಈ ಪ್ರಾಂತ್ಯಗಳಲ್ಲಿ ಸಂಬಳ ಹೆಚ್ಚು, ಅಧಿಕಾರಿ ಇಲ್ಲಿ ಬಂದರೆ ಸೀನಿಯಾರಿಟಿ ಹೋಗುತ್ತದೆ ಎಂಬ ಇತ್ಯಾದಿ ಸಮಸ್ಯೆಗಳು ಇವೆ. ಒಬ್ಬ ಸಂಬಂಧಪಟ್ಟ ಅಧಿಕಾರಿ ಅಥವಾ interested officer ಯಾವುದಾದರೂ ಒಂದು viewpoint ಹೇಳಿದರೆ,—ಆ viewpoint ಯೋಚನೆಮಾಡಬೇಕಾದದ್ದು ನ್ಯಾಯ ಅಥವಾ ಒಂದು ಗುಂಪಿನ ಅಧಿಕಾರಿ ಹೇಳಿದರೆ ಅದನ್ನು ಯೋಚನೆ ಮಾಡಬೇಕಾದದ್ದು ನ್ಯಾಯ. ಆದರೆ ನಾನು ತಮ್ಮಲ್ಲಿ ಪ್ರಾರ್ಥಿಸತಕ್ಕದ್ದು ಇಷ್ಟೆ—ಈ ಮಹಾ ಪ್ರಶ್ನೆಯನ್ನು ಬಗೆಹರಿಸುವಾಗ ಯಾವುದಾದರೂ ಒಂದು ವರ್ಗದ ಜನರಿಗೆ ಸಂಬಳ ಕಡಿಮೆಯೇ ಅಥವಾ ಹೆಚ್ಚೇ ಎಂದು ಹೇಳಿ ಪರಿಶೀಲನೆ ಮಾಡಬಾರದು. ಮನೆಯಲ್ಲಿ ಅಡಿಗೆ ಎಷ್ಟಿದ್ದರೆ ಅಷ್ಟನ್ನು ಎಲ್ಲರೂ ಕೂಡಿ ಒಟ್ಟು ಕುಟುಂಬದವರು ಹಂಚಿಕೊಂಡು ಊಟಮಾಡುವ ಹಾಗೆ ಮುಂದೆ ಸ್ಥಾಪನೆಯಾಗತಕ್ಕ ಸಂಸ್ಥಾನದಲ್ಲಿ ಎಷ್ಟು ಇದೆಯೋ ಅಷ್ಟನ್ನು ಎಲ್ಲರೂ ಸಮರ್ಪಕವಾಗಿ ಹಂಚಿಕೊಳ್ಳಬೇಕು.

ಸಂಸ್ಥಾನ ಸ್ಥಾಪನೆಯಾಗತಕ್ಕದ್ದು ಸರ್ಕಾರಿ ಅಧಿಕಾರಿಗಳ ಯೋಗಕ್ಷೇಮ ರಕ್ಷಣೆಗೆ ಅಲ್ಲ, ಎಂಬುದನ್ನು ಮನಸ್ಸಿನಲ್ಲಿ ಸ್ಪಷ್ಟಪಡಿಸಿಕೊಂಡರೆ ಸಂಬಳ ಹೆಚ್ಚಿಸಿ, ಅದು ಮಾಡಿ, ಇದು ಮಾಡಿ ಎಂದು ಹೇಳುವ ಉದ್ವೇಗ ಕಡಿಮೆಯಾಗುತ್ತದೆ. ಅಧಿಕಾರಿಗಳನ್ನು ಹೊಗಳಿ, ಮೆಚ್ಚಿಸಿಕೊಳ್ಳಬೇಕು ಎಂದೆನ್ನುವ ವಾದವೂ ಸರಿಯಲ್ಲ ಅಥವಾ ಅವರಿಗೆ ತೊಂದರೆ ಮಾಡಬೇಕು ಎನ್ನುವ ವಾದವೂ ಸರಿಯಲ್ಲ. Every one must fit in into the picture that is coming into being. ಅದಕ್ಕೆ ನಾನು ಹೇಳುತ್ತೇನೆ, ಮುಂದಿನ ಸಂಸ್ಥಾನದ ಆಯವ್ಯಯದ ದೃಷ್ಟಿಯಿಂದ ಹೆಚ್ಚಿಗೆ ಸಂಬಳ ಇರತಕ್ಕವರು ಸ್ವಲ್ಪ ಕಡಿಮೆಮಾಡಿಕೊಳ್ಳಬೇಕು ಎಂದರೆ ಅದಕ್ಕೆ ಸಿದ್ಧರಾಗಿರಬೇಕು. ಮೈಸೂರು ದೇಶದಲ್ಲಿ ಕಡಿಮೆ ಸಂಬಳ ಇರುವುದರಿಂದ ಅದನ್ನು ಸ್ವಲ್ಪ ಹೆಚ್ಚುಮಾಡುತ್ತೇವೆ ಎಂದರೆ ಹೊರಗಡೆ ಇರತಕ್ಕವರು ಸಂತೋಷಪಡಬೇಕು. ಕರ್ಣಾಟಕ ಆಗಬೇಕು ಎನ್ನುವುದರಲ್ಲಿ ಹೊರಗಡೆ ಇರತಕ್ಕ ಅಧಿಕಾರ ವರ್ಗದವರೂ ಕೂಡ ಬಹಳ ಉತ್ಸಾಹಿತರಾಗಿದ್ದಾರೆ; ಆ ಉತ್ಸಾಹಕ್ಕೆ ಸ್ವಲ್ಪ ಕಾಣಿಕೆಯಾದರೂ ಅರ್ಪಿಸಲು ಅವರು ಸಿದ್ಧವಾಗಿರಬೇಕು, ಅವರೇನಿದ್ದರೂ ಕೂಡ ಎಲ್ಲಿ ಹೋದರೆ ಹೆಚ್ಚು ಸಂಬಳ ಸಿಕ್ಕುತ್ತದೆ, ಹೆಚ್ಚು ಸಂಭಾವನೆ ಸಿಕ್ಕುತ್ತದೆ, ಹೆಚ್ಚು ಹಣ ಸಿಕ್ಕುತ್ತದೆ ಎಂದು ಭಾವಿಸಿಕೊಂಡು, ಅದಕ್ಕೇ ಕರ್ಣಾಟಕವಾಗಬೇಕೆಂದು ಹೇಳಿದರೆ, ಆ ವಾದದಲ್ಲಿ ಅಷ್ಟು ದೇಶಾಭಿಮಾನ ಇರುವುದಿಲ್ಲ, ಅಷ್ಟು ಸದುದ್ದೇಶವೂ ಇರುವುದಿಲ್ಲ. ಇವೊತ್ತಿನ ದಿವಸ ಘಂಟಾಘೋಷವಾಗಿ ನಾನು ಹೇಳುತ್ತೇನೆ, ಈ ಶಾಸನಸಭೆ ಈ ಆಯವ್ಯಯಗಳನ್ನು ಪರಿಶೀಲನೆಗೆ ತೆಗೆದುಕೊಂಡು ಎಲ್ಲ ಅಧಿಕಾರಿಗಳಿಗೂ ಯಾವ ಸಂಬಳಸಾರಿಗೆಗಳನ್ನು ನಿಗದಿಮಾಡುತ್ತಾರೆಯೋ ಅದನ್ನು ಸಂತೋಷದಿಂದ ಅವರು ಒಪ್ಪಿಕೊಳ್ಳತಕ್ಕವರಾಗಿರಬೇಕು. ಒಂದು ವೇಳೆ ಮೈಸೂರಿನ ಪೇ ಸ್ಟ್ರಕ್ಚರ್ ಏನಿದೆ ಅದನ್ನು ಮದರಾಸು, ಬೊಂಬಾಯಿನ ಪೇ ಸ್ಟ್ರಕ್ಚರಿಗೇ ನಾವುಗಳೆಲ್ಲಾ ಸೇರಿ ಏರಿಸಲೂಬಹುದು ಅಥವಾ ದುಡ್ಡಿಲ್ಲದ ಸಂದರ್ಭದಲ್ಲಿ ಅವರ ಸಂಬಳವನ್ನು ಕಡಿಮೆ ಮಾಡಿ ಇವರ ಸಂಬಳವನ್ನು ಹೆಚ್ಚು ಮಾಡಿ ಒಂದು ರಾಜಿ ಮಾಡಿದರೂ ಮಾಡಬಹುದು. ಆದರೆ ಯಾವ ಅಧಿಕಾರಿಯೇ ಆಗಲಿ ನನ್ನ ಸಂಬಳ ಒಂದು ಕಾಸೂ ಕಡಿಮೆಯಾಗಕೂಡದು ಎಂದು ಹೇಳಿ ವಾದಿಸುವುದಕ್ಕೆ ಪ್ರಾರಂಭ ಮಾಡಿದರೆ ಅದು ಮುಂದೆ ಸ್ಥಾಪನೆಯಾಗತಕ್ಕ ಒಂದು ಸಂಸ್ಥಾನ ಏನಿದೆಯೋ ಆ ಸಂಸ್ಥಾನದ ಹಿತವನ್ನು ಅವರು ಮನಸ್ಸಿನಲ್ಲಿಟ್ಟುಕೊಂಡಿದ್ದಾರೆ ಎಂದು ಹೇಳುವುದಕ್ಕಾಗುವುದಿಲ್ಲ. ಇದು ಹೇಗೆ ಆಗುತ್ತದೆ ಎಂದರೆ, we must eat to live and not live to eat. ಹೀಗೆ ಸರ್ಕಾರದ ಅಧಿಕಾರಿಗಳ ಸಂಸ್ಥಾನದ ಸೇವೆಮಾಡುವುದಕ್ಕಾಗಿಯೇ ಹೊರತು, ಸಂಸ್ಥಾನ ಇರತಕ್ಕದ್ದು ಸರ್ಕಾರದ ಅಧಿಕಾರಿಗಳಿಗೆ ಸಂಬಳ ಕೊಡುವುದಕ್ಕಲ್ಲ. ಈ ವಾತಾವರಣವನ್ನು ತಾವು ಅವರ ಮನಸ್ಸಿನಲ್ಲಿ ಕಲ್ಪಿಸಬೇಕಾಗಿರತಕ್ಕದ್ದು ತಮ್ಮ ಗುರುತರವಾದ ಜವಾಬ್ದಾರಿ ಆಗಿದೆ. ಈ ಸರ್ಕಾರಿ ಅಧಿಕಾರಿಗಳಿಗೆ ಹೆಚ್ಚು ಸಂಬಳ ಕೊಡುವುದಕ್ಕೆ ಆಗುವುದಿಲ್ಲ ಎಂದು ಹೇಳಿದ ನಾನು ಕೆಟ್ಟವನಾದ ಹಾಗೂ ತಾವು ಒಳ್ಳೆಯವರಾಗಿ ಹೆಚ್ಚು ಸಂಬಳ ಕೊಡಿಸುವುದಕ್ಕೆ ಪ್ರಯತ್ನಮಾಡಿದ ಹಾಗೂ ಶ್ರೀ ಮುಲ್ಕ ಗೋವಿಂದ

(ಶ್ರೀ ಕೆ. ಹನುಮಂತಯ್ಯ.)

ರೆಡ್ಡಿಯವರು ಹೇಳಿದರೆ ನಾನು ಏನು ಹೇಳಲಿ? These officials who come from outside must be prepared if necessary for salary cuts and if they are not prepared to make such sacrifice they may as well opt out to remain in other States. ಮೈಸೂರು ಸಂಸ್ಥಾನದಲ್ಲಿ ಈ ಶಾಸನ ಸಭೆಯಲ್ಲಿ ಅಂತ್ಯವಾಗಿ ಯಾವುದೊಂದು ರಾಜಿ ತೀರ್ಮಾನವಾಗುತ್ತದೆಯೋ ಆ ತೀರ್ಮಾನಕ್ಕೆ ಒಪ್ಪಿಕೊಳ್ಳತಕ್ಕ ಅಧಿಕಾರಿಯಾಗಬೇಕು. ಹೈಕೋರ್ಟ್ ಜಡ್ಜಿಗಳದು ಒಂದು ದೊಡ್ಡ ಸಮಸ್ಯೆಯಾಗಿದೆ. ನಾವು ಹೈಕೋರ್ಟು ಜಡ್ಜಿಗಳಿಗೆ ಎರಡುಸಾವಿರ ರೂಪಾಯಿ ಸಂಬಳ ಕೊಟ್ಟುಕೊಂಡು ಸಂತೋಷವಾಗಿ ಕೆಲಸ ಮಾಡಿಕೊಂಡು ಹೋಗುತ್ತಾ ಇದ್ದೇವೆ. ನ್ಯಾಷನಲ್ ಡೆವಲಪ್‌ಮೆಂಟ್ ಕೌನ್ಸಿಲ್ ಮೀಟಿಂಗಿನಲ್ಲಿ ಈ ವಿಚಾರವಾಗಿ ನನಗೂ ಇತರರಿಗೂ ತೀವ್ರವಾದ ಚರ್ಚೆ ಆಯಿತು. ಅವರು ಎಲ್ಲ ಹೈಕೋರ್ಟುಗಳಲ್ಲೂ ಘನತೆ, ಗಾಂಭೀರ್ಯ ಕಾಪಾಡಬೇಕಾದರೆ ಮದರಾಸು, ಬೊಂಬಾಯಿ ಹೈಕೋರ್ಟುಗಳಲ್ಲಿ ಎಷ್ಟು ಸಂಬಳ ಇದೆಯೋ ಅಷ್ಟೇ ಸಂಬಳವನ್ನು ಮೈಸೂರಿನಲ್ಲೂ ತಿರುವಾಂಕೂರು-ಕೊಚ್ಚಿನಲ್ಲೂ ಕೊಡಬೇಕೆಂದು ಹೇಳಿದರು. ಅದರಿಂದ ಎರಡು ಸಾವಿರ ರೂಪಾಯಿ ಸಂಬಳ ಇರುವುದು ನಾಲ್ಕು ಸಾವಿರ ರೂಪಾಯಿ ಆಗುತ್ತದೆ. ಚೀಫ್‌ಜಸ್ಟಿಸ್‌ಗೆ ಐದು ಸಾವಿರ ರೂಪಾಯಿ ಆಗುತ್ತದೆ. ಇದು ಬಹಳ ಹೆಚ್ಚಾಗುತ್ತದೆ. ಅಲ್ಲೆಲ್ಲಾ ಮೊದಲಿನಿಂದಲೂ ಕೊಟ್ಟಿದ್ದಾರೆ, ಅದಕ್ಕೆ ನಮ್ಮ ಆಕ್ಷೇಪಣೆ ಇಲ್ಲ. ಇಲ್ಲಿ ಈ ಶಾಸನ ಸಭೆಯಲ್ಲಿ ಹಿಂದೆ ನಾನು ಇಲ್ಲದೇ ಇರುವಾಗ ಸಾವಿರ ರೂಪಾಯಿಗಳಿಗಿಂತ ಹೆಚ್ಚು ಸಂಬಳ ಯಾವ ಅಧಿಕಾರಿಗೂ ಕೊಡಬಾರದು ಎಂದು ಹೇಳಿ ನಿರ್ಣಯ ಮಾಡಿದ್ದಾರೆ. ನಾವು ಯಾವುದಾದರೂ ಒಪ್ಪಿಕೊಳ್ಳೋಣ. ಆದರೆ ಈ ಶಾಸನಸಭೆಯ ಅಭಿಪ್ರಾಯಕ್ಕೆ ಮನ್ನಣೆ ಇರಬೇಕು. ಒಂದು ವೇಳೆ ತಾವು ಸಾವಿರ ರೂಪಾಯಿ ಎಂದರೆ ಸಾವಿರ ರೂಪಾಯಿಯನ್ನೇ ಕಟ್ಟುನಿಟ್ಟಾಗಿ ಮಾಡಿ, ಒಂದು ಕಾಸೂ ಹೆಚ್ಚಿಗೆ ಕೊಡಬಾರದು ಎಂದು ಅರ್ಥವಲ್ಲ. ಆ ಒಂದು ಮಟ್ಟದಿಂದ ಮಿತಿಮೀರಿ ಹೋಗಬಾರದು ಎಂಬ ಡೈರೆಕ್ಷನ್ ಈ ಸಭೆ ಕೊಟ್ಟಿರುವಾಗ ಅದು ಎಲ್ಲರಿಗೂ ಅನ್ವಯಿಸುತ್ತದೆ. ತಾವು ಸೋಷಿಯಲ್ ಜಸ್ಟೀಸ್ ಎಂದು ಏನು ಹೇಳುತ್ತೀರೋ ಅದನ್ನು ಕಾರ್ಯರೂಪಕ್ಕೆ ತರಬೇಕು. ನಾನು ಅನೇಕಸಾರಿ ಹೇಳಿದ್ದೇನೆ, 80 per cent of our people are in the villages. I would request my friend Sri Mulka Govinda Reddy to consider their economic position. While we are pleading for increased emoluments to workers in factories and Government servants in offices, we should also consider the *per capita* income of the villagers for the purpose of distributing what may be called the national wealth. ತಾವು ಸರ್ಕಾರಿ ಅಧಿಕಾರಿಗಳಿಗೆ ಮತ್ತು ಕಾರ್ಮಿಕರಿಗೆ ಎಲ್ಲ ಸೌಕರ್ಯಗಳನ್ನೂ ಕಲ್ಪಿಸಿಕೊಡಿ, ಅವರಿಗೆ ಮೆಟರ್‌ನಿಟಿ ಬೆನಿಫಿಟ್, ಲೈಫ್ ಇನ್ಷೂರೆನ್ಸ್, ಪೆನ್ಷನ್ ಕೊಡಿ, ಮನೆ ಕಟ್ಟಿಸಿಕೊಡಿ, ಎಲ್ಲ ಅನುಕೂಲಗಳನ್ನು ಮಾಡಿಕೊಡಿ ಎಂದು ಹೇಳಿ ಶೇಕಡ 80 ಭಾಗದ ಮಿಕ್ಕ ಜನರಿಗೆ ಯಾವ ಸೌಲಭ್ಯವನ್ನೂ ಕಲ್ಪಿಸಿ ಕೊಡದಿದ್ದರೆ ಅದು ಸೋಷಿಯಲ್ ಜಸ್ಟೀಸ್ ಆಗುವುದಿಲ್ಲ. 100 ರೂಪಾಯಿ ಇದ್ದರೆ ಅದನ್ನು ಸಮನಾಗಿ ಹಂಚಿಕೊಳ್ಳಬೇಕೇ ಹೊರತು 100 ರೂಪಾಯಿಗಳಲ್ಲಿ ಒಂದುವರ್ಗಕ್ಕೆ ಹೆಚ್ಚಿನ ಭಾಗ ಕೊಡಿ ಮಿಕ್ಕ ಇನ್ನೊಂದು ವರ್ಗಕ್ಕೆ ಕಡಿಮೆ ಭಾಗ ಕೊಡಿ ಎಂದರೆ ಹೇಗಾಗುತ್ತದೆ? I believe in your sincerity and in your political philosophy. If you want to do social justice, take into consideration the national resources, distribute them equitably between the classes. In the existing state of affairs, the organised labour and the officers in Government employment get a far better deal than the man in the village. That must be recognised. I do not say that this can be completely got rid of. And I am not pleading either that the level of the emoluments of these two classes of employees should be brought down to the level of the *per capita* income of the villager. I am not so unreasonable. There is bound to be great disparity. But let us not aggravate that disparity. Let us not further increase that gap. The duty cast on us by the socialistic society, we all have in view. It is therefore that I make an earnest attempt and the earliest attempt to clarify the situation that the incoming officers must be prepared if necessary for salary cuts.

ಮೇಲ್‌ಮನೆ ಮತ್ತು ಕೆಳಮನೆಯ ವಿಚಾರವನ್ನು ಪ್ರಸ್ತಾಪ ಮಾಡಬೇಕೆಂದು ಹೇಳಿ ನನ್ನ ಮಾನ್ಯ ಮಿತ್ರರಾದ ಭೀಮಪ್ಪನಾಯಕರು ಹೇಳುತ್ತಾರೆ. ಈಗ ನಾನು ಮೇಲ್‌ಮನೆ ಇರಬೇಕು ಎಂದರೂ ಕಷ್ಟ, ಹೋಗಬೇಕು ಎಂದರೂ ಕಷ್ಟ. ಆದ್ದರಿಂದ ಈ ವಿಚಾರದಲ್ಲಿ ಸಮಾಲೋಚನೆ ಮಾಡೋಣ. ಯಾವ ಅಭಿಪ್ರಾಯಕ್ಕೆ ಬರುತ್ತೇವೆಯೋ ಆ ರೀತಿ ಮಾಡಿಕೊಳ್ಳೋಣ. ಅದನ್ನು ಈ ದಿವಸವೇ ತಿಳಿಸಿ ನಾನು ಒಂದು ಲೀಡ್ ಕೊಡುವುದು ಸರಿಯಲ್ಲ ಎಂದು ಹೇಳಿ ಆ ವಿಷಯವನ್ನು ಪ್ರಸ್ತಾಪ ಮಾಡಲಿಲ್ಲ.

ಇನ್ನೊಂದು ವಿಷಯ ತಾವು ಹೇಳುವುದು ಪಾರ್ಲಿಮೆಂಟರಿ ಕಾನ್‌ಸ್ಟಿಟ್ಯೂಯೆನ್ಸಿಯು ಒಂಭತ್ತು ಜನ ಶಾಸನ ಸಭೆಯ ಸದಸ್ಯರು ಇದ್ದರು, ಅದನ್ನು ಈ ಬಿಲ್ಲಿನಲ್ಲಿ ಏಳಕ್ಕೆ ಇಳಿಸಿದ್ದಾರೆ, ಅದನ್ನು ಪ್ರಸ್ತಾಪ ಮಾಡಬೇಕು ಎಂದು. ಇದು ಒಂದಕ್ಕೊಂದು ಸಂಬಂಧವಿದೆ. ಲೆಜಿಸ್ಲೆಟಿವ್ ಕೌನ್ಸಿಲ್ ಇದ್ದರೆ ಎಷ್ಟಿರಬೇಕು, ಲೆಜಿಸ್ಲೆಟಿವ್ ಕೌನ್ಸಿಲ್ ರದ್ದಾದರೆ ಎಷ್ಟಿರಬೇಕು ಎಂಬುದೇ ಅದಕ್ಕೂ ಇದಕ್ಕೂ ಇರುವ ಸಂಬಂಧ. ಆದ್ದರಿಂದ ಇವೆರಡು ಪ್ರಶ್ನೆಗಳನ್ನೂ ಜೊತೆಯಲ್ಲೇ ಬಗೆಹರಿಸಿದರೆ ಸುಲಭವಾಗಿ ಬಗೆಹರಿಯುತ್ತದೆ.

ಮೂರು ನಾಲ್ಕು ತತ್ವಗಳ ವಿಚಾರದಲ್ಲಿ ಮಾತ್ರ ನಾನು ಈ ದಿವಸ ಮಾತನಾಡಿದ್ದೇನೆ. ಅನೇಕ ತಿದ್ದುಪಡಿಗಳು ಬರುತ್ತವೆ. ನಾನೂ ತಿದ್ದುಪಡಿಗಳನ್ನು ಕಳುಹಿಸುತ್ತೇನೆ ಮತ್ತು ಸಭೆಯ ಅನೇಕ ಮಾನ್ಯ ಸದಸ್ಯರುಗಳೂ ಕೂಡ ಕಳುಹಿಸುತ್ತಾರೆ. ಈ ಎಲ್ಲ

ತಿದ್ದುಪಡಿಗಳೂ ಬಂದಮೇಲೆ ನಾನು ಒಂದು ಮಾರ್ಗವನ್ನು ಅನುಸರಿಸಬೇಕೆಂದು ಇದ್ದೇನೆ. ಅದಕ್ಕೆ ಈ ಸಭೆಯ ಸಮ್ಮತಿ ಬೇಕೆಂದು ಹೇಳಿ ನನ್ನ ಪ್ರಾರ್ಥನೆ.

ಕಾರಣಾಂತರದಿಂದ, ನಾವು ಉದ್ದೇಶಪಟ್ಟೆವೋ ಪಡಲಿಲ್ಲವೋ, ಈ ಎಸ್.ಆರ್. ಕಮಿಷನ್ ವರದಿ ಮತ್ತು ಈ ಬಿಲ್ಲು ಪಕ್ಷಾತೀತವಾದ ಪ್ರಶ್ನೆ ಆಗಿದೆ. ಅದು ಒಂದು ದೃಷ್ಟಿಯಿಂದ ನೋಡಿದರೆ ಒಳ್ಳೆಯದೇ. ಸಂಸ್ಥಾನಕ್ಕೆ ಸಂಬಂಧಪಟ್ಟ ಎಲ್ಲ ವಿಷಯಗಳಲ್ಲೂ ಈ ಸಭೆ ಪಕ್ಷಭೇದವನ್ನು ಮರೆತು ಒಂದು ಕುಟುಂಬದಂತೆ ವರ್ತಿಸತಕ್ಕ ಸಂಪ್ರದಾಯವನ್ನು ಸ್ಥಾಪಿಸಬೇಕು. ಆ ಸಂಪ್ರದಾಯ ಈ ಬಿಲ್ಲಿಗೂ ಕೂಡ ಅನ್ವಯಿಸುತ್ತದೆ. ಎಲ್ಲ ತಿದ್ದುಪಡಿಗಳೂ ಬಂದಮೇಲೆ ಇಲ್ಲಿರತಕ್ಕ ಎಲ್ಲ ಪಕ್ಷಗಳವರೂ ಸೇರಿ ಚರ್ಚೆಮಾಡಿ ಸರ್ವಸಮ್ಮತವಾದ ತೀರ್ಮಾನಗಳನ್ನು ಈ ಸಭೆಯ ಮುಂದೆ ಇಡಬೇಕೆಂದು ಎನ್ನತಕ್ಕದ್ದೇ ನನ್ನ ಯೋಚನೆ. ಆ ರೀತಿ ಮಾಡಬೇಕು ಎನ್ನುವುದಕ್ಕೆ ತಮ್ಮೆಲ್ಲರ ಒಪ್ಪಿಗೆ ಸಿಕ್ಕಿದರೆ ಮುಂದುವರಿಯುವುದಕ್ಕೆ ನನಗೆ ಅವಕಾಶವಾಗುತ್ತದೆ.

ಕೊನೆಯದಾಗಿ, ನನ್ನ ಪ್ರಾರ್ಥನೆ : ಈ ಸಭೆ ಈ ವಿಷಯದಲ್ಲಿ ಚರ್ಚೆ ಮಾಡುವಾಗ ಮೊದಲು ನಾನು ಏನು ಗುರಿಯನ್ನು ಹೇಳಿದೆನೋ ಆ ಗುರಿಯನ್ನು ಇಟ್ಟುಕೊಂಡು ಮಾತನಾಡಬೇಕು; ಅದರಿಂದ ಜನರಿಗೆ ಒಳ್ಳೆಯದಾಗುತ್ತದೆ. ಎಲ್ಲಕ್ಕಿಂತಲೂ ಶಾಂತಿ, ಸೌಹಾರ್ದ ಬೆಳೆಯಬೇಕು. ನಾವು ಮಾತನಾಡುತ್ತಾ ಇರುವುದು ನಮ್ಮ ಮೈಸೂರು ದೇಶದ ಒಂದು ಕೋಟಿ ಜನರ ಪರವಾಗಿಯೇ ಅಲ್ಲ; ಮುಂದೆ ಆಗತಕ್ಕ ಸಂಸ್ಥಾನದ ಇನ್ನೊಂದು ಕೋಟಿ ಜನರೂ ಇಲ್ಲಿನ ನಡೆವಳಿಕೆಯನ್ನು ನೋಡುತ್ತಾ ಇರುತ್ತಾರೆ; ಅದಕ್ಕಿಂತಲೂ ಹೆಚ್ಚು ಜನರೂ ಕೂಡ ಈ ನಮ್ಮ ಚರ್ಚೆಯನ್ನು ಓದುತ್ತಾರೆ, ತಿಳಿದುಕೊಳ್ಳುತ್ತಾರೆ. ನಾವು ಮಾತನಾಡತಕ್ಕ ಮಾತುಗಳು ಅವರ ಮನಸ್ಸಿನಮೇಲೆ ಒಂದು ಪರಿಣಾಮವನ್ನು ಉಂಟುಮಾಡುತ್ತವೆ. ಎಲ್ಲ ಪರಿಣಾಮಗಳೂ ಕೂಡ ಸತ್ ಪರಿಣಾಮಗಳಾಗಿ ಪರಿವರ್ತಿಸಬೇಕು, ಯಾರ ಮನಸ್ಸಿನಲ್ಲೂ ಕೂಡ ನಾವು ಮಾಡತಕ್ಕ ಭಾಷಣಗಳಿಂದ ಉದ್ರೇಕ ಉಂಟಾಗಬಾರದು. ನಮ್ಮ ಮಾತುಗಳು ಕೋಪ ಬರುವಂತೆ ಮಾಡಬಾರದು. ಈ ಒಂದು ಸದುದ್ದೇಶದಿಂದ ನೆಮ್ಮದಿ ಮತ್ತು ಶಾಂತಿಯನ್ನು ಕಾಪಾಡತಕ್ಕ ಸಾಧನಗಳಾಗಬೇಕು ನಮ್ಮ ಮಾತುಗಳು ಎಂದು ಮನಸ್ಸು ಮಾಡಿಕೊಂಡು ಆ ರೀತಿ ಭಾಷಣ ಮಾಡಬೇಕೆಂದು ನಾನು ವಿನಯಪೂರ್ವಕವಾಗಿ ಪ್ರಾರ್ಥಿಸುತ್ತೇನೆ.

Mr. SPEAKER.—Motion moved :

"That the States Reorganisation Bill, 1956, referred by the President under article 3 of the Constitution, be taken into consideration."

Before further discussion proceeds, I want to put before the House one suggestion. Four days have been allotted for this Bill. The first two days we may devote for the discussion of the general principles and on the 3rd and 4th April we can take up amendments. Keeping this in view, I request Hon'ble Members to be as brief as possible in their observations.

Sri Mulka GOVINDA REDDY (Chitaldrug).—I request that the time for tabling amendments may be extended till Monday.

Sri K. PATTABHIRAMAN (Kolar).—Sir, what about those who speak on the general principles and subsequently send in amendments ? Will they have an opportunity to speak for a second time, Sir ?

Mr. SPEAKER.—Yes.

Sri B. V. NARAYANA REDDY (Bagepalli—Gudibanda).—Sir, hitherto the Chief Minister was having the gadget of the All-India Radio. I request that Sri Imam also may be given the same privilege, Sir.

Sri J. MOHAMED IMAM (Jagalur).—I do not want my follies and omissions to be recorded.

Mr. SPEAKER.—Anyhow, Sri Narayana Reddy desires and Sri Imam can have it.

(The gadget was transferred to the table of Sri Imam).

*ಶ್ರೀ ಜೆ. ಮಹಮ್ಮದ್ ಇಮಾಂ (ಜಗಳೂರು).—ಅಧ್ಯಕ್ಷರೇ, ಕನ್ನಡಿಗರೆಲ್ಲರೂ ಒಟ್ಟುಗೂಡತಕ್ಕ ವಿಷಯದ ಮೇಲೆ ಕನ್ನಡದಲ್ಲಿಯೇ ಮಾತನಾಡಬೇಕೆಂದು ಅಪೇಕ್ಷೆಪಡುತ್ತೇನೆ. ಇದುವರೆಗೂ ಪ್ರಾಂತ ಪುನರ್ವಿಂಗಡಣೆಯ ವಿಷಯವಾಗಿ ಅನೇಕ ದೀರ್ಘ ಭಾಷಣಗಳಾಗಿವೆ. ಈ ವಿಷಯವಾಗಿ ಎಲ್ಲ ಪಂಗಡಗಳಿಂದ ಬಹಳ ಅಮೂಲ್ಯವಾದ ಅಭಿಪ್ರಾಯಗಳು ಬಂದಿವೆ. ಮುಖ್ಯಮಂತ್ರಿಗಳು ಹೇಳಿದಹಾಗೆ, ಈ ವಿಷಯ ಈ ಸಭೆಯಲ್ಲಿ ಪಕ್ಷಾತೀತವಾಗಿ, ಎಂದರೆ, ಪಾರ್ಟಿಗೆ ಸಂಬಂಧಪಡದೆ ಎಲ್ಲರೂ ಒಂದೇ ದೃಷ್ಟಿಯಿಂದ, ದೇಶದ ಹಿತದೃಷ್ಟಿಯಿಂದ ಇದುವರೆಗೂ ವಿಮರ್ಶೆಮಾಡಿದ್ದಾರೆ. ಅವರು ಹೇಳಿದ ಹಾಗೆ, ನಾವೆಲ್ಲ ಒಂದೇ ಒಂದು ಗುರಿಯನ್ನು ನಮ್ಮ ಮುಂದಿಟ್ಟುಕೊಂಡಿದ್ದೇವೆ. ಅದೇನೆಂದರೆ, ಜನಗಳಿಗೆ ಒಳ್ಳೆಯದಾಗಬೇಕು, ಅವರಿಗೆ ಸುಖ ಸಂಪತ್ತು ಲಭಿಸಬೇಕು ಮತ್ತು ದೇಶದ ಕೀರ್ತಿಯು ಹೆಚ್ಚಾಗಬೇಕು, ಇದರಿಂದ ಮುಂದೆ ನಮ್ಮ ದೇಶ ಒಗ್ಗಟ್ಟಾಗಿ ಅದಕ್ಕೆ ಯಾವ ತರಹ ಧಕ್ಕೆ ಮತ್ತು ತೊಂದರೆ ಸಂಭವಿಸಕೂಡದು ಎಂಬ ಈ ಗುರಿಗಳನ್ನು ಮುಂದಿಟ್ಟುಕೊಂಡು ಇದುವರೆಗೂ ಟೀಕೆಮಾಡಿದ್ದೇವೆ. ನಾನೂ ಸಹ ದೊಡ್ಡ ಮೈಸೂರಾಗಬೇಕು, ಅಥವಾ ಕರ್ಣಾಟಕವಾಗಬೇಕು ಎಂಬ ವಾದವನ್ನು ಎತ್ತಿ ಹಿಡಿದು ಮೊದಲಿನಿಂದಲೂ ಅದಕ್ಕೆ ನನ್ನ ಬೆಂಬಲವನ್ನು ಕೊಟ್ಟಿದ್ದೇನೆ. ಆ ಬೆಂಬಲವನ್ನು ಕೊಟ್ಟಿರುವಾಗ ನನ್ನ ಮನಸ್ಸಿನ ಆಕಾಂಕ್ಷೆ, ನನ್ನ ಮನಸ್ಸಿನ ಗುರಿ ಏನೆಂದರೆ, ಮುಂದೆ ಈ ದೇಶಕ್ಕೆ ವಿಶಾಲ ಮೈಸೂರಿಗೆ ಅಥವಾ ಕರ್ಣಾಟಕಕ್ಕೆ ಒಳ್ಳೆಯದಾಗಬೇಕು ಎಂಬುದು. ಈ ರೀತಿಯಾದ ಪ್ರಾಂತಪುನರ್ವಿಂಗಡಣೆ ಮಾಡುವುದರಿಂದ ದೇಶಕ್ಕೂ ಒಳ್ಳೆಯದು ಆ ದೇಶದಲ್ಲಿ ವಾಸಿಸುವ ಎಲ್ಲ ಜನಾಂಗಗಳಿಗೂ ಒಳ್ಳೆಯದು ಮತ್ತು ಇಡೀ ಇಂಡಿಯಾ ದೇಶಕ್ಕೆ ಇದರಿಂದ ಒಳ್ಳೆಯದಾಗುತ್ತದೆ

(ಶ್ರೀ ಜೆ. ಮಹಮ್ಮದ್ ಇಮಾಂ.)

ಎಂಬ ಅಂಶವನ್ನು ನಾವು ತಿಳಿದುಕೊಂಡಿದ್ದರಿಂದ ಇದಕ್ಕೆ ಮೊದಲಿನಿಂದಲೂ ಬೆಂಬಲ ಕೊಟ್ಟಿದ್ದೇವೆ.

ಈಗ ಮುಖ್ಯಮಂತ್ರಿಗಳು ದೀರ್ಘವಾದ ಭಾಷಣವನ್ನು ಮಾಡಿರುವುದು ನಮಗೆಲ್ಲರಿಗೂ ಸಂತೋಷದ ಸಂಗತಿ. ಯಾವ ಗುರಿಗೋಸ್ಕರ, ಧ್ಯೇಯಕ್ಕೋಸ್ಕರ ಕರ್ಣಾಟಕದಲ್ಲಿರುವ ಎಲ್ಲ ಜನಗಳೂ ಹೋರಾಡುತ್ತಿದ್ದೆವೋ ಅದು ಈಗ ನೆರವೇರುವ ಪರಿಸ್ಥಿತಿಗೆ ಬಂದಿದೆ. ಈ ಹೋರಾಟ ಇವೊತ್ತಿನದಲ್ಲ, ನಿನ್ನೆಯದಲ್ಲ, ಸುಮಾರು ಒಂದು ಶತಮಾನದಿಂದಲೂ ನಡೆಯುತ್ತಿದೆ. ಇದರಿಂದ ಎಲ್ಲರ ಹಾರೈಕೆಯೂ ಪೂರೈಸೀತು, ಒಂದು ಬೆಡಗಿನ ಜನಗಳು, ಹಿಂದೆ ಒಂದು ದೇಶದಲ್ಲಿ ವಾಸ ಮಾಡುತ್ತಿದ್ದ ಜನಗಳು, ಒಂದು ಭಾಷೆಯನ್ನಾಡುವ ಜನಗಳು, ಒಂದು ಸಂಸ್ಕೃತಿಯನ್ನನುಸರಿಸತಕ್ಕವರು, ಸಾಧ್ಯವಾದಷ್ಟೂ ಒಂದೇ ಆಡಳಿತದಲ್ಲಿರಬೇಕು, ಒಂದೇ ಚಾಮರ, ಛತ್ರಿಯ ಕೆಳಗೆ ಇರಬೇಕು ಎಂಬ ಉದ್ದೇಶದಿಂದ ಸುಮಾರು ಒಂದು ಶತಮಾನದ ರಾಗಾಯ್ತು, ಈ ಗುರಿಯ ಸಾಧನೆಗೋಸ್ಕರ ಹೋರಾಡುತ್ತಿದ್ದೆವು. ಅದಕ್ಕೆ ಮೈಸೂರಿನವರೂ ಮೈಸೂರಿನ ಹೊರಗಿನವರೂ ಬಹಳವಾಗಿ ಶ್ರಮಿಸಿದ್ದಾರೆ. ಅನೇಕ ರೀತಿಯಲ್ಲಿ ತ್ಯಾಗವನ್ನೂ ಮಾಡಿದ್ದಾರೆ. ಇದಕ್ಕೆ ಇದ್ದ ಅಡಚಣೆಗಳನ್ನು ಹೋಗಲಾಡಿಸಿ, ಕಷ್ಟಗಳನ್ನು ಎದುರಿಸಿ, ಆ ಗುರಿಯು ಕಾರ್ಯರೂಪಕ್ಕೆ ಈಗ ಬರುವುದಾಗಿದೆ. ಹೋದವರ್ಷದ ಅಸೆಂಬ್ಲಿ ಅಧಿವೇಶನದಲ್ಲಿ ಈ ಸಭೆಯು ಪ್ರಾಂತ ಪುನರ್ವಿಂಗಡಣೆ ಸಮಸ್ಯೆಯಲ್ಲಿ, ಮೈಸೂರು ಮತ್ತು ಅದರ ಸುತ್ತಮುತ್ತಲಿನ ಎಲ್ಲ ಕರ್ಣಾಟಕ ಪ್ರಾಂತಗಳೂ ಒಂದುಗೂಡಬೇಕು ಎಂಬುದಾಗಿ ಒಂದು ತೀರ್ಮಾನವನ್ನು ತೆಗೆದುಕೊಂಡಿತ್ತು. ಆ ತೀರ್ಮಾನವನ್ನು ಕೇಂದ್ರ ಸರ್ಕಾರದವರೂ ಹೈಕಮ್ಯಾಂಡಿನವರೂ ಪುರಸ್ಕರಿಸಿ, ಕರ್ಣಾಟಕ ರಾಜ್ಯವಾಗಬೇಕು--ಅದಕ್ಕೆ ಮೈಸೂರು ಎಂಬ ಹೆಸರು ಇಡಬೇಕೆಂಬುದಾಗಿ ಒಪ್ಪಿ ಈ ಮಸೂದೆಯನ್ನು ನಮಗೆ ಕಳುಹಿಸಿಕೊಟ್ಟಿದ್ದಾರೆ. ಇದರಲ್ಲಿ ಒಂದು ಸಂತೋಷವಾದ ಅಂಶವೇನೆಂದರೆ, ಬಳ್ಳಾರಿಯ ಏಳು ತಾಲ್ಲೂಕುಗಳನ್ನು ಮೈಸೂರಿನಲ್ಲಿಯೇ ಉಳಿಸಿದ್ದು. ಇದಕ್ಕೆ ಕೇಂದ್ರ ಸರ್ಕಾರದವರಿಗೆ ನನ್ನ ವಂದನೆಗಳನ್ನು ಅರ್ಪಿಸುತ್ತೇನೆ. ಬಳ್ಳಾರಿಯ ವಿಷಯವಾಗಿ ಇದುವರೆಗೂ ಬಹಳ ತೊಡಕುಗಳಿದ್ದವು. ಅದು ಒಂದು ರೀತಿಯ ಕಳವಳವನ್ನುಂಟುಮಾಡಿತ್ತು. ಹಿಂದೆ ಬಳ್ಳಾರಿಯ ವಿಷಯದಲ್ಲಿ ಬಹಳ ಕೂಲಂಕಷವಾಗಿ ಪರಿಶೀಲನೆಮಾಡಿ ಇಬ್ಬರು ಜಡ್ಜಿಗಳು ಅಭಿಪ್ರಾಯವನ್ನು ಕೊಟ್ಟನಂತರ ಮೈಸೂರಿನವರು ಕೇಳದೆಯೇ ಕೇಂದ್ರ ಸರ್ಕಾರದವರು ಬಳ್ಳಾರಿ ಜಿಲ್ಲೆಯ ಆಡಳಿತವನ್ನು ಮೈಸೂರಿಗೆ ವಹಿಸಿಕೊಟ್ಟರು. ಆದರೆ ಮತ್ತೆ ಪ್ರಾಂತಗಳ ಪುನರ್ವಿಂಗಡಣೆಯ ಸಂಬಂಧದಲ್ಲಿ ನೇಮಕವಾಗಿದ್ದ ಮಂಡಳಿಯವರು (States Reorganisation Commission) ಏನೋ ಒಂದು ಕಾರಣದಿಂದ ಅಥವಾ ಸರಿಯಾದ ಅಂಕಿ ಅಂಶಗಳನ್ನು ಅವರ ಮುಂದೆ ಇಡದೆ ಇದ್ದುದರಿಂದಲೋ ಏನೋ, ಬಳ್ಳಾರಿಯ ಮೂರು ತಾಲ್ಲೂಕುಗಳನ್ನು ಆಂಧ್ರಕ್ಕೆ ಕೊಡಬೇಕು ಎಂಬುದಾಗಿ ಶಿಫಾರ್ಸು ಮಾಡಿದರು. ಆ ವಿಷಯವಾಗಿ ಬಹಳವಾಗಿ ಕಳವಳ ಉಂಟಾಗಿತ್ತು. ಒಂದು ರೀತಿಯಲ್ಲಿ ಆತ್ಮಗೌರವಕ್ಕೆ ಧಕ್ಕೆ ಬಂದಂತಿತ್ತು. ಹಿಂದೆ ಬಳ್ಳಾರಿ ಜಿಲ್ಲೆಯು ಮೈಸೂರಿಗೆ ಸೇರಿದಾಗ ಎಷ್ಟು ಜನ ವಂದನೆಗಳನ್ನರ್ಪಿಸಿದರೋ, ಎಷ್ಟು ಜನಕ್ಕೆ ಸಂತೋಷವಾಗಿತ್ತೋ, ಅವರಮೇಲೆ ಒಂದು ರೀತಿಯ ಮುಗಿಲು ಎದ್ದಂತಾಗಿತ್ತು. ಆದರೆ ಕೇಂದ್ರ ಸರ್ಕಾರದವರು ನ್ಯಾಯಾನ್ಯಾಯವನ್ನು ಪರಿಶೋಧಿಸಿ ಬಳ್ಳಾರಿ ಜಿಲ್ಲೆಯು ಈಗಿರುವ ಹಾಗೆಯೇ ಮೈಸೂರಿನಲ್ಲಿಯೇ ಇರಬೇಕೆಂದು ತೀರ್ಪು ಕೊಟ್ಟಿದ್ದು ಬಹಳ ಸಂತೋಷಕರವಾದದ್ದು ಮತ್ತು ನ್ಯಾಯವನ್ನು ಮಾಡಿದ್ದಾರೆ. ಅದಕ್ಕೋಸ್ಕರವಾಗಿ ಈ ಸಭೆಯ ಪರವಾಗಿ ಇದಕ್ಕೆ ಸಂಬಂಧಪಟ್ಟ ಎಲ್ಲ ಜನಗಳ ಪರವಾಗಿ ನಾನು ಕೇಂದ್ರ ಸರ್ಕಾರಕ್ಕೆ ವಂದನೆಗಳನ್ನು ಅರ್ಪಿಸಬೇಕಾಗಿದೆ.

ಮುಖ್ಯವಾದದ್ದೇನೆಂದರೆ, ಬಳ್ಳಾರಿಯ ವಿಷಯವಾಗಿ ಇಷ್ಟು ಕಳವಳಕ್ಕೆ ಕಾರಣವಾದದ್ದು ತುಂಗಭದ್ರ ಪ್ರಾಜೆಕ್ಟ್. ತುಂಗಭದ್ರ ಜಲಾಶಯದ ವಿಷಯವಾಗಿ ಮೈಸೂರಿನವರಿಗೂ ಮತ್ತು ಆಂಧ್ರದವರಿಗೂ ಒಬ್ಬರಿಗೊಬ್ಬರಿಗೆ ಒಂದು ತರಹ ಭಿನ್ನಾಭಿಪ್ರಾಯ ಎಲ್ಲಿ ಬರುತ್ತದೆಯೋ ಮತ್ತು ಆ ಭಿನ್ನಾಭಿಪ್ರಾಯದಿಂದ ಮುಂದೆ ಕೆಲಸ ಕಾರ್ಯರೂಪಕ್ಕೆ ಬರುವುದಕ್ಕೆ ಎಲ್ಲಿ ತೊಂದರೆಯುಂಟಾಗುತ್ತವೆಯೋ ಎಂಬ ಒಂದು ದೊಡ್ಡ ಸಮಸ್ಯೆ ಒಂದು ಅನುಮಾನ, ಇದೇ ಈ ಕಳವಳಕ್ಕೆ ಕಾರಣ ಎಂದು ಎಲ್ಲರಿಗೂ ಗೊತ್ತು. ಆದರೆ ಇಷ್ಟು ಮಾತ್ರ ಹೇಳಬಲ್ಲೆ. ಮೈಸೂರಿಗೂ ಮತ್ತು ಇತರ ಪ್ರಾಂತಗಳಿಗೂ ನೀರಿನ ವಿಷಯವಾಗಿ, ಜಲಾಶಯಗಳ ವಿಷಯವಾಗಿ ಎಷ್ಟೋ ಒಪ್ಪಂದಗಳು ಆಗಿವೆ. ಮದರಾಸಿಗೂ ಮತ್ತು ಮೈಸೂರಿಗೂ ಕಾವೇರೀನದಿಯ ನೀರಿನ ವಿಷಯವಾಗಿ ಒಪ್ಪಂದ ನಡೆದು, ಮೈಸೂರಿಗೂ ಮತ್ತ ಬೊಂಬಾಯಿಗೂ ಜೋಗ್ ಜಲಾಶಯದ ವಿಷಯವಾಗಿ ಒಪ್ಪಂದ ನಡೆದು ಇದುವರೆಗೂ ಈ ಪ್ರಾಂತಗಳಿಗೆ ನೀರಿನ ವಿಷಯದಲ್ಲಿ common interest ಇದ್ದರೂ ಕೂಡ ಯಾವ ತರಹ ಭಿನ್ನಾಭಿಪ್ರಾಯವೂ ಬಂದಿಲ್ಲ. ಒಬ್ಬರಿಗೊಬ್ಬರಿಗೆ ಅನುಮಾನ ಪಡಬೇಕಾದ ಪ್ರಸಂಗವೇ ಬರಲಿಲ್ಲ. ಕಾವೇರಿ ನದಿಯಿಂದ ನಮಗೆ ನೀರು ಸ್ವಲ್ಪ ಬರುತ್ತಿದ್ದರೂ ಮದರಾಸಿಗೂ ಸಹ ನಾವು ಎಷ್ಟೋ ಮನ್ನಣೆ ಕೊಡುತ್ತೇವೆ. ಹೀಗಿರುವಾಗ ಬಳ್ಳಾರಿ ಜಿಲ್ಲೆ ಮೈಸೂರಿಗೆ ಸೇರಿದರೆ ತುಂಗಭದ್ರ ನೀರನ್ನೆಲ್ಲ ಮೈಸೂರಿನವರೇ ಉಪಯೋಗಿಸಿಕೊಳ್ಳುತ್ತಾರೆ ಎಂಬ ಒಂದು ಅಭಿಪ್ರಾಯವನ್ನು ಆಂಧ್ರದವರು ಹೊಂದುವುದು ಅಷ್ಟು ಚೆನ್ನಾಗಿ ಕಾಣುವುದಿಲ್ಲ. ಅಗ್ರಿಮೆಂಟ್ ಇದೆ, ಒಪ್ಪಂದವಿದೆ, ಎಲ್ಲವೂ ಇವೆ. ಅವರಿಗೆ ಎಷ್ಟರಮಟ್ಟಿಗೆ ಬಾಧ್ಯತೆ ಇದೆಯೋ ಅಷ್ಟೇ ಮೈಸೂರು ಸರ್ಕಾರಕ್ಕೂ ಇದೆ. ಆದರೆ ಅವರ ಹಕ್ಕು ಬಾಧ್ಯತೆಗಳಿಗೆ ಮತ್ತು ಅವರ ಕೆಲಸಕಾರ್ಯಗಳಿಗೆ ಧಕ್ಕೆ ಬರುವುದಿಲ್ಲವೆಂದು ಖಂಡಿತವಾಗಿ ಹೇಳಬಲ್ಲೆ. ಇನ್ನೊಂದು ಮುಖ್ಯವಾದ ವಿಷಯವೆಂದರೆ, ರಾಯಚೂರು ಮೈಸೂರು ಸಂಸ್ಥಾನಕ್ಕೆ ಬರುತ್ತದೆ. ತುಂಗಭದ್ರ ಜಲಾಶಯದ ಉತ್ತರ ಭಾಗ ಸಂಪೂರ್ಣವಾಗಿ ಎಂದರೆ ಅರ್ಧಭಾಗದ ನೀರಿನ ಹಕ್ಕುಬಾಧ್ಯತೆ ಮೈಸೂರಿಗೇ ಬರುತ್ತದೆ. ಮತ್ತು ಇನ್ನೊಂದುಕಡೆ ಕಾಲುಭಾಗದ ಹಕ್ಕುಬಾಧ್ಯತೆ ಮೈಸೂರಿಗೇ ಬರುತ್ತದೆ. ಅಂದರೆ ಒಟ್ಟಿನಲ್ಲಿ ಮುಕ್ಕಾಲುಭಾಗದ ಹಕ್ಕುಬಾಧ್ಯತೆ ಮೈಸೂರಿಗೇ ಸೇರುವುದು. ಆದುದರಿಂದ ಮೈಸೂರಿನವರಿಗೆ ತುಂಗಭದ್ರಾ ಅಣೆಕಟ್ಟಿನ ವಿಚಾರದಲ್ಲಿ ಹೆಚ್ಚಿನ ಅಭಿಮಾನವಿರುತ್ತದೆಂದು ಎಲ್ಲರೂ ಹೇಳಬೇಕಾದದ್ದೇ. ಇದರಿಂದ ಮೈಸೂರಿನವರಿಗೆ ತುಂಗಭದ್ರಾ ಜಲಾಶಯದ ಮೇಲೆ ಹೆಚ್ಚಿನ ಅಧಿಕಾರವಿರಬೇಕು. ಈ ಎಲ್ಲ ದೃಷ್ಟಿಗಳಿಂದಲೂ ಬಳ್ಳಾರಿಯನ್ನು ಮೈಸೂರಿಗೇ ಕೊಟ್ಟಿರುವುದು ಒಳ್ಳೆಯ ಕೆಲಸ, ಬಹಳ ಉತ್ತಮವಾದದ್ದು ಎಂದು ಹೇಳಬೇಕಾಗಿದೆ.

ಮುಖ್ಯಮಂತ್ರಿಗಳು ದಕ್ಷಿಣ ಪ್ರದೇಶದ ವಿಷಯವಾಗಿ ಬಹಳ ಸ್ಥೂಲವಾಗಿ ಪ್ರಶ್ನೆಮಾಡಿದ್ದಾರೆ. ದಕ್ಷಿಣ ಪ್ರದೇಶದ ವಿಷಯವಾಗಲಿ, ಉತ್ತರ ಪ್ರದೇಶದ ವಿಷಯವಾಗಲಿ, ಪಶ್ಚಿಮ ಪ್ರದೇಶದ ವಿಷಯವಾಗಲಿ, ಈ ಸಮಸ್ಯೆಗಳು ಹೇಗೆ ಉದ್ಭವವಾದವು ಎಂಬುದನ್ನು ತಿಳಿದುಕೊಳ್ಳಲಾರೆ. ಈ ಸಮಸ್ಯೆಯನ್ನು ಇಷ್ಟು ತೀವ್ರವಾಗಿ ಇಂಡಿಯಾ ದೇಶದೆಲ್ಲೆಲ್ಲ ಜನಗಳ ಮುಂದೆ ಇಟ್ಟುದಕ್ಕೆ ನಾನು ಸಂತೋಷಪಡಲಾರೆ. ಈಗಾಗಲೇ ನಾವು ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗಿದೆ ಮತ್ತು ಬಗೆಹರಿಸಬೇಕಾಗಿದೆ. ಈ ಪ್ರಾಂತ ಪುನರ್ವಿಂಗಡಣೆ ಸಮಸ್ಯೆ ಬಹಳ ಕಠಿಣವಾದದ್ದು ಮತ್ತು ತೀಕ್ಷ್ಣವಾದದ್ದು. ಆ ಸಮಸ್ಯೆಯನ್ನ ಬಗೆಹರಿಸಿಕೊಂಡರೆ ಸಾಕು. ಆದರೆ ಇಂಡಿಯಾ ಸರ್ಕಾರದವರು ಸಮಸ್ಯೆಯಮೇಲೆ ಸಮಸ್ಯೆಯನ್ನು ತಂದೊಡ್ಡುವುದು ಅಷ್ಟು ಸಮರ್ಪಕವಾಗಿ ಕಾಣುವುದಿಲ್ಲ. ಪ್ರದೇಶಗಳನ್ನು ಮಾಡುವ ಸಮಸ್ಯೆಗಳು ಯಾವ ಕಾರಣದಿಂದ, ಯಾವ ಸಂದರ್ಭದಲ್ಲಿ ದೇಶದ ಮುಂದೆ ಬಂದವು ಎಂಬುದು ಎಲ್ಲರಿಗೂ ಚೆನ್ನಾಗಿ ಗೊತ್ತು. ಪ್ರಾಂತ ವಿಂಗಡಣೆ ಸಮಿತಿಯ ವರದಿಯು ಬಂದನಂತರ ಅದು ದೇಶದಲ್ಲಿ ಸ್ವಲ್ಪ ಕಳವಳವನ್ನುಂಟುಮಾಡಿತು. ಕೆಲವು ಪ್ರಾಂತಗಳಲ್ಲಿ ಒಂದು ರೀತಿಯ ಅಸಭ್ಯವರ್ತನೆ ನಡೆಯಿತು. ಅದರಿಂದ ಬಹಳ ಜಿಗುಪ್ಸೆ ಆಯಿತು. ಅದನ್ನು ಬಗೆಹರಿಸುವುದಕ್ಕೋಸ್ಕರ ಪ್ರದೇಶ ಪ್ರಾಂತಗಳನ್ನು ಮಾಡಬೇಕೆಂಬುದಾಗಿ ಒಂದು ಸಲಹೆ ಬಂದಿರಬಹುದು. ಆದರೆ ನಾನು ಹೇಳಬೇಕಾದದ್ದೇನೆಂದರೆ, ಮುಖ್ಯಮಂತಿಗಳು ಹೇಳಿದಹಾಗೆ, ಪ್ರದೇಶಗಳ ರಚನೆಯು ಹೊಸಸಮಸ್ಯೆಯಲ್ಲ. ಈಗ ಅನೇಕ ಪ್ರದೇಶಗಳು bi-lingual ಪ್ರದೇಶಗಳಾಗಿವೆ. ಕೇಂದ್ರಸರ್ಕಾರದವರ ಈ ಉದ್ದೇಶವೂ ಸಾಧುವಾದದ್ದು. ಕೇವಲ ಭಾಷಾವಾರು ಪ್ರಾಂತಗಳನ್ನು ನಿರ್ಮಿಸಿದರೆ, ಒಂದು ಪ್ರಾಂತಕ್ಕೂ ಇನ್ನೊಂದು ಪ್ರಾಂತಕ್ಕೂ rivalry ಬರಬಹುದು; ಅದನ್ನು ಬಿಟ್ಟು ಮೂರು ನಾಲ್ಕು ಪ್ರಾಂತಗಳನ್ನು ಒಟ್ಟುಗೂಡಿಸಿದರೆ ಒಬ್ಬರಿಗೊಬ್ಬರಿಗೆ ಸೌಹಾರ್ದ, ಪರಸ್ಪರ ಪ್ರೀತಿ ದೇಶದಲ್ಲಿ ಹೆಚ್ಚಿನ ಐಕಮತ್ಯ ಬರುತ್ತದೆ ಎಂದು ಈ ಸಮಸ್ಯೆಯನ್ನು ನಮ್ಮ ಮುಂದೆ ಇಟ್ಟರು. ಬಂಗಾಳ ಮತ್ತು ಬಿಹಾರದ ಮುಖ್ಯಮಂತ್ರಿಗಳು ಮುಂದೆ ಬಂದು ನಾವಿಬ್ಬರೂ ಒಟ್ಟಿಗೆ ಬಾಳುತ್ತೇವೆ ಎಂದು ಯಾವಾಗ ಈ ಸಮಸ್ಯೆಯನ್ನು ಕೇಂದ್ರಸರ್ಕಾರದ ಮುಂದಿಟ್ಟರೋ ಆಗ ಈ ಪ್ರಶ್ನೆ ಉದ್ಭವಿಸಿತು. ನನ್ನ ಅಭಿಪ್ರಾಯದಲ್ಲಿ ಇದರ ಸಾಧಕಭಾಧಕಗಳನ್ನೂ ಮತ್ತು ಇದರಿಂದ ಪ್ರಯೋಜನ ಉಂಟೇ ಇಲ್ಲವೇ ಎಂಬುದನ್ನೂ ಸ್ವಲ್ಪ ಪರಿಶೀಲಿಸಿ ಈ ಸಮಸ್ಯೆಯನ್ನು ದೇಶದ ಮುಂದೆ ಇಟ್ಟಿದ್ದರೆ ಚೆನ್ನಾಗಿತ್ತು. ಆದರೆ ಒಂದು ದಿವಸ ಇಂಡಿಯಾ ದೇಶವನ್ನು ಐದು ಪ್ರದೇಶಗಳನ್ನಾಗಿ ಮಾಡುತ್ತಾರೆಂದು ಪತ್ರಿಕೆಗಳಲ್ಲಿ ಬಂದದ್ದರಿಂದ ಹೆಚ್ಚಿನ ತೊಡರುಂಟಾಯಿತು.

ಶ್ರೀ ಕೆ. ಹನುಮಂತಯ್ಯ.—ಅದರಿಂದ ಬಹಳ ಒಳ್ಳೆಯದಾಯಿತು.

ಶ್ರೀ ಜೆ. ಮಹಮ್ಮದ್ ಇಮಾಂ.—ಆದರೆ ಸಂಯುಕ್ತ ಪ್ರದೇಶಗಳ ರಚನೆ ಹೊಸದಲ್ಲ. ಈಗಿರುವುವೆಲ್ಲ bi-lingual ಅಥವಾ tri-lingual States. ಮದರಾಸು ಹಿಂದೆ tri-lingual States, ಆಗಿತ್ತು ಎಂದರೆ ತಮಿಳು, ತೆಲುಗು ಮತ್ತು ಕನ್ನಡ ಮಾತನಾಡುವ ಪ್ರದೇಶಗನ್ನೊಳಗೊಂಡಿತ್ತು. ಇದೇ ರೀತಿಯಾಗಿ ಮಧ್ಯಪ್ರದೇಶದಲ್ಲಿ ಮಹಾರಾಷ್ಟ್ರ ಮತ್ತು ಹಿಂದಿ ಮಾತನಾಡುವ ಪ್ರದೇಶಗಳು ಸೇರಿ ಅದು bi-lingual State ಆಗಿತ್ತು. ಬೊಂಬಾಯಿ ಪ್ರಾಂತದಲ್ಲಿ ಗುಜರಾತಿ, ಕನ್ನಡ, ಮಹರಾಷ್ಟ್ರ ಮೊದಲಾದ ಭಾಷೆಗಳನ್ನಾಡುವ ಭಾಗಗಳೂ ಸೇರಿದ್ದುವು. ಈ ರೀತಿಯಾಗಿರಬೇಕಾದರೆ, ಆ ಪ್ರಾಂತಗಳಲ್ಲಿ ಆಡಳಿತ ಅಷ್ಟು ಚೆನ್ನಾಗಿ ನಡೆಯುತ್ತಿರಲಿಲ್ಲ. There was dissatisfaction.

12 NOON.

ಈಗಿರುವ ಒಂದು ದೂರು ಏನೆಂದರೆ, ಬಹುಸಂಖ್ಯಾತರು ಅಲ್ಪಸಂಖ್ಯಾತರನ್ನು ಕಡೆಗಣ್ಣಿನಿಂದ ನೋಡುತ್ತಾರೆ, ಅವರಿಗೆ ಸ್ಥಾನಮಾನ ಸರಿಯಾಗಿ ಒದಗಿಸುವುದಿಲ್ಲ, ಬೇಕಾದ್ದನ್ನು ಸರಿಯಾಗಿ ಕೊಡುವುದಿಲ್ಲ ಎಂಬುದು. ಆದುದರಿಂದಲೇ ಸಮ್ಮಿಶ್ರ ಪ್ರಾಂತ ಸರಿಹೋಗುವುದಿಲ್ಲ, ಏಕ ಭಾಷಾ ಪ್ರಾಂತ ಮಾಡಬೇಕು ಎಂದು ಚಳವಳಿ ಪ್ರಾರಂಭವಾಯಿತು. ಎಲ್ಲ ಕಡೆಯೂ ಸಾಧ್ಯವಾದಷ್ಟು ಭಾಷಾವಾರು ಪ್ರಾಂತ ಮಾಡಬೇಕೆಂದು ಕೇಂದ್ರ ಸರ್ಕಾರದವರು ಪ್ರಯತ್ನಪಟ್ಟರು. ಅದರಂತೆ ಕೆಲಸ ಮುಂದುವರಿಯಿತು. ಈಗ ಪುನಃ ನಾವು ವಾಪಸು ಹೋಗಿ ಮೂರು ನಾಲ್ಕು ಪ್ರಾಂತಗಳನ್ನು ಸೇರಿಸಿ ಒಂದು ಪ್ರದೇಶ ಮಾಡುತ್ತೇವೆಂದು ಹೇಳಿದರೆ, again we will be going back to the same old troubles and creating all the old problems. ಬಹುಶಃ ಕೇಂದ್ರ ಸರ್ಕಾರದವರು ಜನರ ದೃಷ್ಟಿಯನ್ನು ಬೇರೆಕಡೆಗೆ ತಿರುಗಿಸಬೇಕೆಂಬ ಉದ್ದೇಶದಿಂದ ಹಾಗೆ ಹೇಳಿರಬಹುದು. ಮೂರು ನಾಲ್ಕು ಪ್ರಾಂತಗಳನ್ನು ಸೇರಿಸಿ ಬೈಲಿಂಗ್ವಲ್ ಅಥವಾ ಟ್ರೈಲಿಂಗ್ವಲ್ ಅಥವಾ ಕ್ವಾಡ್ರಿಲಿಂಗ್ವಲ್ ಸ್ಟೇಟ್ ಮಾಡಬೇಕೆಂಬ ಅಭಿಪ್ರಾಯ ಯಾರಿಗೂ ಇಲ್ಲ. ಅಲ್ಲದೆ ಮದರಾಸಿನವರು ಇಷ್ಟಪಡುವುದಿಲ್ಲ, ಕೇರಳದವರು ಅಭಿಪ್ರಾಯ ವ್ಯಕ್ತಪಡಿಸಿಲ್ಲ, ಆಂಧ್ರದವರು ಅಭಿಪ್ರಾಯ ವ್ಯಕ್ತಪಡಿಸಿಲ್ಲ ಎಂದು ಮುಖ್ಯ ಮಂತ್ರಿಗಳು ಹೇಳಿದರು. ಇದರಿಂದ ಒಂದು ಅನುಮಾನ ಬಂತು; ಮದರಾಸು ಒಪ್ಪಿಲ್ಲ, ಕೇರಳ ಒಪ್ಪಿಲ್ಲ, ಆದ್ದರಿಂದ ನಾವೂ ಒಪ್ಪಿಲ್ಲ ಎಂಬುದು ಮುಖ್ಯಮಂತ್ರಿಗಳ ವಾದ. ಇದರಿಂದ ಒಂದು ಪಕ್ಷ ಅವರು ಒಪ್ಪಿದರೆ ಮೈಸೂರೂ ಒಪ್ಪಿಕೊಳ್ಳಬಹುದು ಎಂದು ಅರ್ಥವಾಯಿತು. ಅವರು ಒಪ್ಪಿದರೆ ಮೈಸೂರೂ ಸಹ ಅಂಥ ಪ್ರದೇಶವನ್ನು ರಚಿಸುವ ಅಭಿಪ್ರಾಯವನ್ನು ಒಪ್ಪುವುದಕ್ಕೆ ಸಿದ್ಧ ಎಂಬ ಅಭಿಪ್ರಾಯವಿದೆ. ಆದರೆ ಮೊದಲನೆಯದು ನಾವು ಹೋಗಿ ಅವರ ಯಾಚನೆ ಏಕೆ ಮಾಡಬೇಕು ? ಎರಡನೆಯದಾಗಿ, ಒಂದು ಪಕ್ಷ ಮದರಾಸು ಮತ್ತು ಕೇರಳ ಒಪ್ಪಿದರೂ ಆ ಪ್ರದೇಶಕ್ಕೆ ಮೈಸೂರು ಈಗಿನ ಪರಿಸ್ಥಿತಿಯಲ್ಲಿ ಸೇರುವುದು ಉಚಿತವಾದುದಲ್ಲ. ಏಕೆಂದರೆ ಇದರಿಂದ ಯಾವ ಧ್ಯೇಯ ಇಷ್ಟು ದಿನಗಳಿಂದ ಜನರ ಮುಂದೆ ಇದೆಯೋ ಆ ಧ್ಯೇಯ ಸಾಧನೆಯಾಗುವುದಿಲ್ಲ ಮತ್ತು ಇದುವರೆಗೆ ಯಾವ ಸಮಸ್ಯೆ, ತೊಂದರೆ ಇದೆಯೋ ಅದನ್ನು ಮುಂದುವರಿಸಬೇಕಾಗುತ್ತದೆ. ಆದ್ದರಿಂದ ಈಗ ಸದ್ಯಕ್ಕೆ ನಾವು ಈ ಪ್ರಾದೇಶಿಕ ಪ್ರಶ್ನೆಯನ್ನು ತರುವುದು ಒಳ್ಳೆಯದಲ್ಲ. ಮೊದಲು ಪ್ರಾಂತಗಳೆಲ್ಲಾ ಆಗಲಿ. ಕೆಲವು ಕಾಲವಾದನಂತರ, ಮುಂದೆ ಹೇಗೆ ಯಾವ ರೀತಿ ಇರುತ್ತದೆ, ಯಾರ ಮನಸ್ಸು ಯಾವ ರೀತಿಯಿದೆ, ಇಂಡಿಯಾ ದೇಶದ ಸ್ಥಿತಿ ಯಾವ ರೀತಿಯಾಗಿರುತ್ತದೆ ಎಂದು ಅವಲೋಕಿಸಿ ಆಗ ಮಾಡಬಹುದೇ ಹೊರತು ಈಗ ನಾವು ಇಲ್ಲದ ತೊಂದರೆ ತಂದುಕೊಂಡು ದೇಶದ ಅಭಿವೃದ್ಧಿಗೆ ಧಕ್ಕೆ ತರುವುದು ಉಚಿತವಾಗಿ ಕಾಣುವುದಿಲ್ಲ. ಈಗ ಜೋನಲ್

(ಶ್ರೀ ಜೆ. ಮಹಮ್ಮದ್ ಇಮಾಂ.)

ಕೌನ್ಸಿಲ್ ವಿಷಯ ಹೇಳುವುದಿಲ್ಲ, ತಿದ್ದುಪಡಿ ತಂದಾಗ ಹೇಳುತ್ತೇನೆ.

ಇನ್ನೊಂದು ವಿಷಯವನ್ನು ನಾನು ಹೇಳಬೇಕಾಗಿದೆ. ಮೈಸೂರೆಂಬ ಹೆಸರನ್ನಿಡುವಾಗ ಕೇಂದ್ರ ಸರ್ಕಾರದವರೂ ಒಪ್ಪಿದರು, ಕರ್ಣಾಟಕವೆಂಬ ಪದ ಬಂದಮೇಲೆ ಮೈಸೂರು ಎಂಬ ಹೆಸರು ಬಂದಿದೆ, ಇದು ಉತ್ತರ ಕರ್ಣಾಟಕದಲ್ಲಿರುವವರಿಗೆ, ಮುಂದೆ ಮೈಸೂರಿಗೆ ಬಂದು ಸೇರುವವರಿಗೆ ಒಂದು ರೀತಿಯಲ್ಲಿ ಉದ್ರೇಕ ಉಂಟು ಮಾಡುತ್ತದೆಯೋ ಏನೋ ಎಂದು ಮುಖ್ಯಮಂತ್ರಿಗಳು ಎಚ್ಚರಿಕೆ ಕೊಟ್ಟರು. ಈ ರೀತಿ ಮಾಡಿದರೆ ಒಳ್ಳೆಯದಲ್ಲ, ನಿಜ. ನಾನೂ ಮೈಸೂರು ದೇಶದಲ್ಲೇ ವಾಸಮಾಡುವವನು. ನಾವೆಲ್ಲರೂ ಮೈಸೂರು ದೇಶಕ್ಕೆ ಇತರ ಪ್ರಾಂತಗಳನ್ನು ಸೇರಿಸುವಾಗ ಮೈಸೂರು ಎಂಬ ಹೆಸರೇ ಇರಬೇಕೆಂದು ಅಭಿಪ್ರಾಯಪಟ್ಟೆವು. ಆದರೆ ಒಂದು ವಿಷಯವನ್ನು ಮಾತ್ರ ಮುಖ್ಯಮಂತ್ರಿಗಳು ಗಮನಿಸಬೇಕು. ಅವರನ್ನು ಈ ವಿಷಯದಲ್ಲಿ ಟೀಕೆ ಮಾಡುವುದು ಅನಾವಶ್ಯಕ. ಮೊದಲಿನಿಂದ, ಕರ್ಣಾಟಕ ಏಕೀಕರಣ ಚಳವಳಿ ಹುಟ್ಟಿದಲಾಗಾಯ್ತು ಕರ್ಣಾಟಕ ಎಂಬ ಹೆಸರು ಇದುವರೆಗೂ ಬಂತು. ಕರ್ಣಾಟಕದ ಸಿಗ್ನಿಫಿಕೆನ್ಸ್ ಇದೆಯೆಂದು ಅವರು ಹೇಳಿದ್ದಾರೆ. ಅದರ ಸಿಗ್ನಿಫಿಕೆನ್ಸ್ ಏನೆಂದರೆ ಕನ್ನಡ ಭಾಷೆ ಎಲ್ಲೆಲ್ಲಿ ಜಾರಿಯಲ್ಲಿದೆಯೋ, ಕನ್ನಡ ಸಂಸ್ಕೃತಿ ಎಲ್ಲೆಲ್ಲಿ ಜಾರಿಯಲ್ಲಿದೆಯೋ, ಆ ಪ್ರಾಂತಗಳೆಲ್ಲಾ ಸೇರಿ ಕರ್ಣಾಟಕ ಅಥವಾ ಮೈಸೂರು ಆಗುವುದಕ್ಕೆ ಬಹುಮಟ್ಟಿಗೆ ಮನ್ನಣೆಯಿದೆ. ಮೊನ್ನೆ ಅಸೆಂಬ್ಲಿಯಲ್ಲಿ ನಿರ್ಣಯ ಸಹ ಆಗಿದೆ. ಕರ್ಣಾಟಕ ಎಂಬ ಹೆಸರಿದ್ದರೆ ಒಂದು ರೀತಿ ಮೈಸೂರು ಪ್ರಜೆಗೆ ಅತೃಪ್ತಿ, ಅದಕ್ಕೆ ಬದಲಾಗಿ ದೊಡ್ಡ ಮೈಸೂರು ಎಂದು ಕರೆದರೆ ಸಮಾಧಾನವಿರುತ್ತದೆ ಎಂದು ತೀರ್ಮಾನ ಮಾಡಿರುವುದು ನಿಜವಾಗಿಯೂ ಇತರರಿಗೆ ಸಂಕಟವನ್ನುಂಟುಮಾಡಿದೆಯೆಂದು ಯಾರೂ ಸಹ ಭಾವನೆ ಮಾಡಬೇಕಾಗಿಲ್ಲ. ಕರ್ಣಾಟಕವೆಂಬ ಹೆಸರನ್ನು ತೆಗೆದು ಏಕಾಏಕಿ ಮೈಸೂರು ಎಂದು ಕರೆದುದರಿಂದ ಒಂದು ರೀತಿಯಲ್ಲಿ ಸಂಕಟವಾಗಿರಬಹುದು. ಎರಡನೆಯದು ಮೈಸೂರು ಎಂಬ ಹೆಸರನ್ನು ಚುನಾಯಿಸುವಾಗ ಮುಂಚಿತವಾಗಿ ಮುಂದಿನ ಕರ್ಣಾಟಕದಲ್ಲಿ ಮೈಸೂರಿನವರಲ್ಲದೆ ಮೈಸೂರೇತರರ ಯಾರು ಮೈಸೂರೊಂದಿಗೆ ಸೇರುವರೋ ಅವರು ಜವಾಬ್ದಾರಿ ವಹಿಸಬೇಕಾಗುತ್ತದೆ, ದಕ್ಷತೆಗೆ ಎಲ್ಲರೂ ಜವಾಬ್ದಾರರು, ಎಂಬುದನ್ನು ಅರಿತು, ಹೆಸರನ್ನು ಬದಲಾಯಿಸುವುದಕ್ಕೆ ಮುಂಚೆ, ಮುಖ್ಯಮಂತ್ರಿಗಳು ಮೈಸೂರು ದೇಶದ ಹೊರಗಿರುವ ಮುಖಂಡರುಗಳನ್ನೂ ಕರೆಸಿ ಸಮಾಲೋಚನೆ ಮಾಡಿ ಮೈಸೂರಿನ ವೈಶಿಷ್ಟ್ಯ ಮತ್ತು ಕೀರ್ತಿಯನ್ನು ಉಳಿಸಲು ಕರ್ಣಾಟಕ ಎಂಬುದಕ್ಕೆ ಬದಲಾಗಿ ಮೈಸೂರು ಎಂಬ ಹೆಸರನ್ನೇ ಇಡೋಣ ಎಂದು ಅಭಿಪ್ರಾಯ ಸೂಚಿಸಿದ್ದರೆ ಬಹುಶಃ ಒಂದು ಗೌರವ ನಮಗೆ ಬರುತ್ತಿತ್ತು, ಔಚಿತ್ಯವಿರುತ್ತಿತ್ತು, ನಮ್ಮೊಡನೆ ಸೇರಲಿರುವವರ ಆತ್ಮ ಗೌರವವೂ ಸಹ ಉಳಿಯುತ್ತಿತ್ತು. ಆಗಲೇ ಈ ವಿಷಯ ಹೊಳೆಯಿತು. ಆದರೆ ಎಸ್.ಆರ್. ಬಿಲ್ಲು ಬರಲಿ ಎಂದು ಸುಮ್ಮನಿದ್ದೆ. ಆ ರೀತಿ ಒಂದು ಕ್ರಮವನ್ನು ಅನುಸರಿಸಿ ಮಾಡಿದ್ದರೆ ಬಹುಶಃ ಅವರೂ ಒಪ್ಪುತ್ತಿದ್ದರು, ನಾವೂ ಒಪ್ಪುತ್ತಿದ್ದೆವು. ಆಗ ಸರ್ವಾನುಮತದಿಂದ ಮೈಸೂರು ಎಂಬ ಹೆಸರಿಗೇ ಒಪ್ಪಿಗೆ ದೊರೆಯುತ್ತಿತ್ತು. ಎಲ್ಲರೂ ಸೌಹಾರ್ದದಿಂದ ಮುಂದಿನ ಆಡಳಿತವನ್ನು ಜವಾಬ್ದಾರಿಯುತವಾಗಿ ವಹಿಸಿ ಯಶಸ್ವಿಯಾಗಿ ನಡೆಸಬೇಕಾಗಿದೆ. ಭವಿಷ್ಯವನ್ನು ಬದಲಾಯಿಸುವ ವಿಷಯದಲ್ಲಿ ದೊಡ್ಡ ದೊಡ್ಡ ಸಮಸ್ಯೆಗಳನ್ನು ಎದುರಿಸುವಾಗ ನಮ್ಮಲ್ಲಿಗೆ ಬರಲಿರುವವರಲ್ಲೂ ಇರುವ ದೊಡ್ಡ ದೊಡ್ಡ ಎಂ.ಎಲ್.ಎ. ಗಳನ್ನು, ಪಿ.ಸಿ.ಸಿ. ಯವರನ್ನು ಕರೆಸಿ ಆಲೋಚಿಸಿ ಅವರ ಮನಸ್ಸಿಗೆ ನೋವುಂಟಾಗಿದ್ದರೆ ಪರಿಹರಿಸೋಣ. ಹಿಂದೆ ಕರ್ಣಾಟಕವೆಂಬ ಹೆಸರಿರಬೇಕೆಂದು ಹೇಳುತ್ತಿದ್ದರು. ಈಗ ಕೇಂದ್ರಸರ್ಕಾರದವರು ಮೈಸೂರು ಎಂದು ಕರೆದಿದ್ದಾರೆ. ಒಟ್ಟಿಗೆ ಎಲ್ಲರೂ ಸೇರಿದಾಗ ಸೌಹಾರ್ದದಿಂದ ನಡೆಯಬೇಕಾದ್ದದ್ದು ಅತ್ಯಾವಶ್ಯಕ. ಆದ್ದರಿಂದ ಮೈಸೂರು ಎಂಬ ಹೆಸರನ್ನು ಅವರು ಒಪ್ಪುವುದಿಲ್ಲವೆಂದು ಮುಖ್ಯಮಂತ್ರಿಗಳು ಉದ್ರೇಕಗೊಳ್ಳಬೇಕಾಗಿಲ್ಲವೆಂದು ಎಚ್ಚರಿಕೆ ಕೊಡಬೇಕಾದ ಆವಶ್ಯಕತೆಯಿಲ್ಲ.

ಇನ್ನೊಂದು ಸಂಬಳಸಾರಿಗೆ ವಿಚಾರವಾಗಿ ಮುಖ್ಯಮಂತ್ರಿಗಳು ಹೇಳಿದರು. ಅದರಲ್ಲಿ ಅನೇಕ ವಿಷಯಗಳನ್ನು ನಾನು ಒಪ್ಪುತ್ತೇನೆ. ಬಜೆಟ್ ಭಾಷಣದಲ್ಲೇ ನಾನು ಈ ವಿಷಯ ಹೇಳಿದೆ. ನಮ್ಮ ಆರ್ಥಿಕ ಸ್ಥಿತಿಯನ್ನು ಗಣನೆಗೆತೆಗೆದುಕೊಂಡರೆ ಮತ್ತು ಬಜೆಟ್ ಅಂದಾಜಿನ ಆಯವ್ಯಯವನ್ನು ಸರಿದೂಗಿಸಬೇಕಾದರೆ ಬಹುಶಃ ಎಲ್ಲ ಅಧಿಕಾರಿಗಳೂ ಎಲ್ಲ ಸರ್ಕಾರಿ ನೌಕರರೂ ಅವರ ಸಂಬಳಗಳನ್ನು ಕಡಮೆಮಾಡಿಕೊಳ್ಳಬೇಕಾದ ಕಾಲ ಬರಬಹುದೆಂದು ಹೇಳಿದೆ. ಈಗ ಪ್ರಾಂತ ಪುನರ್ವಿಂಗಡಣೆಯಿಂದ ಇದೊಂದು ದೊಡ್ಡ ಸಮಸ್ಯೆಯಾಗಿದೆ. ಬೊಂಬಾಯಿನಲ್ಲಿ, ಮದರಾಸಿನಲ್ಲಿ ಮತ್ತು ಮೊದಮೊದಲು ಪ್ರೆಸಿಡೆನ್ಸಿಯಿದ್ದ ಕಡೆ ಸಂಬಳ ಜಾಸ್ತಿಯೇ ಇದೆ. ಅಲ್ಲಿರುವ ಇಂಡಿಯನ್ ಆಫೀಸರುಗಳು, ಇಂಪೀರಿಯಲ್ ಸರ್ವಿಸ್‌ನಲ್ಲಿದ್ದವರು, ಐ.ಎ.ಎಸ್. ಸರ್ವಿಸ್‌ನಲ್ಲಿರುವವರು ಇಂಥ ಆಫೀಸರುಗಳಿಗೆಲ್ಲಾ ಸಂಬಳ ಜಾಸ್ತಿ. ಅವರಿಗೆ ಹೋಲಿಸಿದರೆ ಮೈಸೂರಿನವರಿಗೆ ಸಂಬಳ ಕಡಮೆ, ಮೈಸೂರಿಗೆ ಹೊರಗಿನಿಂದ ಬರುವವರು ಮೈಸೂರಿನಲ್ಲಿ ಈಗ ಏನು ಸಂಬಳ ಕೊಡುತ್ತೇವೋ ಅದನ್ನು ಒಪ್ಪಿಕೊಳ್ಳುವ ಹಾಗಿದ್ದರೆ ಅಂಥವರು ಮಾತ್ರ ಬರಬಹುದು ಎಂದು ಮುಖ್ಯಮಂತ್ರಿಗಳು ಹೇಳಿದರು. ನಾನು ಅದನ್ನು ಒಪ್ಪುತ್ತೇನೆ. ಇಲ್ಲಿಗೆ ಬರುವ ಸರ್ಕಾರಿ ನೌಕರಿಯಲ್ಲಿರುವವರೆಲ್ಲರೂ ಬರೀ ಸಂಬಳದ ವಿಷಯವಾಗಿ ಯೋಚನೆ ಮಾಡಕೂಡದು; ಈ ದೇಶದ ಆರ್ಥಿಕ ಸ್ಥಿತಿ ಯಾವರೀತಿಯಿದೆಯೋ ಅದಕ್ಕನುಗುಣವಾಗಿ ಅವರಿಗೆ ಎಷ್ಟು ಸಂಬಳ ಕೊಡಬಹುದು ಎಂಬುದನ್ನು ಅವರು ಅರಿತುಕೊಳ್ಳಬೇಕು. ನಾವು ಒಂದು ಪಕ್ಷ ನಮ್ಮ ಸೀಮೆಯಲ್ಲಿರುವ ಆಫೀಸರುಗಳ ಸಂಬಳವನ್ನು ಅದೇ ಮಟ್ಟದಲ್ಲಿಟ್ಟರೂ ಈ ಸಮಸ್ಯೆ ಬಗೆಹರಿಯುವುದಿಲ್ಲ. ಇಂಡಿಯಾ ದೇಶವೆಲ್ಲಾ ಒಂದೇ; ಕೆಲವರಿಗೆ ಕಡಿಮೆ ಸಂಬಳ, ಕೆಲವರಿಗೆ ಜಾಸ್ತಿ ಸಂಬಳ ಇದ್ದರೆ ಸಮಾಧಾನವಿರುವುದಿಲ್ಲ. ಪಕ್ಕದ ಮನೆಯಲ್ಲಿ ಒಬ್ಬನಿಗೆ ಹೆಚ್ಚು ಸಂಬಳ ಬರುತ್ತಿದ್ದು ಅದೇ ಕೆಲಸಮಾಡುವ ಇನ್ನೊಬ್ಬನಿಗೆ ಕಡಮೆ ಸಂಬಳ, ಕಡಮೆ ಸೌಲಭ್ಯವಿದ್ದರೆ ಅವನ ಹೊಟ್ಟೆಯುರಿ ಮಾಯವಾಗುವುದಿಲ್ಲ. ಆದ್ದರಿಂದ ನಾವು ಸಲಹೆಮಾಡುವುದೇನೆಂದರೆ, ಕೇಂದ್ರ ಸರ್ಕಾರದವರು ಒಂದು ನಿರ್ದಿಷ್ಟವಾದ ತೀರ್ಮಾನಕ್ಕೆ ಬರಬೇಕು. ಎಲ್ಲ ಪ್ರಾಂತಗಳೂ ಒಂದಾಗುವಾಗ ಒಂದೇ ರೀತಿಯಿರಬೇಕು. ಈಗ ಹೈಕೋರ್ಟ್ ಜಡ್ಜಿಗಳಿಗೆ ಒಂದೊಂದು ಪ್ರಾಂತದಲ್ಲಿ ಒಂದೊಂದು ರೀತಿಯ ಸಂಬಳವಿದೆ. ಮೈಸೂರಿನಲ್ಲಿ ಎರಡು ಸಾವಿರ ರೂಪಾಯಿಗಳು, ಮದರಾಸಿನಲ್ಲಿ ಮತ್ತು ಬಂಗಾಳದಲ್ಲಿ ಐದು ಸಾವಿರ ರೂಪಾಯಿಗಳು, ಅಸ್ಸಾಂನಲ್ಲಿ ಕಡಿಮೆ—ಹೀಗೆಲ್ಲಾ ಇದೆ. ಇಂಡಿಯಾ ದೇಶದಲ್ಲೆಲ್ಲ

ಹೈಕೋರ್ಟ್ ಜಡ್ಜಿಗಳಿಗೆ ಒಂದೇ ಸಮವಾದ ಸಂಬಳವಿರಬೇಕು, ಒಂದು ಹೈಕೋರ್ಟಿನಿಂದ ಇನ್ನೊಂದು ಹೈಕೋರ್ಟಿಗೆ ವರ್ಗಮಾಡುವ ಹಾಗಿರಬೇಕು, ಹೊರದೇಶದಿಂದ ಇಲ್ಲಿಗೆ ಬರುವ ಹಾಗಿರಬೇಕು.

Sri K. HANUMANTHAIYA.—It is on this basis of uniformity that the scales of pay are going up.

ಶ್ರೀ ಜೆ. ಮಹಮ್ಮದ್ ಇಮಾಂ.—ಎರಡನೆಯದೇನೆಂದರೆ, ಸೋಷಿಯಲಿಸ್ಟಿಕ್ ಪ್ಯಾಟರ್ನ್ ಜಾರಿಗೆ ತರಬೇಕೆಂದಿದೆ. ದೊಡ್ಡ ದೊಡ್ಡ ಅಧಿಕಾರಿಗಳಿಗೆ ಇದನ್ನು ಅನ್ವಯಿಸಿದ ಹಾಗೆ ಕಾಣುವುದಿಲ್ಲ. ಯಾವ ಅಧಿಕಾರಿಯ ಸಂಬಳವನ್ನು ನಿಗದಿಮಾಡಬೇಕಾದರೂ ನಮ್ಮ ಸೀಮೆಯ ಆರ್ಥಿಕ ಸ್ಥಿತಿ, ಪರ್ ಕ್ಯಾಪಿಟಾ ಇನ್ಕಂ, ಜನರಿಗೆ ತೆರಿಗೆಕೊಡುವುದಕ್ಕಿರುವ ಶಕ್ತಿ, ನ್ಯಾಷನಲ್ ಇನ್ಕಮ್ಮಿಗೆ ಜನತೆ ಎಷ್ಟು ಕಾಂಟ್ರಿಬ್ಯೂಟ್ ಮಾಡಬಹುದು ಎಂಬುದನ್ನು ನೋಡಿ ಅದಕ್ಕನುಗುಣವಾಗಿ ಮಾಡಬೇಕು. There must be certain proportion. ಈಗ ಇಂಡಿಯಾ ದೇಶದಲ್ಲಿ ಒಬ್ಬ ಆಫೀಸರಿಗೆ ಆತನು ಅನುಕೂಲವಾಗಿ ಜೀವನ ನಡೆಸುವುದಕ್ಕೆ ಎಷ್ಟು ಸಂಬಳ ಕೊಡಬಹುದು ಎಂಬುದನ್ನು ಗಮನಿಸಿ ಸರಿಯಾದ ರೀತಿಯಲ್ಲಿ ನಮ್ಮ ಸೀಮೆಗೆ ತಕ್ಕ ಹಾಗೆ ಯೂನಿಫಾರಂ ಸ್ಕೇಲನ್ನು ಎಲ್ಲಾ ಕಡೆಯೂ ನಿಗದಿಮಾಡುವುದು ಉಚಿತವಾಗಿದೆ. ಐ. ಎ. ಎಸ್. ಆಫೀಸರುಗಳಿಗೆ ಎರಡು ಸಾವಿರ ರೂಪಾಯಿಗಳವರೆಗೆ ಸಂಬಳವಿದೆ. ಅದೇ ಕೆಲಸ ಮಾಡುವವರಿಗೆ ಮೈಸೂರು ದೇಶದಲ್ಲಿ 800 ರೂಪಾಯಿಗಳಿವೆ. ಐ. ಎ. ಎಸ್. ಸ್ಕೇಲ್ ಏಕೆ ತೆಗೆಯಬಾರದು ? ಲೋಕಲ್ ಆಫೀಸರುಗಳಿಗೂ ಅವರಿಗೂ ಏಕೆ ವ್ಯತ್ಯಾಸ ?

ಮುಖ್ಯ ಮಂತ್ರಿಗಳು, ನಾವುಗಳೆಲ್ಲರೂ ಒಂದೇ ಒಂದು ಧ್ಯೇಯದಿಂದ ದುಡಿಯಬೇಕು, ನಮ್ಮ ದೇಶದ ಹಿತ ದೃಷ್ಟಿಯಿಂದ ವರ್ತಿಸಬೇಕು ಎಂದು ಹೇಳಿದರು. ನನ್ನ ಅಭಿಪ್ರಾಯದಲ್ಲಿ ಈ ಪ್ರಾಂತಗಳಲ್ಲಿ, ಭಾಷಾವಾರು ಪ್ರಾಂತವೇ ಆಗಲಿ ಅಥವಾ ಬೇರೆ ರೀತಿಯೇ ಆಗಲಿ, ಒಂದು ಪ್ರಾಂತದಲ್ಲಿ ಹಣಕಾಸಿದ್ದರೂ ಸಹ ದೇಶದ ಸಾಲಿಡ್ಯಾರಿಟಿಗೆ ಯಾವ ವಿಧದಲ್ಲೂ ಧಕ್ಕೆ ಬರುವುದಿಲ್ಲ. ಈ ವಿಚಾರದಲ್ಲಿ ನನಗೆ ಸಂಪೂರ್ಣವಾದ ನಂಬಿಕೆಯಿದೆ. ಇದುವರೆಗೆ ಇಂಡಿಯಾ ದೇಶದಲ್ಲಿ ಭಿನ್ನಾಭಿಪ್ರಾಯ, ಅಪನಂಬಿಕೆ ಇತ್ತು ; ಪ್ರಾಂತಗಳಲ್ಲಿ ಭಿನ್ನಾಭಿಪ್ರಾಯ, ತೊಂದರೆ, ಹೆಟೆರೋಜಿನಿಟಿ ಇತ್ತು. ಪ್ರಾಂತ ಪುನರ್ವಿಂಗಡಣೆಯಾದ ನಂತರ ಹೋಮೋಜಿನಿಟಿ, ಒಂದೇ ತರಹ ಭಾಷೆ, ಸಂಸ್ಕೃತಿ ಇರುವುದರಿಂದ ಅಂತಹ ಕಲಹ ಮಾಯವಾಗುವುದಕ್ಕೆ, ಪ್ರಾಂತ ಅಭಿವೃದ್ಧಿಯಾಗುವುದಕ್ಕೆ ಒಂದು ತರಹ ಅವಕಾಶವಾಗುತ್ತದೆ. ಇದುವರೆಗೂ ಮದರಾಸು ಆಂಧ್ರ ಎಷ್ಟೋ ಸಲ ಒಟ್ಟಿಗಿದ್ದರೂ ಸಹ ಆಂಧ್ರರಿಗೂ ತಮಿಳರಿಗೂ ಜಗಳವಾಗತ್ತಿತ್ತು. ಭಿನ್ನಾಭಿಪ್ರಾಯದಿಂದ ಅವರಲ್ಲಿ ಸರಿಸಮಾನವಾದ ದೃಷ್ಟಿಯಿರಲಿಲ್ಲ.

ಶ್ರೀ ಎಸ್. ಹುಚ್ಚಮಾಸ್ತಿಗೌಡ (ಹುಲಿಯೂರು ದುರ್ಗ).—ಬಂಗಾಳ ಮತ್ತು ಯು. ಪಿ. ಅಲ್ಲಿ ಭಿನ್ನಾಭಿಪ್ರಾಯ, ವ್ಯಾಜ್ಯ ಯಾವುದೂ ಇರಲಿಲ್ಲವೆ ?

ಶ್ರೀ ಜೆ. ಮಹಮ್ಮದ್ ಇಮಾಂ—ನಾನು ಕಂಡ ಹಾಗೆ ಇಲ್ಲ. ಪೊನ್ನ ಎಸ್. ಆರ್. ಸಿ. ಕಮಿಷನ್ ಅವರು ವಿಭಾಗ ಮಾಡಕೂಡದು, ಒಟ್ಟಿಗೆ ಇರಬೇಕು ಎಂದು ಹೇಳಿದರು.

ಹೀಗೆ ಮಾಡಿದರೆ ಎಲ್ಲಕಡೆಗಳಲ್ಲಿಯೂ ಒಂದು ಭಾಷೆ, ಒಂದು ಸಂಸ್ಕೃತಿ ಇರಲು ಅವಕಾಶವಾಗುತ್ತದೆ. ಇದರಿಂದ ಮುಂದೆ ದೇಶದಲ್ಲಿ ಇಂಟರ್ನಲ್ ಟ್ರಬಲ್ಸ್ ಯಾವವೂ ಇರುವುದಿಲ್ಲ. ಆಗ ದೇಶದಲ್ಲಿರತಕ್ಕಂಥ ಎಲ್ಲ ಜನರಿಗೂ ತಮ್ಮ ಸರ್ವಶಕ್ತಿ ಸಾಮರ್ಥ್ಯಗಳನ್ನೂ ಉಪಯೋಗಿಸಿ ದೇಶವನ್ನು ಅಭಿವೃದ್ಧಿ ಸ್ಥಿತಿಗೆ ತರಲು ಇದರಿಂದ ತುಂಬ ಸಹಾಯವಾಗುತ್ತದೆ. ಇದರಿಂದ ದೇಶ ಜಾಗ್ರತೆ ಅಭಿವೃದ್ಧಿಗೆ ಬರಲು ಅವಕಾಶವಿದೆ. ಈ ರೀತಿ ಒಂದೊಂದು ಪ್ರಾಂತ್ಯದಲ್ಲಿರುವ ಜನರೂ ಒಂದು ಹೊಂದಾಣಿಕೆಯಿಂದ ಸಹಕರಿಸಿ ಅಣ್ಣತಮ್ಮಂದಿರಂತೆ ವರ್ತಿಸಲು ಅವಕಾಶವಿರುವುದರಿಂದ ಈ ಪ್ರಾಂತ್ಯ ಸರ್ಕಾರಗಳ ನೆಮ್ಮದಿಯ ವಿಚಾರದಲ್ಲಿ ಕೇಂದ್ರ ಸರ್ಕಾರದ ಜವಾಬ್ದಾರಿ ಕಡಮೆಯಾಗುತ್ತದೆ. ಅಷ್ಟು ಹೆಚ್ಚಿಗೆ ನಿಗಾ ಕೊಡಬೇಕಾದ ಅವಶ್ಯಕತೆಯಿರುವುದಿಲ್ಲ. ಇದರಿಂದ ಜನರಲ್ಲಿರತಕ್ಕಂಥ ಭಿನ್ನಾಭಿಪ್ರಾಯಗಳೆಲ್ಲಾ ಮಾಯವಾಗುತ್ತವೆ, ದೇಶಾಭಿವೃದ್ಧಿಗೆ ಆಗ ಹೆಚ್ಚು ಅನುಕೂಲವಾಗುತ್ತದೆ. ಈಗ ಗಲೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಹಾಗೆ, ನಮ್ಮ ಮನೆಗೆ ಯಾರಾದರೂ ಅತಿಥಿಗಳು ಬಂದರೆ ನಾವು ಅವರನ್ನು ಉಪಚರಿಸಬೇಕಾದದ್ದು ನಮ್ಮ ಕರ್ತವ್ಯ. ಹೀಗೆ ನಾವು ಮಾಡತಕ್ಕದ್ದು ಅಗತ್ಯ. ಇದರಿಂದ ಜನರಲ್ಲಿ ಪರಸ್ಪರ ಪ್ರೇಮ ಉಂಟಾಗುತ್ತದೆ. ನಾವು ಇತರರ ಬಗ್ಗೆ ಹೇಗೆ ವರ್ತಿಸುತ್ತೇವೋ ಹಾಗೆಯೇ ಇತರರೂ ನಮ್ಮನ್ನು ಪ್ರೀತಿಸುತ್ತಾರೆ. ಇದರಿಂದ ದೇಶಾಭಿವೃದ್ಧಿ ಬಗ್ಗೆ ಇರತಕ್ಕ ಸಂಶಯಗಳೆಲ್ಲ ನಿವಾರಣೆಯಾಗತ್ತವೆ. ಈ ದಿವಸ ಇಂಡಿಯಾ ದೇಶದಲ್ಲಿ ಈ ಹೊಸ ಏರ್ಪಾಡು ಜಾರಿಗೆ ಬಂದದ್ದು ಬಹಳ ಒಳ್ಳೆಯದು. ಈ ವಿಷಯದಲ್ಲಿ ಈ ಹಿಂದೆ ಕೆಲವರಿಗೆ ಕೆಲವು ವಿಚಾರಗಳ ಬಗ್ಗೆ ಭಿನ್ನಾಭಿಪ್ರಾಯವಿತ್ತು. ಆದರೆ ನಮಗೆ ಈ ದಿವಸ ಅನೇಕ ಪ್ರದೇಶಗಳು ಹೊರಗಡೆಯಿಂದ ಬರುತ್ತವೆ. ಆದುದರಿಂದ ಈಗ ನಮ್ಮ ಮುಂದಿನ ಕರ್ತವ್ಯಗಳೇನೆಂಬುದನ್ನು ನಾವು ವಿಮರ್ಶೆ ಮಾಡಬೇಕಾದದ್ದು ಬಹಳ ಮುಖ್ಯವಾದದ್ದು. ಈ ಸಂದರ್ಭದಲ್ಲಿ ಕನ್ನಡಿಗರ ಮನಸ್ಸು ವಿಶಾಲಗೊಳ್ಳಬೇಕು. ಅವರು ದೇಶಕ್ಕೊಂದು ದೊಡ್ಡ ಸೇವೆ ಸಲ್ಲಿಸಬೇಕು. ಈ ನಮ್ಮ ನೂತನ ಮೈಸೂರು ದೇಶ ಕರ್ಣಾಟಕಕ್ಕೆ ಒಂದು ತಿಲಕ ಪ್ರಾಯವಾಗತಕ್ಕ ರೀತಿಯಲ್ಲಿ ಎಲ್ಲರೂ ವರ್ತಿಸಬೇಕಾದದ್ದು ಯುಕ್ತವೆಂದು ಹೇಳಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

Sri K. PATTABHIRAMAN (Kolar).—Mr. Speaker, Sir, the States Reorganisation Bill is before us. Possibly, this is an occasion when memories of so many of our recent events naturally crowd back and still, as has been suggested by the Leader of the House, this must also be the occasion when we forget those recent events and look at this not merely as a *fait accompli* but as implicit for our future and for the future of this country. So, I do not propose to traverse those events or what we have spent during those dark days but say that to-day we will be starting a new era as it were in Mysore when from every section of this House there would be wholehearted and enthusiastic welcome to the proposed big State of Mysore. At the out-

(SRI K. PATTABHIRAMAN.)

set it is necessary for me to refer to one thing that is very uppermost in this Bill. The Leader of the House has already referred to it, namely, the approval accorded to the unanimous wish of this House to name the proposed new State as 'Mysore'. At the same time I must express my misgiving and give myself a warning as it were. When we ask for this name 'Mysore' to be used for the new proposed State, if it were in order to emphasise the geographical content of the little Mysore in the wider Mysore, if the emphasis is going to be placed upon it, I should be very sorry and that would be a perfect justification for those who come from outside not to relish that name. I would rather expect, as has been very often suggested and emphasised by the Leader of the House, that, when he asked for this name 'Mysore' to be used, it was only in order to emphasise the composite character, the character of oneness, the character that we were unified in outlook and approach. Therefore, assuming a name like Mysore so that on the sectional interests emphasis might be placed, it should be avoided. It is with that broad perspective we suggested the name. If we of this Mysore State acquit ourselves, and behave as it were with that large heartedness and sympathy which is expected of us by those who come in, possibly the little irritation that might have been caused to those who swore by the name of Karnataka, I am sure, that will be forgotten and we will have started our journey together in a spirit of cordiality and in a spirit of concord. That is all that I would like to say so far as this issue of the name of Mysore proposed is concerned.

At this stage there is one other observation that I wish to make. For the first time we find in this Bill an attempt made by a Parliamentary legislation to make amendments to certain aspects of the Constitution. Though I am not prepared to say that there is anything unconstitutional or illegal about it, still it is time that we consider whether it was proper that we did so. That is what we find in this Bill. This Bill after all has come up before us in order to have our opinions, in order to express our views on it. It is also an occasion where I would be within my competence if I try to traverse several parts of this Bill as they refer not merely to Mysore, to the immediate context of Mysore, but to the wider India. But I do not propose to take the time of this House by referring to them all, though I am certainly competent to do so. Therefore, I will cofine my remarks to such of the aspects of this Bill which concern us immediately and which concern the State of Mysore. I am in wholehearted agreement with some of the observations made by the Leader of the House when he moved this Bill. But there are one or two aspects on which I would like to make strong remarks in order that my view on this matter might be impressed on the Hon'ble Members of this House and as far as possible, I would like to persuade them to come over to this view of mine. Those two questions are, what we refer to as the Zonal Council in part III of the Bill and the future of the Legislative Council of Mysore I take the Zonal Council first. I am sure the Leader of the House did not speak out his full mind when he was referring to the Zonal Council. I know him. I perhaps think that he in his own way wanted to make his remarks as agreeable to everybody including those at the heights of Delhi. It is that that is responsible and prevented him from speaking out his mind. I know how his mind works, the thrill and throb of his heart. In fact, now I wish to emphasise this aspect. If you give the statutory sanction to the Zonal Council, let me be very plainly and clearly understood when I say that that is stamping inferiority on the States. What is the constitution that we are thinking of for the Zonal Council? Forget for a moment the background upon which this idea emanated, and the persons who are the authors of the Zonal Council; take it as it and leave it there the Bill Here is the Zonal Council of which a Centsal Minister is going to be the Chairman. All this time, all these four years, we

have battled hard against this over-centralisation on the part of the Central Government, even when it was being done on an administrative basis. To-day for the first time we are asked to give statutory sanction to some thing which we battled against all these four years. I ask this House to consider for one moment the provisions here. The Chief Ministers of the four States come there. They are Vice-Presidents by rotation. The Chief Secretaries are Secretaries by rotation. Two other Ministers of each State are there. The Development Commissioner is there. That is all the Zonal Council. Even under the Constitution as it is, is it not possible for a mutual understanding and a resolution of conflicts? Mutual consultation is always possible even under the present Constitution. What is it extra that we secure as a result of this Bill which we did not have even according to the provisions of the present Constitution? Let us think of the possible dangers. A Central Minister becomes the Chairman. To-day he is there not merely as panchayatdar—I am using the colloquial word not meaning thereby any disrespect to those who sponsor this Bill, but just to carry home in the ordinary parlance what exactly I mean. The Central Minister is going to be the deciding Chairman. What are the disputes referred to it? The disputes that arise as a result of the Bill, the inter-State disputes, the border disputes. Let us take one example. In regard to the future of Hosur taluk there was a move to decide it in talks between the Chief Minister of Madras and the Chief Minister of Andhra. They met for days and days together, a lot of material was prepared and the discussions—where did it take to? It remained where it began. To-day we are again at the end of it and we do not have any solution. The tendency will be, even ordinary and small matters would be magnified and given the status of an inter-State dispute; that will be the tendency. When we think of a Zonal Council, a small matter which by mutual correspondence, by an exchange of one or two letters, could be resolved, would be magnified and placed before the Zonal Council. Let me go a step further. When a question has been referred to the Zonal Council, when it is not resolved, what will happen? The Central Minister who is the Chairman and who represents the Government of India will take it up and their decision is binding. I ask this House with great humility—are you for giving that statutory sanction to this indirect pressure, pressure which we have battled against and resented all these four years? I feel that whatever was available even according to the provisions of the present Constitution to resolve all matters by mutual understanding and mutual concord—even that is taken away. That is the Zonal Council. I do not propose to speak much of this Zonal Council. I will have another occasion to do so when I propose an amendment. But I ask this House through you, with great humility—I appeal to this House so far as this question is concerned,—let us forget the psychological background upon which this idea of Zonal Council shot up, but let us study the Bill only. I appeal to the Hon'ble Members of this House, do not for Heaven's sake give sanction to this. I would even say, let us go on as we are. As a matter of fact, I want to say if the sincerity of those who took up the idea of this Council—I am not referring to the States, I am referring to the Centre; I know that it would be a kind of sacrilegious talk if I indulged in using wide expressions but nevertheless, as things stand, and in order to speak out my mind definitely and emphatically I must say that,—if the sincerity of those who are responsible for this idea of the Zonal Council is to be tested and found not wanting, I make an offer to them: are you prepared to delegate some of the powers that you have under the Union List—VII Schedule to that authority? If you feel that the centrifugal tendencies must be curbed and controlled, if you feel that the natural barriers that might arise as between State and State on account of the emphasis placed on State must come to an end, if all that

(SRI K. PATTABHIRAMAN.)

is what you feel strongly, let us give this a solution. Are you prepared to delegate powers under the Union List to that authority? Even under the Constitution there is a provision that it is open to the Central Government to delegate any of the powers under the Union List either to a State Government or its officers subject to its overall control. In fact, it would do something, I am sure, which would be enthusiastically welcomed by every section of this House and by those from outside. You do not go one step further, but say it is not such a Council but an advisory body with a costly machinery. You have merely to read the provisions of the Bill to see that administratively it would be inefficient, and politically not acceptable. Therefore, I appeal to this House. These are the two pictures I place before this House. You have got the official Zonal Council, advisory in character and all that on the one side; on the other side another picture by which you can test the *bona fidies* and particularly of those who in the South of India, and say that a new body will have to come into existence so that the sectional interests might be curbed and controlled and the national sentiment, national feeling, national effervescence might grow. If that is really true, I make this offer. I do not enter into it in detail now. I will do so when I propose an amendment. So far as the Zonal Council is concerned, let me make myself very clear. Let us dispassionately consider that. I am sure if you read the Bill as it is and those relevant provisions with reference to this Council, except stamping inferiority on the State Government, it will not take us anywhere. As a matter of fact, at a time when we feel that over-centralisation is curbing the very personality of the State and that it cannot rise to its full stature and because of the financial disability that has been forced on it, it will not be right that this move could go on. I feel very strongly on the Council; I hope I will have another opportunity to refer to it again. This Council is certainly not very happy and therefore, I appeal to this House and say that so far as Part III is concerned, let it be the unanimous opinion of this House to dissent from it and move for its deletion. That is all I would like to say at this stage so far as the Zonal Council is concerned.

12-30 P.M.

Sri A. BHEEMAPPA NAIK (Molakalmuru).—Supposing powers are enlarged as envisaged by you, what objection would you have over such Councils?

Sri K. PATTABHIRAMAN.—Absolutely none. That is why I said that if the House accepts my amendment nobody would be happier than I.

Next, I would like to refer to the question of the Legislative Council. I am one of those who believes in a unicameral legislature. In fact, just as I was thinking about it, Sri Mariappa who was present here inspired me and I recall to my mind something that happened years ago. In the All-Mysore Congress Committee we had to think of a constitution for Mysore. A drafting Committee was constituted and I am happy to say that my colleague Sri T. Mariappa was with me on this committee then. I had something to do with it. I still remember the session in Bangalore where we definitely said there must be unicameral legislature for Mysore; myself and Sri Mariappa stood against the whole House; when the tendency was to have a bicameral legislature we succeeded in taking the entire House with us and the official records of the Congress disclose that they are for unicameral legislature.

Sri K. HANUMANTHAIYA—You have grown wiser.

Sri K. PATTABHIRAMAN.—And therefore our conviction has become stronger. Therefore, my suggestion to this House is this. It is unnecessary perhaps for me to theorise on this question of unicameral legislature *vis a vis* bicameral legislature. We have to merely see what will happen. Let it be clearly understood by the members on the other side that I am not looking at this question as a party

question. In fact nobody doubts my *bona fides.* It may mean that after some years to come it will be completely manned by men supporting the party in power. There is no doubt about it. All the bye-elections with this illusory idea of rotation and transferable vote have certainly proved it. Still I know my *bona fides* will not be suspected at any rate in this House, where I have many, with whom I have worked shoulder to shoulder. What is the idea of a revising chamber ? It is a fascinating idea when we read it in the text-books on the Constitution. But as a matter of fact What is it ? And at a time when we have got to work with speed ? It is something like the Cauvery rushing along in Chunchanakatte. Water rushes along there with great force. It is not then that we can think of a controlling Chamber. It is not possible. It is only later when the Cauvery can be harnessed and can be controlled. In the days which we are facing now, things have to be worked at top speed. In fact what can be done in a century has got to be done in a few years. It is possible, when rushing along with such speed and velocity, that some mistakes may happen. But still I feel that this is the time when youthful buoyancy required for reconstructing the country has got to be harnessed. As things now stand, for at least 20 to 40 years to come, there is absolutely no question of having a retarding Chamber. Even now what is the average age of members of the Legislative Council above ? Certainly not higher than the average age of members here. Some of us are old in this House and we are as wise as some members want. Therefore sanity is not to be found in one House only. These are questions which may be put to a school room and on the basis of old text-books. I find absolutely no case is made out for the continuance of the Legislative Council. That is what this Bill wants. Therefore I request this House through you, Sir, to consider very dispassionately whether they really feel there is need for the Legislative Council. In fact I am making a definite proposal. Instead of the Legislative Council, consisting of forty members, we have now thought a council with sixty members and the Bill says that 10 will be nominated. You may ask the question who are going to nominate them ? Supposing those 10 votes are lacking. Does the Government suffer ? Absolutely none. It may be that party men may be satisfied. But there is nothing wrong in that. (*Interruption*). It is very difficult for me to carry conviction to my Leader and ask him to take a non-party or an all-party attitude, because he knows where his strength lies and which side of the bread is buttered. But taking things by and large, my appeal is. . . .

Sri K. HANUMANTHAIYA.—I eat rice not bread.

Sri A. BHEEMAPPA NAIK.—It is given gheed.

Sri K. PATTABHIRAMAN.—I know the Leader of the House from a long time, from a decade now. I know how his heart works. Very few there are in Mysore, in the public life of Mysore, whose practical idealism can ever hit beyond Sri Hanumanthaiya's mark. I leave the matter there. Therefore, so far as the Legislative Council is concerned, I feel that the time has come when we have got to take a decision. In the Constitution itself it is said that the Legislative Council shall continue until a resolution by this House is passed for its abolition. While that is the constitutional provision, we are asked to register, perhaps even in contradistinction to what is contained in the Constitution, our opinion to make it a permanent body. Therefore it is now time for the House to consider whether we should continue this costly machinery of a Legislative Council. In fact I am making a very definite suggestion. It is a moot point whether functional representation which is the basis of constituting our Legislative Council is really a progressive step. People are not wanting to say and even go to the extent of saying—not that I have their view—that functional representation is a revival of caste system in another form. I will not develop that. So considering all these aspects, a time has come when we have got to take a decision on the continuance or otherwise of this Legislative Council. I am making a plea that it is possible to enhance the membership of this House itself. In

(SRI K. PATTABHIRAMAN.)

fact the proportion that is suggested is 1 : 7 in the Bill in the Third Schedule. There is nothing wrong to make it 1 : 8 (*A Voice*: 1 : 9) yes, 1 : 9 even. I am very happy to hear that, so that instead of the Legislative Council being manned as at present, increased number of persons who have got very near and direct, every five years, to the electorate, who can really feel the thrill of life, must come to this House and therefore I am making the definite suggestion that we Vote to abolish the Legislative Council in Mysore. I would be very happy if the Legislative Councils are abolished throughout India. But as I have said, I will confine my remarks only to Mysore. I am making a definite suggestion that the Legislative Council may go and if you want some 26 more friends to come,—and I am using the word 'you' very deliberately and purposely,—if you really want 26 friends. . . (*Sri A. Bheemappa Naik.—Why not* 52?) All right, let us agree. In fact it is a sporting offer made by the Leader of the House that, after all the amendments are tabled, he will take the opportunity of driving at a common measure of agreement among ourselves. This is a good suggestion.

There are two other matters upon which I would like to make a reference and there I would leave. In the new set-up very many problems do arise. The idea of Dakshina Pradesh has been referred to. It was perhaps Emerson who said :

> "To suffer in the estimation of others is bad enough ; but to suffer in self-esteem is a worse tragedy."

We would suffer in self-esteem when we desire to hug at any body, who do not want us. Tamilnad does not want us ; Andhra does not want us. It was the starting point for an agitation. Kerala does not want us. That is the position. Let it not be understood that I am for disturbing the proverbial happy atmosphere created by the Leader of the House. I understand where exactly he was driving at. He said that if all these people who while saying greater Mysore and thinking in terms of wider nationality and wider citizenship, decry Dakshina Pradesh, he would doubt their patriotism. May I return the compliment and ask him this ? Nobody has thought of Andhra citizenship or Tamilnad citizenship. Those ideas are foreign to us. I only appeal to this House through you, Sir, let us give a trial to this new nexus that has to come into existence. For hundreds of years or even more they were scattered about. Under various administrations they have been strewn and scattered about. They are going to coalesce. Give it a trial. Let it work. After all it looks to me, in our public life, for some years now, we seem to rely too much on the thoughts of leaders. We do not want or allow time to the common man to think of problems. That is my greatest grievance against the ruling party. I appeal to you, let these new States be formed and let them work for a few years. They must have a natural growth. After all by corporate living a new unanimity is forged in thought, word and deed and when that is established then it might lead to all this. Therefore, let us not try to force the pace of any thought. Let it take a natural course Therefore this idea of Dakshina Pradesh, not that I am opposed to that, but I feel that forcing the pace will certainly not help us. Let us know the full picture of Dakshina Pradesh. Therefore, with these words, as I have another opportunity to speak on this Bill when amendments come up, I wholeheartedly welcome this Bill with the modifications I have proposed and I hope there will be a unanimous approval given so far as this Bill is concerned.

ಶ್ರೀ ಬಿ. ಟಿ. ಕೆಂಪರಾಜ್ (ಬೆಂಗಳೂರು ದಕ್ಷಿಣ – ಅನುಸೂಚಿತ ಜಾತಿಗಳು).—ಸ್ವಾಮಿ, ಸಭೆಯ ಮುಂದಿರತಕ್ಕ ಈ ಮಸೂದೆಯನ್ನು ಸ್ವಾಗತಿಸುತ್ತ ಒಂದೆರಡು ವಿಚಾರಗಳನ್ನು ಪ್ರಸ್ತಾಪಿಸಬೇಕೆಂದು ಇಷ್ಟಪಡುತ್ತೇನೆ. ಈಗಾಗಲೇ ಈ ಮಸೂದೆಯ ವಿಚಾರವಾಗಿ ಮಾನ್ಯ ಸಭಾ ನಾಯಕರೂ ಮತ್ತು ಶ್ರೀ ಪಟ್ಟಾಭಿರಾಮನ್‌ಅವರೂ ಬಹಳ ಸೂಕ್ತವಾದ ಸಲಹೆಗಳನ್ನು ಹೇಳಿದ್ದಾರೆ. ನಾವೀಗ ಒಂದು ಇತಿಹಾಸದ ಪರ್ವ ಕಾಲದಲ್ಲಿದ್ದೇವೆ. ಇದಕ್ಕೆ ಕಾರಣ ನಮ್ಮ ಮುಂದಿರತಕ್ಕ ಈ ಮಸೂದೆ. ಈ ಮಸೂದೆಯಲ್ಲಿ ಮುಂದೆ ಆಗಬೇಕಾಗಿರುವ ಪ್ರಾಂತ ವಿಂಗಡಣೆ ಬಗ್ಗೆ ಅನೇಕ ವಿಧಿಗಳನ್ನು ರೂಪಿಸಿದ್ದಾರೆ. ಆ ವಿಧಿಗಳಲ್ಲಿ ಸೂಚಿಸಿರುವಂತೆ ನಮ್ಮ ಸಂಸ್ಥಾನ ಯಾವ ರೀತಿ ವಿಶಾಲ

ವಾಗಬೇಕು, ಅದಕ್ಕೆ ಯಾವ ಯಾವ ಪ್ರದೇಶಗಳು ಸೇರಬೇಕು ಎಂದು ಇದರಲ್ಲಿ ನಮೂದಿಸಿದ್ದಾರೆ. ಈಗಾಗಲೇ ಮಾನ್ಯ ಮುಖ್ಯ ಮಂತ್ರಿಗಳು ಒಂದು ಗಮನಾರ್ಹವಾದ ವಿಚಾರವನ್ನು ನಮ್ಮ ಮುಂದಿಟ್ಟಿದ್ದಾರೆ. ಕರ್ಣಾಟಕ ಅಥವಾ ಬೊಂಬಾಯಿ ಪ್ರಾಂತದ ಕನ್ನಡ ಸದಸ್ಯರು ಮೈಸೂರೆನ್ನತಕ್ಕ ಒಂದು ಹೆಸರಿರುವುದಕ್ಕೆ ಅವರ ವಿರೋಧವನ್ನು ವ್ಯಕ್ತಪಡಿಸುತ್ತಿದ್ದಾರೆಂದು ಹೇಳಿದ್ದಾರೆ. ಆ ಒಂದು ವಿಚಾರವನ್ನು ನಾವು ಯೋಚನೆ ಮಾಡುವಾಗ ಇದು ಬಹಳ ಜನರ ಮನಸ್ಸಿಗೆ ಮುಖ್ಯವಾಗಿ ಮೈಸೂರಿನವರ ಮನಸ್ಸಿಗೆ ಬಹಳ ವ್ಯಥೆಯನ್ನುಂಟುಮಾಡತಕ್ಕ ಸಂಗತಿ. ಏಕೆಂದರೆ ಈ ಮಾನ್ಯ ಸಭೆ ವಿಶಾಲ ಮೈಸೂರು ಎಂಬ ಹೆಸರಿನಿಂದ ಕೂಡಿದ ಕನ್ನಡ ದೇಶದ ಭಾಗಗಳನ್ನು ಒಳಗೊಂಡ ಪ್ರಾಂತವಾಗಬೇಕು ಎನ್ನುವ ಒಂದು ನಿರ್ಣಯವನ್ನು ಪಾಸ್ ಮಾಡಿದೆ. ಅಂದಮೇಲೆ ಈ ಒಂದು ಹೆಸರಿನ ಮೇಲೆ ವಾದ ವಿವಾದಗಳನ್ನು ಹೂಡತಕ್ಕದ್ದು ಅಷ್ಟು ಸಮಂಜಸವಾದುದಲ್ಲವೆಂದು ನನಗಾದರೂ ಅನ್ನಿಸುತ್ತದೆ. ಮೈಸೂರಿನ ಇತಿಹಾಸ, ಮೈಸೂರಿನ ಚರಿತ್ರಾರ್ಹವಾದ ಘಟನೆ ಏನಿದೆ ಅದು ಒಂದು ದೊಡ್ಡ ಹೆಸರನ್ನು ಪಡೆದಂಥ ವಿಚಾರ. ಅದು ಎಲ್ಲರಿಗೂ ಗೊತ್ತಿರತಕ್ಕ ಸಂಗತಿ. ಆದುದರಿಂದ ಒಬ್ಬ ದೊಡ್ಡ ಆಂಗ್ಲ ವಿದ್ವಾಂಸರು ಹೇಳಿರುವಂತೆ "What is in name but in person." ಹೆಸರಿನಿಂದರಲೇ ನಾವು ಸಂತೋಷಪಡತಕ್ಕದ್ದೇ ಆಗಲಿ ಅದನ್ನು ವಿರೋಧಿಸತಕ್ಕದ್ದೇ ಆಗಲಿ ಸೂಕ್ತವಾದದ್ದಲ್ಲ. ಬರತಕ್ಕ ಸದಸ್ಯರು ಯಾರು ಯಾರು ಈ ಮೈಸೂರಿನ ವಿಶಾಲ ಪ್ರದೇಶದಲ್ಲಿ ಬರುತ್ತಾರೋ ಅವರೆಲ್ಲರೂ ಹೆಸರಿನ ಬಗ್ಗೆ ವಾದ ವಿವಾದಗಳನ್ನು ಹೂಡದೆ ಅದನ್ನು ಅಂಗೀಕರಿಸತಕ್ಕದ್ದು ಸೂಕ್ತ ಮತ್ತು ಇದನ್ನು ನೈತಿಕ ದೃಷ್ಟಿಯಿಂದ ನಾವು ಯೋಚನೆ ಮಾಡಬೇಕಾದದ್ದು ಅಗತ್ಯವೆಂದು ಹೇಳಿ ಈ ಮೂಲಕ ಅವರನ್ನು ಪ್ರಾರ್ಥಿಸಿಕೊಳ್ಳುತ್ತೇವೆ.

Zonal Councils ವಿಚಾರವಾಗಿ ಮಾನ್ಯ ಮುಖ್ಯ ಮಂತ್ರಿಗಳು ಏನು ಅಭಿಪ್ರಾಯಪಟ್ಟಿದ್ದಾರೆಯೋ ಅದು ಬಹಳ ಅಗತ್ಯವಾಗಿ ಯೋಚನೆ ಮಾಡಲ್ಪಡತಕ್ಕದ್ದು. ಕೇಂದ್ರಸರ್ಕಾರದ ಒಬ್ಬ ಮಂತ್ರಿ ಅಧ್ಯಕ್ಷರಾಗಿದ್ದು, ಪ್ರಾಂತಗಳ ಮುಖ್ಯ ಮಂತ್ರಿಗಳು ಅದರಲ್ಲಿ ಸದಸ್ಯರಾಗಿದ್ದು ಪ್ಲಾನಿಂಗ್ ಕಮಿಷನ್ನಿನ ಒಬ್ಬ ಸದಸ್ಯರೂ ಅದರಲ್ಲಿ ಸದಸ್ಯರಾಗಿದ್ದು ಆಯಾ ಪ್ರಾಂತಗಳಿಗೆ ಯಾವುದಾದರೂ ವಾದ ವಿವಾದಗಳು ಉದ್ಭವಿಸಿದ ಪಕ್ಷದಲ್ಲಿ ಅವನ್ನು ತೀರ್ಮಾನಿಸುವುದಕ್ಕೆ ಈ ಸಮಿತಿಯನ್ನು ರಚಿಸಿದರೆ ಅದು ಯಾವ ವಿಧದಲ್ಲಿಯೂ ಈ ಪ್ರಾಂತಗಳ ಅಭಿವೃದ್ಧಿಗೆ ಕೆಲಸ ಮಾಡಿದಂತಾಗುವುದಿಲ್ಲ. ಏಕೆಂದರೆ ಹಿಂದೂದೇಶ ಬಹಳ ವಿಶಾಲವಾಗಿದ್ದು ಐದು ಭಾಗಗಳಾಗಿ ವಿಂಗಡಿಸಿದಮೇಲೆ ಕೇಂದ್ರ ಸರ್ಕಾರದ ಒಬ್ಬ ಮಂತ್ರಿ ಒಂದೊಂದು ಭಾಗದ ಸಮಿತಿಯ ಅಧ್ಯಕ್ಷರಾಗಿದ್ದಮೇಲೆ ಆಯಾ ಪ್ರಾಂತಗಳಿಗೆ ಅಗತ್ಯವಾಗಿ ಆಗಬೇಕಾಗಿರುವ ಕೆಲಸ ಕಾರ್ಯಗಳನ್ನು ವಿವೇಚಿಸಿ ಸೂಕ್ತ ಕ್ರಮ ಕೈಗೊಳ್ಳತಕ್ಕ ಅಧಿಕಾರ ಆ ಸಮಿತಿಗೆ ಇಲ್ಲದೆ ಹೋದ ಪಕ್ಷದಲ್ಲಿ, ಅದು ಒಂದು ಸಲಹೆಯನ್ನು ಕೊಡತಕ್ಕ ಸಂಸ್ಥೆಯಾಗಿದ್ದರೆ, ವಾದ ವಿವಾದಗಳನ್ನು ಕೇಳಿ ಸಲಹೆಯನ್ನು ಮಾತ್ರ ಕೊಟ್ಟು ತೀರ್ಮಾನವನ್ನು ಕೇಂದ್ರ ಸರ್ಕಾರಕ್ಕೆ ಬಿಡುವ ಪರಿಸ್ಥಿತಿಯಲ್ಲಿದ್ದರೆ ಅದರಿಂದ ಹೆಚ್ಚಿಗೆ ಸಹಾಯವಾಗುವುದಕ್ಕೆ ಬದಲು ಕೆಲಸ ಕಾರ್ಯಗಳು ಬಹಳ ತಡವಾಗುವುದರಲ್ಲಿ ಸಂಶಯವಿಲ್ಲ. ಆದುದರಿಂದ Zonal Council ಎನ್ನುವ ಈ ಒಂದು ಸಮಿತಿಗೆ ಬೇರೆ ಒಂದು Secretariat ಅಥವಾ ಅಧಿಕಾರ ವರ್ಗದ ಇಲಾಖೆ ಇದ್ದು ಎಲ್ಲ ಕೆಲಸ ಕಾರ್ಯಗಳನ್ನೂ ನೋಡಿಕೊಳ್ಳುವ ಅಧಿಕಾರಿಗಳು, ಮತ್ತು ಅದಕ್ಕೆ ಸಂಬಂಧಪಟ್ಟ ಇತರ ಇಲಾಖಾ ನೌಕರರು ಇದ್ದರೂ ಸಹ, ಮುಖ್ಯ ವಿಚಾರಗಳನ್ನು ಇತ್ಯರ್ಥಮಾಡುವ ಅಂತಿಮ ಅಧಿಕಾರವನ್ನು ಅದಕ್ಕೆ ಕೊಡದೆ ಹೋದ ಪಕ್ಷದಲ್ಲಿ, ಬರಿ ಸಲಹಾ ಸಮಿತಿಯಂತೆ ಮಾಡಿದ ಪಕ್ಷದಲ್ಲಿ, ಅದರಿಂದ ಕೆಲಸ ಕಾರ್ಯಗಳಿಗೆ ಬಹುಶಃ ಬಹಳ ಕುಂದುಂಟಾಗುತ್ತದೆ ಎಂದು ನಾನು ಈ ಸಂದರ್ಭದಲ್ಲಿ ಸೂಚಿಸ ಬಯಸುತ್ತೇನೆ.

ಅಮೇಲೆ ದಕ್ಷಿಣ ಪ್ರದೇಶದ ವಿಚಾರವಾಗಿ ಬಹಳ ಟೀಕೆ ಟಿಪ್ಪಣಿಗಳು ಆಗುತ್ತಿವೆ. Zonal Councils ಎಂದು ಏನು ನಮೂದು ಮಾಡಿದ್ದಾರೋ ಆ ಕೌನ್ಸಿಲ್ಲಿಗೆ ಈ ಒಂದು ಅಧಿಕಾರವನ್ನು ಕೊಟ್ಟರೆ ದಕ್ಷಿಣ ಪ್ರದೇಶದ ಆ ಪರಿಮಿತಿಯಲ್ಲಿ ಯಾವ ಯಾವ ಪ್ರಾಂತಗಳು ಬರಬೇಕೋ ಆ ಪ್ರಾಂತಗಳೆಲ್ಲ ಸೇರುತ್ತವೆ. ಅಂದಮೇಲೆ ಈ ದಕ್ಷಿಣ ಪ್ರದೇಶದ ರಚನೆಗೆ ಒಂದು ಹೆಜ್ಜೆ ಮುಂದೆ ಹೋಗಿ ಯೋಚಿಸುವುದಾದರೆ ಈ ಪ್ರದೇಶದಲ್ಲಿ ಒಂದೇ ಒಂದು ನ್ಯಾಯ ವಿಧಾಯಕ ಸಭೆ ಇರತಕ್ಕದ್ದು ಅಗತ್ಯವಾಗುತ್ತದೆ. ಅದು ಈ ಕೌನ್ಸಿಲ್ಲುಗಳ ಉಸ್ತುವಾರಿಯಲ್ಲಿ ರಾಜ್ಯಾಡಳಿತಗಳಿಗೆ ಸಂಬಂಧಪಟ್ಟಂಥ ಮತ್ತು ಎರಡು ಅಥವಾ ಮೂರು ಪ್ರಾಂತಗಳಿಗೆ ಸಂಬಂಧಪಟ್ಟಂಥ ವಿಚಾರಗಳನ್ನು ಪರಿಶೀಲಿಸುತ್ತದೆ. Zonal Councils ಸಹ ಅದೇ ಕಾರ್ಯವನ್ನು ಮಾಡುತ್ತವೆ. ದಕ್ಷಿಣಪ್ರದೇಶದಲ್ಲಿ ಒಂದು ಶಾಸನ ಸಭೆ ಇದ್ದು ಆ ಶಾಸನ ಸಭೆಯಿಂದ ಕೆಲಸಕಾರ್ಯಗಳು ಆಗುವುದರ ಬದಲು Zonal Councilಗೆ ಐದು ಪ್ರಾಂತಗಳಿಂದ ಬರತಕ್ಕ ಸಲಹೆ ಮತ್ತು ಆ ಪ್ರಾಂತಗಳಿಗೆ ಸಂಬಂಧಪಟ್ಟಂಥ ಯಾವುದಾದರೂ ಒಂದು ಸಮಸ್ಯೆ ಉದ್ಭವಿಸಿದ ಪಕ್ಷದಲ್ಲಿ ಆ ಕೌನ್ಸಿಲ್ ನಿಂದ ಸೂಚನೆ ಅಥವಾ ಸಲಹೆ ಬರಬೇಕು. ಅಂದಮೇಲೆ ಈ Zonal Councils ಮುಂದೆ ದಕ್ಷಿಣ ಪ್ರದೇಶದ ಎಲ್ಲ ಪ್ರಾಂತಗಳಿಗೂ ಸರಿಯಾದ ಆಡಳಿತವನ್ನು ನಿರ್ವಹಿಸತಕ್ಕ ಸಭೆಯಾಗಲು ಸಂಶಯವಿಲ್ಲ. ಕೇರಳ, ಮದರಾಸು, ಆಂಧ್ರ ಮತ್ತು ಮೈಸೂರು ಈ ನಾಲ್ಕು ಪ್ರದೇಶಗಳ ಶಾಸನ ಸಭೆಗಳೂ ನಾಲ್ಕು ಪ್ರಾಂತಗಳ ಮುಖ್ಯ ಮಂತ್ರಿಗಳೂ ಯಾವ ಯಾವ ಪ್ರದೇಶದಲ್ಲಿ ಅವರು ಆಡಳಿತ ನಡೆಸುತ್ತಾರೆಯೋ ಅದಕ್ಕೆ ಬದಲಾಗಿ ಈ ಕೌನ್ಸಿಲ್ ಕೇಂದ್ರೀಕೃತವಾದ ಆಡಳಿತವನ್ನು ನಡೆಸಲು ಸಾಧ್ಯವಾಗುತ್ತದೆ. ದಕ್ಷಿಣಪ್ರದೇಶದ ರಚನೆಯಲ್ಲಿ ಅಡಕವಾಗಿರುವ ತತ್ವ, ನಾವು ಅರ್ಥಮಾಡಿಕೊಂಡಿರುವಂತೆ, ನಾಲ್ಕು ಪ್ರದೇಶಗಳಿಗೂ ಒಂದು ಶಾಸನ ಸಭೆ ಇರತಕ್ಕದ್ದು ಮತ್ತು ಒಂದು ಮಂತ್ರಿಮಂಡಳವಿರತಕ್ಕದ್ದು; ಅದರ ಮುಖೇನ ರಾಜ್ಯಭಾರಕ್ರಮ ನಡೆಸತಕ್ಕದ್ದು; ಈ Zonal Council ನಾಲ್ಕೈದು ಪ್ರಾಂತಗಳ ಕಾರ್ಯಕ್ರಮಗಳನ್ನು ಮತ್ತು ಸಭೆಯ ಸದಸ್ಯರನ್ನು ಸೇರಿಸಿಕೊಂಡು ಸಾಮಾನ್ಯವಾಗಿ ಎಲ್ಲ ಪ್ರಾಂತಗಳಿಗೂ ಸಂಬಂಧಪಟ್ಟಂಥ ಕಾರ್ಯಕಲಾಪಗಳನ್ನು ವಿವೇಚಿಸಿ ಸೂಚನೆ ಕೊಡತಕ್ಕದು, ಅಂದಮೇಲೆ ಈ Zonal Council ಕೆಲಸ ಮಾಡುತ್ತ ಮಾಡುತ್ತ ಒಂದು ಘಟ್ಟದಲ್ಲಿ ನಾಲ್ಕು ಸಂಸ್ಥಾನಗಳು ಒಂದಾಗಿ ಒಂದು ಪ್ರದೇಶವಾಗುವುದರಲ್ಲಿ ಅದಕ್ಕೆ ಒಂದು ರೂಪನ್ನು ಕೊಡುವುದಕ್ಕೆ ಈ Zonal Councils ಕಾರ್ಯಕಲಾಪಗಳನ್ನೂ ಈ ಮಸೂದೆಯಲ್ಲಿ ಅಳವಡಿಸಿದ್ದಾರೆಂದು ನಾನಾದರೂ ಭಾವಿಸಿಕೊಂಡಿದ್ದೇನೆ. ಆದುದರಿಂದ ದಕ್ಷಿಣ ಪ್ರದೇಶವಾಗಬೇಕು ಎನ್ನುವ ತತ್ವವನ್ನು ಪ್ರತಿಪಾದಿಸುವುದೂ, ಈ Zonal Council ಆಡಳಿತದಲ್ಲಿ ಭಾಗವಹಿಸತಕ್ಕ ತತ್ವವನ್ನು ಒಪ್ಪಿಕೊಳ್ಳತಕ್ಕದ್ದೂ ಎರಡೂ ಒಂದೇ. ಆದರೆ ಕಾರ್ಯಕಲಾಪ

(ಶ್ರೀ ಬಿ. ಟಿ. ಕೆಂಪರಾಜ್.)

ಗಳು ಪ್ರಾಂತಗಳಂತೆ ಬೇರೆಬೇರೆಯಾಗಿ ಆಯಾ ಪ್ರಾಂತಗಳಿಗೆ ಸಂಬಂಧಪಟ್ಟಂಥ ಕಾರ್ಯಕಲಾಪಗಳನ್ನು ಅವರವರು ಮಾಡಿಕೊಳ್ಳುತ್ತಾರೆ. ಈ ಪ್ರಾಂತಗಳು ಎಷ್ಟು ದಿವಸ ಬೇರೆ ಬೇರೆಯಾಗಿರಲು ಇಷ್ಟಪಡುತ್ತವೆಯೋ, ಆಯಾ ಪ್ರಾಂತಗಳ ಜನರು ಎಷ್ಟು ದಿವಸ ಬೇರೆಬೇರೆ ಇರಲು ಸಾಧ್ಯವೋ ಅಷ್ಟು ದಿವಸಗಳವರೆಗೆ ಈ ದಕ್ಷಿಣ ಪ್ರದೇಶ ರಚನೆಯು ಸಲಹೆಯನ್ನು ಯಾವ .ರೂಪದಲ್ಲಿಯೂ ಮೇಲಿನಿಂದ ಒತ್ತಡವನ್ನು ಹಾಕಿ ಒಪ್ಪಿಕೊಳ್ಳುವಂತೆ ಮಾಡತಕ್ಕದ್ದು ಸಾಧುವಾದದ್ದಲ್ಲವೆಂದು ಈ ಸಂದರ್ಭದಲ್ಲಿ ನಾನು ಹೇಳಬೇಕಾಗಿದೆ. ಒಂದು ಉದಾಹರಣೆಯನ್ನು ನಾವು ತೆಗೆದುಕೊಂಡು ಪರಿಶೀಲಿಸಿದ್ದಾದರೆ ಸುಮಾರು 150 ವರ್ಷಗಳ ಕಾಲದಿಂದ ಮದರಾಸ್ ಪ್ರಾಂತವಿದ್ದದ್ದೂ ಅದರಲ್ಲಿ ಕನ್ನಡಿಗರೂ, ಆಂಧ್ರರೂ ಮತ್ತು ತಮಿಳರೂ ಒಂದೇ ರಾಜ್ಯದಲ್ಲಿ ಒಂದೇ ಆಡಳಿತದಲ್ಲಿದ್ದುದೂ ಸಹಜ. ಅದರಲ್ಲಿ ಮಲೆಯಾಳಿಗಳೂ ಇದ್ದರೆಂದು ನನ್ನ ಸ್ನೇಹಿತರು ಹೇಳುತ್ತಾರೆ. ಈ ರೀತಿ ನಾಲ್ಕು ಭಾಷೆಗಳನ್ನಾಡುವ ಜನರು ಮದರಾಸು ಆಧಿಪತ್ಯದಲ್ಲಿ 150 ವರ್ಷಗಳಕಾಲವಿದ್ದರೂ ಸಹ ಶ್ರೀಮಾನ್ ಪೊಟ್ಟಿ ಶ್ರೀರಾಮುಲುಅವರು ಆಂಧ್ರಪ್ರಾಂತವನ್ನು ರಚಿಸಬೇಕೆಂದು ಹಟತೊಟ್ಟು ಕಡೆಗೆ ಪ್ರಾಣತ್ಯಾಗ ಮಾಡಿದರು. ಅಂದಮೇಲೆ ಪುನಃ ಈ ನಾಲ್ಕು ಭಾಷೆಗಳನ್ನಾಡುವ ಜನರನ್ನು ಒಟ್ಟಿಗೆ ಸೇರಿಸಿ ರಾಜ್ಯಾಡಳಿತ ನಡೆಸಲು ಒತ್ತಾಯ ಪೂರ್ವಕವಾಗಿ ಒಂದು ಒಪ್ಪಂದಕ್ಕೆ ತರುವುದಕ್ಕೆ ಅಥವಾ ಒಗ್ಗಟ್ಟು ಮಾಡುವುದಕ್ಕೆ ಪ್ರಯತ್ನಿಸತಕ್ಕದ್ದು ತಾತ್ಕಾಲಿಕವಾಗಿ ಸಾರ್ಥಕವಾಗಬಹುದು. ಆದರೆ ಮುಂದೆ ಯಾವುದೋ ಒಂದು ಕಾಲದಲ್ಲಿ ಮತ್ತೆ ಒಡೆದು ಹೋಗತಕ್ಕದ್ದು ಸಹಜ. ಇದು ಚರಿತ್ರೆಯ ಅನುಭವದಿಂದ ನಿರ್ಧಾರವಾಗಿ ಉದ್ಭವಿಸಿರತಕ್ಕ ವಿಷಯ. ಆಂಧ್ರರು ತೆಲಂಗಾಣದೊಡನೆ ಸೇರಲು, ಅವರನ್ನು ಒಪ್ಪಿಸಲು ಮುಂದೆಹೋಗಿ ಅದಕ್ಕಾಗಿ ಎಷ್ಟು ಒತ್ತಾಯ ಮತ್ತು ಪ್ರಯತ್ನಗಳನ್ನು ಮಾಡಿದ್ದಾರೆಯೋ ಹಾಗೆಯೇ ಅವರೂ ನಮ್ಮೊಡನೆ ಸೇರಲು ಮನಸ್ಸುಮಾಡುವುದಾದರೆ ಕನ್ನಡಿಗರೂ ಸಹ ಅವರ ಜೊತೆಯಲ್ಲಿ ಸೇರಲು ಹಿಂತೆಗೆಯುತ್ತಾರೆಂದು ಭಾವಿಸಿಕೊಂಡಿಲ್ಲ. ಆದರೆ ಆ ದೃಷ್ಟಿಕೋಣವು ಅವರಲ್ಲಿಲ್ಲದೆ ಇರುವಾಗ ನಾವಾಗಿ ನಾವು ಅವರನ್ನು ಒತ್ತಡಮಾಡುವುದಾಗಲಿ ಕೇಂದ್ರದವರಿಂದ ಅವರನ್ನು ಬಲವಂತ ಪಡಿಸುವುದಾಗಲಿ ಸಾಧುವಾದ ನೀತಿಯಲ್ಲವೆಂದು ಮಾತ್ರ ಹೇಳಬೇಕಾಗಿದೆ. ಆಂಧ್ರದ ಮುಖ್ಯಮಂತ್ರಿಗಳಾದ ಶ್ರೀಯುತ ಗೋಪಾಲರೆಡ್ಡಿಯವರು ಒಂದು ಸಂದರ್ಭದಲ್ಲಿ ಮಾತನಾಡುತ್ತ, ನಾವು ದ್ವಿಭಾಷಾ ರಾಷ್ಟ್ರವನ್ನು ರಚಿಸಬೇಕೆನ್ನುವುದು ಕೇಂದ್ರ ಸರ್ಕಾರದ ಅಭಿಪ್ರಾಯವಾದರೆ ಅಥವಾ ಕಾಂಗ್ರೆಸ್ ಮುಖಂಡರ ಅಭಿಪ್ರಾಯವಾದರೆ ಮಹಾರಾಷ್ಟ್ರದೊಡನೆ ಸೇರಲು ಸಿದ್ಧರಾಗಿದ್ದೇವೆ ಎಂದು ಹೇಳಿದ್ದಾರೆ. ಅವರು ಮೈಸೂರು ಅಥವಾ ಕನ್ನಡಿಗರ ಜೊತೆಯಲ್ಲಿ ನಾವು ಸೇರಲು ಸಿದ್ಧರಿದ್ದೇವೆಂದು ಹೇಳಿದ್ದಪಕ್ಷದಲ್ಲಿ ನಾವೂ ಸಹ ಅದನ್ನು ತೀವ್ರವಾಗಿ ಯೋಚನೆ ಮಾಡಬಹುದಾಗಿತ್ತು. ಈಗ ಕೇರಳ ಮೈಸೂರಿನ ಜೊತೆಯಲ್ಲಿ ಸೇರಿಕೊಳ್ಳಲು ಇಷ್ಟಪಟ್ಟಿತ್ತು ಎಂದು ನಮ್ಮ ನಾಯಕರು ಹೇಳಿದರು. ಕೇರಳದವರು ಮೈಸೂರಿನ ಜೊತೆಗೆ ಆಗಲಿ, ಮದರಾಸು ಪ್ರಾಂತದ ಜೊತೆಗೆ ಆಗಲಿ ಸೇರಲು ಬಯಸಿದ್ದರೆ ಅಥವಾ ಸೇರುವುದಕ್ಕೆ ಒಂದು ಹೆಜ್ಜೆಯನ್ನು ಮುಂದೆ ಇಟ್ಟಿದ್ದೇ ಆಗಿದ್ದರೆ ಇವೊತ್ತಿನ ದಿವಸ ಕೇರಳದಲ್ಲಿ ಯಾವ ಪರಿಸ್ಥಿತಿಯಿದೆಯೋ ಅದು ಸಂಭವಿಸುವುದಕ್ಕೆ ಈ ಒಂದು ವಿಚಾರವೇ ಬಹುಶಃ ಮುಖ್ಯಕಾರಣವಾಗಿರಬಹುದು ಎಂದು ನಾನು ಭಾವಿಸುತ್ತೇನೆ. ಆದುದರಿಂದ ಈ ದಕ್ಷಿಣ ಪ್ರದೇಶದ ವಿಚಾರವೇನಿದೆ ಆ ವಿಚಾರವನ್ನು ಯೋಚನೆ ಮಾಡುವುದಕ್ಕೆ ಬಹಳ ಕಾಲಬೇಕು. ಮೊದಲು ಪ್ರತಿಯೊಬ್ಬ ವ್ಯಕ್ತಿಯ ಮನಸ್ಸನ್ನೂ ಮತ್ತು ಮಿಡಿಯುವ ನಾಡಿಯನ್ನೂ ಪರೀಕ್ಷಿಸತಕ್ಕದ್ದು ಅತ್ಯಗತ್ಯ. ಯಾವಾಗ ಬಹುತೇಕ ಜನರ ಅಭಿಪ್ರಾಯಕ್ಕೆ ವಿರೋಧವಾಗಿ ಒತ್ತಡದಿಂದ ಬಲವಂತವಾಗಿ ಯಾವುದನ್ನು ಹೊರಿಸಲು ಪ್ರಯತ್ನಪಡುತ್ತೇವೆಯೋ ಅಂಥವರ ಆಗು ಹೋಗುಗಳನ್ನು ಈಗಾಗಲೇ ಮನಗಂಡಿದ್ದೇವೆ. ಒರಿಸ್ಸ, ಬೊಂಬಾಯಿ, ಮತ್ತು ಬಿಹಾರ್ ಪ್ರಾಂತಗಳಲ್ಲಿ ನಡೆದಂಥ ಘಟನೆಗಳು ನಮ್ಮ ಮುಂದೆ ಇವೆ. ಇವು ಮರೆಯಲಾರದಂಥ ಘಟನೆಗಳು. ಆದುದರಿಂದ ದಕ್ಷಿಣ ಪ್ರದೇಶದ ವಿಚಾರವೇನಿದೆ, ದಕ್ಷಿಣ ಪ್ರದೇಶಕ್ಕೆ ಒಂದು Zonal Council ಇರುವಂತೆ ದಕ್ಷಿಣ ಪ್ರದೇಶದ ರಚನೆಯನ್ನು ಕಾರ್ಯರೂಪಕ್ಕೆ ತಂದು, . ಒಂದೇ ಒಂದು ಶಾಸನ ಸಭೆಯನ್ನು ಮಾಡಿ ಒಂದೇ ಒಂದ ಮಂತ್ರಿಮಂಡಲವನ್ನು ಮಾಡಿ ರಾಜ್ಯಾಡಳಿತ ನಡೆಸತಕ್ಕ ಒಂದು ಸೂಚನೆ ಏನಿದೆ ಅದು ಸದ್ಯಕ್ಕೆ ಅಷ್ಟಾಗಿ ಸಾಧುವಾದದ್ದಲ್ಲವೆಂದು ಭಾವಿಸಿಕೊಂಡಿದ್ದೇನೆ.

1 P.M.

ಈಗ ಸಂಸ್ಥಾನಗಳ ಅಧಿಕಾರಿಗಳ ವಿಚಾರವಾಗಿ ಇಲ್ಲಿ ಅನೇಕ ಅಭಿಪ್ರಾಯಗಳನ್ನು ಸೂಚಿಸಿದ್ದಾರೆ. ಅದರ ಬಗ್ಗೆ ನಾನು ಹೆಚ್ಚಾಗಿ ಹೇಳಬೇಕಾಗಿಲ್ಲ. ಕಾರಣ ಯಾವ ಸಂಸ್ಥಾನದಲ್ಲೇ ಆಗಲಿ ಆ ಸಂಸ್ಥಾನದಲ್ಲಿ ಕೆಲಸ ಮಾಡುವ ನೌಕರರು ಸಂಬಳ ಸಾರಿಗೆಗಳ ವಿಚಾರವಾಗಿ ಆ ಸಂಸ್ಥಾನದ ಶಾಸನಸಭೆ ಮತ್ತು ಸರ್ಕಾರ ತೀರ್ಮಾನಮಾಡುವ ಒಂದು ಪರಿಮಿತಿಗೆ ಒಪ್ಪಿಕೊಳ್ಳಬೇಕಾಗುತ್ತದೆ. ಆ ರೀತಿ ಒಪ್ಪಿಕೊಳ್ಳದೆ ಇರತಕ್ಕ ಅಧಿಕಾರಿಗಳಿಗೆ ಬೇರೆ ಕಡೆ ಕೆಲಸಮಾಡುವ ಅವಕಾಶವಿದೆಯೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಇದು ಸರಿಯಾದ ಸೂಚನೆ. ಏಕೆಂದರೆ ಅಧಿಕಾರಿಗಳ ಪ್ರಶ್ನೆ ಬಂದಾಗ ಅವರ ಸಂಬಳ ಸಾರಿಗೆಗಳನ್ನು ನಮ್ಮ ದೇಶದ ಉತ್ಪತ್ತಿಯೇನಿದೆಯೋ ಅದಕ್ಕೆ ತಕ್ಕಂತೆ ನಾವು ಕೊಡತಕ್ಕದ್ದು ಅಗತ್ಯ. ಅದನ್ನು ಮಿತಿಮೀರಿ ನಮಗೆ ಕೊಡಬೇಕೆಂಬ ವಾದವನ್ನು ಅವರು ಹೂಡುವುದು ಸರಿಯೆ, ತಪ್ಪೆ ಎಂದು ಯೋಚನೆ ಮಾಡಬೇಕು. ಆದ್ದರಿಂದ ನೌಕರರ ಸಂಬಳಸಾರಿಗೆಗಳ ಬಗ್ಗೆ ನಾವು ಅಂತಿಮ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಮೊದಲು ಅದನ್ನು ಆ ಸಂದರ್ಭದಲ್ಲಿ ಯೋಚನೆ ಮಾಡತಕ್ಕದ್ದು ಸೂಕ್ತ ಎಂದು ಈ ಸಂದರ್ಭದಲ್ಲಿ ಸೂಚಿಸಿ ನಾನು ಈ ಮಸೂದೆಯನ್ನ ಸ್ವಾಗತಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—Such of those members who desire to send amendments to the S.R. Bill may do so until 3 P.M. on Monday, the 2nd April.

Now the House will rise and meet at 12 Noon on Monday.

The House adjourned at Five Minutes past One of the Clock to meet again at Twelve of the Clock on Monday, 2nd April 1956.

WD 2896—GPB—550—26-7-56